# ಪಂಚಕಲ್ಯಾಣದ ಕುದುರೆ



ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಬೆಂಗಳೂರು

ಪ್ರಸಾರ ಮಾಲೆಯ ಪ್ರಕಟಣೆ-4

# ಪಂಚಲೋಹದ ಕುದುರೆ

## ಜನಪದ ಕಥೆಗಳ ಸಂಕಲನ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಬೆಂಗಳೂರು

PANCHALOHADA KUDURE—A Collection of Kannada folktales, collected by different collectors. Published by Karnataka Janapada and Yakshagana Akademy, 14/3, Canara Finance Corporation Building, Nrupatunga Road, Bangalore-560 002. pp. 104+VII

Price : Rs. 1-00.

First Edition : 1984

ಹಕ್ಕುಗಳನ್ನು ಕಾದಿರಿಸಲಾಗಿದೆ

ಬೆಲೆ : ಒಂದು ರೂಪಾಯಿ

ಮುದ್ರಕರು :
ಅಶ್ವಥ್ ಪ್ರಿಂಟರ್ಸ್
ಬೆಂಗಳೂರು-82

# ಮುನ್ನುಡಿ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಚಟುವಟಿಕೆಗಳಲ್ಲಿ ಗ್ರಂಥ ಪ್ರಕಟಣೆಯ ಯೋಜನೆಯನ್ನೂ ಹಮ್ಮಿಕೊಂಡು ಈಗಾಗಲೇ ಮೂರು ಕೃತಿಗಳನ್ನು ಹೊರ ತರಲಾಗಿದೆ. 'ಪಂಚಲೋಹದ ಕುದುರೆ' ಅಕಾಡೆಮಿ ಪ್ರಕಟಿಸುತ್ತಿರುವ ನಾಲ್ಕನೆಯ ಕೃತಿ. ಜನಪ್ರಿಯ ಮಾಲೆಯ ಈ ಕೃತಿಗಳನ್ನು ಪ್ರಕಟಿಸುವಲ್ಲಿ ವಿಶಿಷ್ಟ ಉದ್ದೇಶಗಳನ್ನು ಇಟ್ಟುಕೊಳ್ಳಲಾಗಿದೆ. ಇದು ಸುಲಭ ಬೆಲೆಯಲ್ಲಿ ಓದುಗರಿಗೆ ಲಭ್ಯವಾಗಬೇಕು; ಆಸಕ್ತಿಯನ್ನು ಕೆರಳಿಸುವಂಥ ಜನಪದ ಸಾಹಿತ್ಯ ಪ್ರಕಾರವನ್ನೊಳಗೊಂಡಿರಬೇಕು; ಸಾಧ್ಯವಾದ ಮಟ್ಟಿಗೂ ಕರ್ನಾಟಕದ ಎಲ್ಲ ಭಾಗಗಳ ಸಾಹಿತ್ಯವನ್ನೂ ಒಳಗೊಂಡಿರಬೇಕು; ಆಕರ್ಷಕ ಮುಖಪುಟದೊಡನೆ ಹೊರ ಬರಬೇಕು – ಮುಂತಾದ ಈ ಉದ್ದೇಶಗಳ ಹಿನ್ನೆಲೆಯಲ್ಲಿ ಈ ಕೃತಿಗಳು ಹೆಚ್ಚು ಜನರನ್ನು ಮುಟ್ಟಲು ಸಾಧ್ಯವಾಗುವಂತೆ 5000 ಪ್ರತಿಗಳನ್ನು ಅಚ್ಚು ಹಾಕಿಸಲಾಗುತ್ತಿದೆ. ಒಂದೊಂದು ಕೃತಿಯೂ ಒಂದೊಂದು ಜನಪದ ಸಾಹಿತ್ಯ ಪ್ರಕಾರವನ್ನು ಪ್ರತಿನಿಧಿಸುವಂತೆ ನೋಡಿಕೊಳ್ಳಲಾಗಿದೆ. ಜನಪದ ಗೀತೆ, ಶಿಶುಪ್ರಾಸ, ಗಾದೆಗಳಿಗೆ ಸಂಬಂಧಪಟ್ಟಂತೆ ಮೂರು ಕೃತಿಗಳನ್ನು ಪ್ರಕಟಿಸಿದ ಮೇಲೆ ಈ ವರ್ಷ 'ಜನಪದ ಕಥೆ'ಗಳಿಗೆ ಸಂಬಂಧಪಟ್ಟ ಈ ಕಿರು ಹೊತ್ತಗೆಯನ್ನು ಹೊರ ತರಲಾಗುತ್ತಿದೆ.

ಜನಪದ ಕಥೆಗಳಿಗೆ ಸಂಬಂಧಪಟ್ಟಂತೆ ಕರ್ನಾಟಕದಲ್ಲಿ ಈಗಾಗಲೇ ಸಾಕಷ್ಟು ಕೆಲಸ ನಡೆದಿದೆ. ನಾಡಿನ ವಿವಿಧ ಭಾಗಗಳಿಂದ 60-70 ಸಂಕಲನ

ಗಳು ಹೊರ ಬಂದಿವೆ. ಜನಪದ ಕಥೆಯು ಎಲ್ಲ ವರ್ಗಗಳಿಗೂ ಸಂಬಂಧಪಡುವ ಅಪೂರ್ವ ಕಥೆಗಳನ್ನು ನಮ್ಮ ವಿದ್ವಾಂಸರು ಗುರುತಿಸಿ ಪ್ರಕಟಿಸಿದ್ದಾರೆ. ಕಳೆದ ಎರಡು ದಶಕಗಳಲ್ಲಿ ಕಥೆಗಳ ಸಂಗ್ರಹ ವ್ಯಾಪಕವಾಗಿ ನಡೆದು ಅಪಾರ ಸಾಮಗ್ರಿ ನಮಗೆ ಲಭ್ಯವಾಗುವಂತಾಗಿದೆ. ಭಾರತದ ಇನ್ನಾವ ರಾಜ್ಯದಲ್ಲೂ ಜನಪದ ಕಥೆಗಳ ಸಂಗ್ರಹ ಇಷ್ಟು ಸಮಗ್ರವಾಗಿ ನಡೆದಿಲ್ಲ ಎಂಬುದು ಸ್ಪಷ್ಟ. ಅಲ್ಲದೆ ಜನಪದ ಕಥೆಗಳ ಸಂಗ್ರಹಕ್ಕಷ್ಟೇ ನಮ್ಮ ಕೆಲಸ ಸೀಮಿತವಾಗದೆ ಅಧ್ಯಯನ ಕಾರ್ಯವೂ ಚೆನ್ನಾಗಿ ನಡೆಯುತ್ತಿರುವುದು ಗಮನಾರ್ಹ ವಿಷಯವಾಗಿದೆ. ಜನಪದ ಕಥೆ ಮತ್ತು ಪುರಾಣಗಳ ಮೇಲೆ ಕೆಲಸ ಮಾಡಿ ಮೈಸೂರು ವಿಶ್ವವಿದ್ಯಾನಿಲಯದಿಂದ ಮೂರು ಮಂದಿ ತರುಣ ವಿದ್ವಾಂಸರು ಪಿ.ಎಚ್.ಡಿ. ಪದವಿಗಳನ್ನು ಪಡೆದಿದ್ದಾರೆ. ಗುಲ್ಬರ್ಗ ಜಿಲ್ಲೆಯ ಜನಪದ ಕಥೆಗಳ ಮೇಲೆ ಕೆಲಸ ಮಾಡಿ ಗುಲ್ಬರ್ಗ ವಿಶ್ವವಿದ್ಯಾನಿಲಯದ ಒಬ್ಬ ತರುಣ ವಿದ್ವಾಂಸರು ಪಿ.ಎಚ್.ಡಿ. ಪದವಿ ಪಡೆದಿದ್ದಾರೆ. ಜಾನಪದಕ್ಕೆ ಸಂಬಂಧಪಟ್ಟಂತೆ ಈವರೆಗೆ ಇಪ್ಪತ್ತಕ್ಕೂ ಹೆಚ್ಚು ಮಂದಿ ಕೆಲಸ ಮಾಡಿ ಪಿ.ಎಚ್.ಡಿ. ಪದವಿಗಳನ್ನು ಪಡೆದಿರುವುದು ಒಂದು ದೊಡ್ಡ ಸಾಧನೆ ಎಂದು ಹೇಳಬಹುದು. ಈ ಇಪ್ಪತ್ತು ಮಹಾ ಪ್ರಬಂಧಗಳಲ್ಲಿ, ನಾಲ್ಕು ಮಹಾ ಪ್ರಬಂಧಗಳು ಜನಪದ ಕಥೆಯ ಕ್ಷೇತ್ರಕ್ಕೆ ಸೇರಿರುವುದು ಒಂದು ಗಮನಾರ್ಹ ಅಂಶ.

ಜನಪದ ಕಥೆ ಜನಪದ ಸಾಹಿತ್ಯದ ಒಂದು ಪ್ರಧಾನವಾದ ಅಂಗ. ಅತ್ಯಂತ ಮನೋಹರವಾದ ಭಾಗವೂ ಹೌದು. ಸಾವಿರಾರು ವರ್ಷಗಳಿಂದ ಆಡುಮಾತಿನಲ್ಲಿ ಉಳಿದು ಬಂದ ಈ ಕತೆಗಳು ಕಲ್ಪನಾ ರಮ್ಯತೆಯಿಂದ ಕೂಡಿರುತ್ತವೆ. ಆಡುಮಾತಿನಲ್ಲಿ ಇವು ಮೂಡುವುದರಿಂದ ಜೀವಂತ ಭಾಷೆಯ ಬಿಗಿಯನ್ನೂ, ಬೆಡಗನ್ನೂ ಇಲ್ಲಿ ಕಾಣಬಹುದಾಗಿದೆ. ಅಲ್ಲದೆ ಪ್ರತಿ ಕತೆಗಾರನೂ ತನ್ನ ಅನುಭವ, ಜಾಣ್ಮೆಗಳನ್ನು ಎರಕ ಹೊಯ್ದು ಒಂದೊಂದು ಕತೆಯೂ ಆಕರ್ಷಕವಾದ ಶೈಲಿಯಲ್ಲಿ ಅವತರಿಸುವಂತೆ ನೋಡಿಕೊಳ್ಳುತ್ತಾನೆ. ಆದುದರಿಂದ ಆ ಮಾತಿನ ಆಡು ಶೈಲಿಯನ್ನು ಕಾಪಾಡಿಕೊಳ್ಳುವುದು ಅತ್ಯಗತ್ಯ. ಕತೆಗಾರನ ನಿರೂಪಣಾ ಕ್ರಮವನ್ನೂ ಉಳಿಸಿ



ಕೊಂಡಾಗ ಮಾತ್ರ ಜನಪದ ಕಥೆಗಳಿಗೆ ಸಹಜತೆ ಬರುತ್ತದೆ. ಆಯಾ ಪ್ರದೇಶದ ಉಪ ಭಾಷೆಯಲ್ಲಿ ಈ ಕಥೆಗಳನ್ನು ಕೊಟ್ಟಾಗ ಕತೆಗಳನ್ನು ಓದುವವರು ಸ್ವಲ್ಪ ಮಟ್ಟಿನ ಭಾಷೆಯ ತೊಡಕನ್ನು ಅನುಭವಿಸುವುದು ಸಹಜ. ಆದರೂ ಕತೆಯ ಮೂಲ ಸೌಂದರ್ಯವನ್ನು ಕಾಪಾಡುವ ದೃಷ್ಟಿಯಿಂದ ಇದು ಅನಿವಾರ್ಯ. ಜನಪದ ಕಥೆ ಅದರ ಭಾಷೆ, ಶೈಲಿ, ನಿರೂಪಣಾ ತಂತ್ರ, ಕಥನ ಅಂಶ, ರಚನಾ ತಂತ್ರ ಇಷ್ಟು ದೃಷ್ಟಿಗಳಿಂದಲೂ ಮುಖ್ಯವಾಗಿರುತ್ತದೆ ಎಂದಾಗ ಈ ಯಾವ ಅಂಗವೂ ಊನವಾಗದಂತೆ ನೋಡಿಕೊಳ್ಳುವುದು ಪ್ರತಿಯೊಬ್ಬ ಸಂಗ್ರಾಹಕರ ಕರ್ತವ್ಯ. ಈ ಸಂಕಲನದ ಕತೆಗಳಲ್ಲಿ ಈ ಮೂಲಾಂಶಗಳನ್ನು ಉಳಿಸಿಕೊಳ್ಳಲಾಗಿದೆ. ಮುಂದಿನ ಸಂಗ್ರಾಹಕರು ಈ ಕ್ರಮವನ್ನು ಅನುಸರಿಸಲು ಇದರಿಂದ ಸಹಾಯಕವಾಗುತ್ತದೆ.

ಜನಪದ ಸಾಹಿತ್ಯವನ್ನು ಸಂಗ್ರಹಿಸುವಾಗ ಅದನ್ನು ಹಾಡಿದ ಅಥವಾ ಹೇಳಿದ ವ್ಯಕ್ತಿಗಳ ವಿವರವನ್ನೂ ಕೊಡುವುದು ಅತ್ಯಗತ್ಯ. ಸಂಗ್ರಹ ದಿನಾಂಕ, ಸ್ಥಳ, ವಸ್ತುವಿನ ವಯಸ್ಸು, ಜಾತಿ, ಅವರ ಸ್ಥಿತಿಗತಿ, ಅವರು ಕತೆ ಮುಂತಾದವನ್ನು ಕಲಿತ ಹಿನ್ನೆಲೆ, ಆಯಾ ಸಾಹಿತ್ಯದ ನಿರೂಪಣೆಯ ವಿಶಿಷ್ಟ ಸಂದರ್ಭಗಳು, ಅದಕ್ಕೆ ಸಂಬಂಧಿಸಿದ ಆಚಾರ ವಿಚಾರಗಳನ್ನೂ ಮುಂತಾದುವನ್ನೂ ಸಂಗ್ರಹಿಸಬೇಕು. ಇದು ಆಯಾ ಸಾಹಿತ್ಯಕ್ಕೆ ಪೂರಕ ಸಾಮಗ್ರಿಯಾಗಿ ಮುಂದಿನ ಅಧ್ಯಯನಕ್ಕೆ ನೆರವಾಗುತ್ತದೆ.

ಪ್ರಕೃತ ಸಂಕಲನದಲ್ಲಿ ಹೆಚ್ಚು ಕತೆಗಳನ್ನು ಕೊಡಲು ಸಾಧ್ಯವಾಗಿಲ್ಲ. ಕರ್ನಾಟಕದ ಬೇರೆ ಬೇರೆ ಭಾಗದ ಸಂಗ್ರಾಹಕರಿಂದ ಕತೆಗಳನ್ನು ಈ ಸಂಕಲನಕ್ಕಾಗಿ ತರಿಸಿಕೊಂಡರೂ ಎಲ್ಲ ಕತೆಗಾರನೂ ಮೇಲಿನ ದೃಷ್ಟಿಯಿಂದ ಪ್ರಕಟಣ ಯೋಗ್ಯವಾಗಿರಲಿಲ್ಲ. ಆದರೂ ಇಲ್ಲಿ ಸಂಕಲಿತವಾಗಿರುವ ಕತೆಗಳು ಸಾಕಷ್ಟು ವೈವಿಧ್ಯಪೂರ್ಣವಾಗಿವೆ ಎಂಬುದರಲ್ಲಿ ಅನುಮಾನವಿಲ್ಲ.

ಈ ಸಂಕಲನದ ಮುದ್ರಣ ಕಾರ್ಯದ ಪೂರ್ಣ ಜವಾಬ್ದಾರಿಯನ್ನು ಹೊತ್ತು, ಕರಡು ತಿದ್ದುವುದರಿಂದ ಹಿಡಿದು ಉಳಿದ ಸಂಪಾದನಾ ಕಾರ್ಯವನ್ನೂ ನೋಡಿಕೊಂಡವರು ಅಕಾಡೆಮಿಯ ಸ್ಥಾಯಿ ಸಮಿತಿಯ ಸದಸ್ಯರೂ,

ಶ್ರೇಷ್ಠ ಜಾನಪದ ವಿದ್ವಾಂಸರೂ ಆದ ಶ್ರೀ ಹ. ಕ. ರಾಜೇಗೌಡರು. ಇದನ್ನು ಇಷ್ಟು ಶೀಘ್ರವಾಗಿ ಅಂದವಾಗಿ ಮುದ್ರಿಸಿ ಕೊಟ್ಟವರು ಅಶ್ವಥ್ ಪ್ರಿಂಟರ್ಸ್‌ನ ಮಾಲಿಕರಾದ ಶ್ರೀ ದಿವಾಕರ ಅವರು. ಈ ಇಬ್ಬರಿಗೂ ಅಕಾಡೆಮಿಯ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಜೀ. ಶಂ. ಪರಮಶಿವಯ್ಯ
ಅಧ್ಯಕ್ಷರು (ಹಂ)
ಕರ್ನಾಟಕ ಜಾನಪದ ಮತ್ತು ಯಕ್ಷಗಾನ
ಅಕಾಡೆಮಿ ಪರವಾಗಿ

ಬೆಂಗಳೂರು
೯-೧೧-೧೯೮೪

# ಪರಿವಿಡಿ


1. ಅಣ್ಣ-ತಂಗಿ-ಅತ್ಗೆ 1
2. ದೇವೇಂದ್ರ ಲೋಕದ ದೇವಕನ್ಯೆ 4
3. ಕೆಪ್ಪರ ಎರಡು ಕತೆಗಳು 10
4. ತೊಡೆ ಮ್ಯಾಲೆ ಗಂಡ ತೋಳು ಮ್ಯಾಲೆ ಮಿಂಡ 15
5. ಸಾವಿರದ ಬುದ್ಧಿ 22
6. ಕಿಲಾಡಿ ಭಾವ 30
7. ಸ್ವರ್ಗಕ್ಕೆ ಸವಾರಿ 34
8. ಕದ್ಲೆ ರಾಯ್ನ ಸೊಸೆ 39
9. ಕತ್ತೆ, ಹುಲಿ ಮತ್ತು ಮುಸುಪ್ಪ 44
10. ಏಳು ಮಂದಿ ರಾಜಕುಮಾರಿಯರು
ಮತ್ತು ಅರಶಿನದ ಗಡ್ಡೆಯ ಕಥೆ 47
11. ಬುಡ್ಡನ ಕತೆ 55
12. ಅಪ್ಪಗ ತಕ್ಕ ಮಗ 60
13. ಮೈಗಳ್ಳ ಮೋಸಗಾರರು 64
14. ಪಂಚಲೋಹದ ಕುದುರೆ 68
15. ದೇವರು ಇದ್ದಾನ 79
16. ನಾಗರತ್ನ 87

# ಅಣ್ಣ-ತಂಗಿ-ಅತ್ಗೆ

ಒಂದೂರಲಿ ಅಣ್ಣ-ತಂಗಿ ಇಬ್ಬರಾಳಿದ್ದರಂತ ಕಂಡ್ಯ; ತಂಗಿಯು ಮದ್ವೆ ಮಾಡಿಕೊಟ್ರು. ಅವನ್ಗೂ ಮದ್ವೆ ಆಗಿತ್ತು. ತಾಯಿ-ತಂದೆ ಯಾರೂ ಇರ್ನಿಲ್ಲ. ತಂಗಿಗೆ ಪೂರ್ತಿ ಬಡಸ್ತನ. ಅಣ್ಣನ್ಮನ್ಗೆ ಬಂದ್ಲು. ಬತ್ತ ರಾಗಿ ಕೇಳಿದ್ಲು; ಅತ್ಗೆ ಏನಂದ್ಲು, ಅವರು ಆರ್ಕಟ್ಕೆಂಡ್ ಹೋಗವ್ರೆ. ಅವ್ರು ಬರವತ್ಗೆ ಬತ್ತ ಕುಟ್ಟನ ಬನ್ನಿ ಅಂದ್ಲು. ಒಂದ್ಕೊಟ್ಣ ಭತ್ತ ಕುಟ್ಟಿಸಿದ್ಲು. ಸಂದೂ ಭತ್ತ ಕುಟ್ಟಿದ್ಲು. ಸಾಯಂಕಾಲ ಹೊಂಟ್ಲು ಊರಿಗೆ. ತೌಡ ಗಂಟ್ಕಟ್ಟಿ ತಗಂಡೋಗಿ ಊರಿಗೆ ಅಂತ ಅತ್ಗೆ ಕೊಟ್ಲು; ಕೆರೆ ಏರಿ ಮ್ಯಾಗೆ ಹೋತಿದ್ಲು. ಅಣ್ಣ ಆರ್ಬುಟ್ಕಂಡು ಅದೇ ಏರಿ ಮ್ಯಾಲೆ ಅಡ್ಡಬಂದ. ಎಲ್ಗೋತಿಯಾ ಮಗ[1] ಅಂದ. ಬಾ ಹೋಗುವಂತೆ ಅಂದ. ಇಲ್ಲ ಕನಣ್ಣ ಹೋಗ್ಬೇಕು ಅಂದ್ಲು. ಹೊಂಟ್ಲು. ಎಲ್ಲಿ ನಿಮ್ಮತ್ಗೆ ಏನ್ಕೊಟ್ಟವ್ಳೆ ಅಂತ ಬಿಚ್ದ. ತೌಡಾತು. ಇನ್ನೇನ್ಮಾಡ್ತಾಳೆ ಬಡತನ, ಮಕ್ಕಳು ಹಸ್ಕ ಬೀಳ್ತವೆ ಅಂತ ಹೇಳಿ ತಗಂದು ಹೋತಯಿದ್ಲು. ತೌಡ ಕೆರಿಗೆ ಸುರ್ದ. ನಡಿ ನಾನು ಬತ್ತಿನಿ ಅಂತವ ಮನಿಗ್ಬಂದ. ಬಂದು ನೇಗಿಲು ನೊಗ ಇಟ್ಟಿ ಕೈಕಾಲಿಗೆ ನೀರಿಸ್ಕಂಡು ಒಳಿಕೋದ. ಹೋಗ್ತಿದ್ದಂಗೆಯಾ ನಿಮ್ಮಪ್ಪನ್ಮನೆಲ್ಲವ ಬೆಂದು ಹುಟ್ಟಿದ ನಿರ್ವಾಣಕೆ ಇದಾರಂತೆ ಕನೆ[2] ಅಂದ. ಅಯ್ಯೋ ಬನ್ನಿ ಭತ್ತ ರಾಗಿ ಕೊಟ್ಬನ್ನಿ ಅಂದ್ಲು. ಹಂಗಾರೆ ತುಂಬು ಚೀಲ್ಕೆ ಎಲ್ಲನುವೆ. ಗಾಡಿ ಹೊಡ್ಕ ಹೋತಿನಿ ಅಂದ. ರಾಗಿ ಭತ್ತ ಎಲ್ಲನು ಮೂಟೆ ಕಟ್ಕೆಂಡು ಹೊಂಟ. ದಂಡ್ನ ಕೊಟ್ಲು, ಹೋಗಿ ಬಿರ್ನೆ ನಿಮ್ಮ ದಮ್ಮಯ್ಯ ಅಂತಿನಿ ಅಂತ ಕಳ್ಸಿದ್ಲು.

ಎಲ್ಲ ತಗ ಹೋದ ತಂಗಿ ಮನ್ಗೆ ಹಾಕ್ದ. ಬಂದೋನು ನಿಮ್ಮಪ್ಪನು ನಿಮ್ಮವ್ವನು ಬರಕೆ ಹೇಳವ್ರೆ ಕಣೆ ಅಂದ. ಹಂಗಾರೆ ಹೋಗನ ಅಂದ್ಲು. ಸಾಮಾನು ಏನೇನ್ಬೇಕು ಅಂದ. ತಿಂಡಿ ಸಾಮಾನೆಲ್ಲನು ತರಗಿ ಅಂತ ಕಳಿಸಿದ್ಲು. ತಂದ್ಕೊಟ್ಟ. ಪುಣ್ಯಾತ್ಗಿತ್ತಿ ಮುಂಡೆ ಬೆಳ್ಗ ಎಲ್ಲನು ಬೇಸಿದ್ಲು. ಹೋಳ್ಗಿ, ಒಬ್ಬಿಟ್ಟು, ವಡೆ ಕಜ್ಜಾಯ ಎಲ್ಲನು ಬೇಸಿದ್ಲು. ನನ್ಗೊಂದೀಟ ಕೊಟ್ಟಾಳಲ್ವ ಅಂತ ಕೂರದು ಏಳದು ಮಾಡ್ತ ಇದ್ದ. ಗಂಡ್ಗ ಒಂದೀಟ ಕೊಡ್ನೆ ಇಲ್ಲ. ಹೊಸ ಕುಕ್ಕಿಗೆ ತುಂಬಿದ್ಲು. ಬಿಳಿಬಟ್ಟೆಲಿ ಬಾಯ್ಕಟ್ಟಿ ಅಟ್ಟದ ತುದಿಗೆ ಇಟ್ಟಿದ್ಲು. ಇನ್ನ ನೀರ್ತರ್ಬೇಕಲ್ಲ ಕೆರೆ ದೂರ. ನೀರೊತ್ಗ ಬರಗಿ ಅಂದ್ಲು. ನಾನೋಗಕಿಲ್ಲ. ನೀನೇ ಹೊತ್ಗ ಬರಗು ಅಂದ. ನೀರ್ಗ ಹೋದ್ಲು ಒಂದು ಮೋಟ್ಬರಲ[3] ತಗಂದ ಮುಂಟಿ ಮ್ಯಾಕೋದ[4] ಒಣ್ಗದ್ದ ಇರ್ತಿತಲ ಮನುಷ್ಯರ್ದ್ದ[5] ಎಲ್ಲನು ಗುಡಿಸ್ಕಂದ, ತುಂಬ್ಕೆ ಬಂದ. ತಿಂಡಿ ಎಲ್ಲನು ತಗಂದ. ಅದ್ಕೆ ಸುರ್ದ್ದ ಹಂಗೆ ಬಾಯ್ಕಟ್ಟಿ ಇಟ್ಟ. ನೀರೊತ್ಗ ಬಂದ್ಲು. ಮಡಿ ಶ್ಯಾಲ್[6] ಉಟ್ಕಂದ್ಲು. ರವ್ಕೆ ಇಕ್ಕಂದ್ಲು. ಹೊತ್ಗ ಹೊಂಟ್ಲು. ಜ್ವಾಕೆ ಕನಿ ಮನೆ ಕಡೆಯ ಅಂದ್ಲು. ಅಪ್ಪನ ಮನ್ಗೆ ಹೋದ್ಲು.

ಅವ್ರಪ್ಪ-ಅವ್ವ-ಎಲ್ಲರೂ ಹೊಲ್ಗದ್ದೆತಕೆ ಹೋಗಿದ್ರು. ಅತ್ಗಿಗೆ ಹೇಳಿದ್ಲು ಕುಕ್ಕೆ ಬಾಯ್ಬಿಚ್ಬೇಡಿ. ತೆಂಗಿನ ಕಾಯೊಡದು ಕಾಯಾಲು ಮಾಡಿರಿ ಹೊಲ್ತಕೋಗ್ಬತ್ತೀನಿ ಅಂದ್ಲು. ಅತ್ಗ ಒಂದ್ಕುಕ್ಕೆ ತುಂಬ ತಂದಾಳಲ್ಲಾ ಅಂತ ಬಾಯರ್ಗ್[7] ಮಾಡಿ ಒಂದ್ಹಿಡಿ ತಗಂದ್ಲು, ಮಡ್ಲಿಗೆ[8] ಹಾಕೆಂದ್ಲು. ಅವ್ಳು ನೀರರ್ಬಿ ತಗಂದು ನೀರ್ಗೆ ಹೋದ್ಲು. ಒಂದು ರಾಕ್ಷಿನ[9] ಗೆಡ್ಡೆ ಮರ್ಗ ಹೋದ್ಲು. ತಿನ್ನಕೆ ಅಂತ ಹಿಂಗೇ ತಗದ್ಲು ಥೂ ಅಂದ್ಲು ಎಸದ್ಲು. ನೀರೊತ್ಗ ಮನಿಗ್ಬಂದ್ಲು. ಎಲ್ಲರ್ಗೂ ತಟ್ಟೆ ತೊಳದ್ಲು. ಊಟಕ್ಕೊಟ್ಲು. ಹೊತ್ಗಂದ್ಬೋಗಿದ್ಲಲ್ಲ ಇವ್ಳೇಯ ಎಲ್ಲರ್ಗೂ ಒಂದೊಂದ್ ಹಿಡಿ ಹಾಕೆಂದು ಬಂದ್ಲು. ದೀಪದ ಬೆಳ್ಕು ಮಿನ್ಕು ಮಿನ್ಕು ಅಂತಿತ್ತು. ಒಬ್ಬ ತಮ್ಮ ಇದ್ಕಿದ್ದಂಗೆಯಾ ಹಿಂಗೆ ವಾಸನೆ ಬಡಿತತೆ ದೀಪ ತಗಬಾ ಅಂದ, ದೀಪ ತಗಂದು ನೋಡ್ತಾರೆ. ಇದ್ಯಾಕಕ್ಕಯ್ಯ, ಮನುಷ್ಯರದು ಹಿಂಡಿ. ಅಯ್ಯೊಯ್ಯೋ ಅದ್ಯಾಕಕ್ಕಯ್ಯ ಅಂದ. ಅಪ್ಪ ಇದ್ಯಾಕ ಮಗ ಅಂದ. ಸೈ-ಕದ ತಕ್ಕಂದು ನಾಪತ್ತೆ ಆದ್ಲು. ಮಕಾ[10] ತೋರ್ಸಾಕಾಗ್ನಿಲ್ಲ:



ಕೋಳ್ಕೋಗಕ್ಮುಂಚೆ ಗಂಡನ ಮನೆಗೆ ಬಂದ್ಲು, ಬಾಗಿಲ್ತಗಿರಿ ಅಂದ್ಳು. ಇದೇನೇ ಇಷ್ಟೊತ್ನಲೆ ಬಂದೆ, ನಿಮ್ಮಪ್ಪ-ನಿಮ್ಮವ್ವ ಯಾರಾರೆ ಸತ್ಗಿತ್ರೆನೆ ಅಂದ. ಸತ್ರೂ ಇಲ್ಲ, ಬೆಂದೂ ಇಲ್ಲ. ನಾನೇ ಬಂದೆ ಕನಿ ಅಂದ್ಲು. ಸುಮ್ಕೆ ಈಟೊತ್ನಗ ಬರ್ಬೇಕಾರೆ ಯಾರಾರ ಕರ್ಕಂಬಂದಾರೆನೆ ಅಂದ. ಅಲ್ಲಾ ಕನಿ ತಿಂಡಿ ಮಾಡಿಟ್ಟಿದ್ದ್ ಹಿಂಗಾಗಿತ್ತಲ ಮನುಷ್ಯರದು ಒಣಗಿದ ಹಿಂಡಿ ಆಗಿತ್ತಲ್ಲ ಅಂದ್ಲು. ಸೈ ಏನೆ ಊಟಕ್ಕಿಕ್ಕಿ ಬಂದೆನೆ ಅಂದ. ನಾನು ಅಲ್ಲಿ ನಿಲ್ನೆ ಇಲ್ಲ ಬಂದೆ. ನಮ್ಮ ಹಿರೆರ್ಗ ಇಕ್ದಿರವತ್ಗ ಎನಿ ಹಿಂಗಾಗಿರದು ಅಂತ ಕೇಳಿದ್ಲು. ಅಲ್ಲಾ ಆವೊತ್ತು ತಂಗಿ ಬಂದಿನ ಏನ್ಕೆಲ್ಸ ಮಾಡ್ದೆ ಅಂದ. ಅತ್ಗರು ಭತ್ತ ಕುಟ್ಟಿದ್ರು ಏನಂತ ಹೋದ್ರು ಕಾಣೆ ಕನಿ ಅಂದ್ಲು. ನೋಡ್ದನೆ ಮುಂಡೆ ಅವ್ಳಿಗೆ ಮುಂದ್ಲ ತೌಡ ಕೊಟ್ಟು ಕಳ್ಸಿದ್ಯಲ್ಲ, ನೀನು ಹಿಂದ್ಲದಾ ತಗಂದ್ ಹೋಗ ಹಂಗಾಯ್ತಲ ಅಂತ. ಮುಂಡೇ ಭತ್ತ ಕುಟ್ಟಿಸ್ದಳು ಒಂದ್ಸೇರ ಅಕ್ಕಿ ಕೊಡ್ಬೇಕಾಗಿತ್ತು ಕನೆ ಅಂದ.

# ದೇವೇಂದ್ರ ಲೋಕದ ದೇವಕನ್ಯೆ

ಒಂದೂರು, ಅಲ್ಲೊಬ್ಬ ಅರಸ. ಅರಸನಿಗೆ ಆರು ಜನ ಮಕ್ಕಳು. ಅವರಲ್ಲಿ ಐವರಿಗೆ ಮದುವೆಯಾಯಿತು. ಕೊನೆಯವನಿಗೆ ಮದುವೆಯಾಗಿರಲಿಲ್ಲ. ಆತ ಬಹಳ ಚಿಂತೆಯಲ್ಲಿದ್ದ. ಆಗ ದೊಡ್ಡ ಅಣ್ಣ ಎಲ್ಲ ತಮ್ಮಂದಿರನ್ನೂ. ತನ್ನ ಹೆಂಡತಿಯನ್ನೂ, ನಾದಿನಿಯರನ್ನೂ ಕರೆದ. ತಮ್ಮನನ್ನು ಎಲ್ಲರೂ ಚೆನ್ನಾಗಿ ನೋಡಿಕೊಳ್ಳಬೇಕೆಂದು ಹೇಳಿದ. ಹಾಗೆ ಎಲ್ಲರೂ ಸಣ್ಣ ರಾಜಕುಮಾರನನ್ನು ಚೆನ್ನಾಗಿ ನೋಡಿಕೊಂಡರು. ಒಂದು ದಿನ ದೊಡ್ಡ ಅತ್ತಿಗೆ ಸಣ್ಣರಾಜಕುಮಾರನ ತಲೆಯಲ್ಲಿ ಹೇನು ನೋಡುತ್ತಿದ್ದಳು. ಆಗ ಆಕೆಯ ಮೊಲೆ ಆತನ ತಲೆಗೆ ತಾಕಿತು. "ಏನತ್ತಿಗೆ, ನೀನು ಮಾತ್ರ ಹೇನು ಕುಟ್ಟುವುದಲ್ಲ, ನಿನ್ನ ಮೊಲೆಗಳಿಂದಲೂ ಹೇನು ಕುಟ್ಟಿಸುತ್ತೀಯಾ ?" ಎಂದು ಕೇಳಿದ. ಆಕೆಗೆ ಸಿಟ್ಟು ಬಂತು "ಹೋಗು, ನೀನು ದೇವಲೋಕದ ದೇವಕನ್ಯೆಯನ್ನು ತರುತ್ತೀಯೋ, ದಾಳಿಂಬೆ ಹಣ್ಣಿನ ರಂಭೆಯನ್ನು ತರುತ್ತೀಯೋ, ಬಿದಿರಿನ ಚದುರೆಯನ್ನು ತರುತ್ತೀಯೋ ನೋಡೋಣ" ಎಂದಳು.

ಸಣ್ಣ ರಾಜಕುಮಾರ ಮನೆಯಿಂದ ಒಂದು ಅನ್ನದ ಬುತ್ತಿ, ಇನ್ನೊಂದು ಹಣದ ಬುತ್ತಿ ಹಿಡಿದುಕೊಂಡು ಹೊರಟ. ಬಹಳ ದೂರ ಹೋದಮೇಲೆ ಆತನಿಗೆ ಒಬ್ಬ ಮುನಿಯು ಸಿಕ್ಕಿದ. ಆ ಮುನಿಯನ್ನು ಮಾತನಾಡಿಸಬೇಕೆಂದು ಆತನಿಗೆ ಮನಸ್ಸಾಯಿತು. ಆದರೆ ಮುನಿ ಮಾತನಾಡುವುದಿಲ್ಲ. ಅದಕ್ಕಾಗಿ ಆತನೊಂದು ಉಪಾಯ ಮಾಡಿದ. ಎರಡು ಕಲ್ಲು ತಂದ. ಅದನ್ನಿಟ್ಟು



ಮೂರನೇ ಕಲ್ಲಿನ ಬದಲು ತನ್ನ ಮೊಣಕಾಲು ಕೊಟ್ಟು ಒಲೆ ಹಾಕಿದ, ಅದರ ಮೇಲೆ ಮಡಿಕೆ ಇಟ್ಟು ನೀರು ಹಾಕಿ ಒಲೆ ಉರಿಸಿದ. ಒಲೆಯ ಬಿಸಿ ಕಾಲಿಗೆ ತಾಗುವಾಗ ಕಾಲು ಹಿಂತೆಗೆದುಕೊಂಡ. ಮುನಿಗೆ ಇದು ತಮಾಷೆಯಾಗಿ ಕಂಡಿತು. ಮಾತಾಡಬೇಕೋ ಬಿಡಬೇಕೊ ಗೊತ್ತಾಗಲಿಲ್ಲ. ಮುನಿ ಮೂರು ಬೆರಳು ತೋರಿಸಿದ. ರಾಜಕುಮಾರ ಅರ್ಥವಾಗದಂತೆ ನಟಿಸಿದ. ಕೊನೆಗೆ ಮುನಿಯು "ಅಯ್ಯೋ ಹುಚ್ಚಾ, ಮೊಣಕಾಲು ಕೊಟ್ಟು ಬೆಂಕಿ ಮಾಡಲು ಸಾಧ್ಯವೇ? ನೀನು ಎಲ್ಲಿಗೆ ಹೋಗುವವ, ಎಲ್ಲಿಂದ ಬಂದವ" ಎಂದು ಕೇಳಿದ. ಆಗ ರಾಜಕುಮಾರ "ನಾನು ದೇವೇಂದ್ರ ಕುಮಾರಿ ದೇವಕನ್ಯೆಯನ್ನು ತರಲು ಹೋಗುವುದು, ಅಲ್ಲಿಗೆ ಹೋಗುವ ದಾರಿ ಎಲ್ಲಿ ?" ಎಂದು ಕೇಳಿದ. ಮುನಿಯು ಇಲ್ಲಿಂದ ನಾಲ್ಕು ಹರದಾರಿ ಮುಂದೆ ಹೋಗು, ಅಲ್ಲಿ ನನ್ನ ತಮ್ಮ ಒಬ್ಬ ಮುನಿ ಇದ್ದಾನೆ, ಅವನಲ್ಲಿ ಕೇಳು" ಎಂದ. ರಾಜಕುಮಾರ ಮುಂದೆ ನಡೆದ.

ನಾಲ್ಕು ಹರದಾರಿ ನಡೆದಾಗ ಇನ್ನೊಬ್ಬ ಮುನಿ ಸಿಕ್ಕಿದ. ಅವನೆದುರು ಕೂಡಾ ಎರಡು ಕಲ್ಲು ಹಾಕಿ ಮೂರನೇ ಕಲ್ಲಿನ ಬದಲು ತನ್ನ ಮೊಣಕಾಲೂರಿ ಬೆಂಕಿಮಾಡಿ ಮಡಿಕೆ ಇಟ್ಟು ಬೆಂಕಿ ಹಾಕಿದ. ಅದನ್ನು ನೋಡಿ ಮುನಿಯು "ಅಯ್ಯೋ ಹುಚ್ಚಾ, ನೀನು ಎಲ್ಲಿಂದ ಬಂದವನು, ಎಲ್ಲಿಗೆ ಹೋಗುವವನು" ಎಂದು ಕೇಳಿದ. ರಾಜಕುಮಾರ, "ನಾನು ದೇವಲೋಕದಿಂದ ದೇವಕನ್ಯೆಯನ್ನು ತರಲು ಹೋಗುವುದು, ಹೋಗುವ ದಾರಿ ಯಾವುದು ?" ಎಂದು ಕೇಳಿದ. "ಹಾಗಾದರೆ ಇಲ್ಲಿಂದ ನಾಲ್ಕು ಹರದಾರಿ ದೂರದಲ್ಲಿ ನನ್ನ ತಮ್ಮ ಇದ್ದಾನೆ, ಅವನಲ್ಲಿ ಕೇಳು" ಎಂದ.

ರಾಜಕುಮಾರ ನಾಲ್ಕು ಹರದಾರಿ ನಡೆದಾಗ ಮೂರನೆ ಮುನಿ ಸಿಕ್ಕಿದ. ಅವನೆದುರು ಕೂಡಾ ರಾಜಕುಮಾರ ಎರಡು ಕಲ್ಲು ಹಾಕಿ ಮೂರನೇ ಕಲ್ಲಿನ ಬದಲು ಮೊಣಕಾಲೂರಿ ಮಡಿಕೆ ಇಟ್ಟು ಬೆಂಕಿಮಾಡಿದ. ಆಗ ಆ ಮುನಿಯು ಕಣ್ಣು ತೆರೆದು "ಎಲೆ ಹುಚ್ಚಾ, ನೀನು ಯಾವ ಊರಿಂದ ಬಂದವ, ಎಲ್ಲಿಗೆ

ಹೋಗುವವ, ಎಂದು ಕೇಳಿದ. ಅದಕ್ಕೆ ರಾಜಕುಮಾರನು ನಾನು ದೇವೇಂದ್ರ ಲೋಕದ ದೇವಕನ್ಯೆಯನ್ನು ತರಲು ಹೋಗುವವನು, ಹೋಗುವ ದಾರಿ ಎಲ್ಲಿ ? ಎಂದು ಕೇಳಿದ. ಅದಕ್ಕೆ ಮುನಿಯು "ಇಲ್ಲಿಂದ ಹರದಾರಿ ನಡೆದರೆ ಅಲ್ಲೊಂದು ಕೆರೆ ಇದೆ. ಆ ಕೆರೆಗೆ ರಾತ್ರಿ ಬೆಳಗಾಗುವ ಹೊತ್ತಿಗೆ ದೇವಕನ್ಯೆ ಸ್ನಾನಕ್ಕೆ ಬರುತ್ತಾಳೆ. ನೀನು ಅದರ ಮೊದಲು ಅಲ್ಲಿಗೆ ಹೋಗಿ ಬೆತ್ತಲೆ ಯಾಗಿ ತಲೆಕೆಳಗೆ ಕಾಲು ಮೇಲೆ ಮಾಡಿ ಬಾವಲಿಯಂತೆ ಮರದಲ್ಲಿ ನೇತಾಡ ಬೇಕು. ಅವಳು ಬಟ್ಟೆಬರೆ ಕಳಚಿ ಬೆತ್ತಲೆಯಾಗಿ ಸ್ನಾನಮಾಡಲು ಕೆರೆಗೆ ಇಳಿಯುತ್ತಾಳೆ. ಆಗ ನಿನ್ನ ನೆರಳು ನೀರಿನಲ್ಲಿ ಅವಳಿಗೆ ಕಾಣುತ್ತದೆ. ಅವಳು ನಿನ್ನಲ್ಲಿ ಕೆಳಗಿಳಿ ಎನ್ನುತ್ತಾಳೆ. ನೀನು ಇಳಿಯಬೇಡ, ಕೊನೆಗೆ ನೀನೇ ಗಂಡ ನಾನೇ ಹೆಂಡತಿ ಎನ್ನುತ್ತಾಳೆ, ಆಗ ಇಳಿದು ಬಾ" ಎಂದನು.

ರಾಜಕುಮಾರ ಮುನಿಯು ಹೇಳಿದಂತೆ ಬೆಳಗಾಗುವ ಮೊದಲೇ ಕೆರೆಯ ಬಳಿಗೆ ಹೋಗಿ ಬೆತ್ತಲೆಯಾಗಿ ಮರದ ಮೇಲೆ ತಲೆಕೆಳಗಾಗಿ ನೇತಾಡಿದ. ದೇವಕನ್ಯೆ ಬಂದು ಬಟ್ಟೆ ಕಳಚಿ ನೀರಿಗಿಳಿಯುವ ಸಿದ್ಧತೆ ನಡೆಸಿದಾಗ ಆಕೆಗೆ ರಾಜಕುಮಾರನ ನೆರಳು ಕಂಡಿತು. ಆಕೆ ಬೆಚ್ಚಿಬಿದ್ದಳು, "ಎಲೈ ಕಳ್ಳನೆ, ಕೆಳಗೆ ಇಳಿದು ಬಾ" ಎಂದಳು. ಆತ ಮಾತನಾಡಲಿಲ್ಲ. "ಈವರೆಗೆ ನನ್ನ ಮಾನ ನೋಡಿದವರು ಯಾರೂ ಇಲ್ಲ, ನೀನು ಮಹಾ ಗಟ್ಟಿಗ, ಕೆಳಗಿಳಿ" ಎಂದಳು. ಆತ ಕೆಳಗಿಳಿಯಲಿಲ್ಲ. ಕೊನೆಗೆ "ನೀನೇ ನನ್ನ ಗಂಡ, ನಾನೇ ನಿನ್ನ ಹೆಂಡತಿ ಕೆಳಗಿಳಿದು ಬಾ" ಎಂದಳು. ಕೂಡಲೆ ರಾಜಕುಮಾರ ಕೆಳಗಿಳಿದು ಬಂದ. ದೇವಕನ್ಯೆ ಸ್ನಾನ ಮಾಡಿದಳು. ಅಷ್ಟರಲ್ಲಿ ಮಿರ್ಲೋಕದಿಂದ ಒಂದು ಬಂಗಾರದ ನೂಲು ಕೆಳಗಿಳಿದುಕೊಂಡು ಬಂತು. "ನೀನು ಆ ನೂಲನ್ನು ಹಿಡಿದು ಮೇಲಕ್ಕೇರು. ಹಿಂದಕ್ಕೆ ಮಾತ್ರ ತಿರುಗಿನೋಡಬೇಡ" ಎಂದಳು. ರಾಜಕುಮಾರ ಚಿನ್ನದ ದಾರ ಹಿಡಿದು ಮೇಲಕ್ಕೇರಿದ. ಅರ್ಧಕ್ಕೆ ಮುಟ್ಟು ವಾಗಹಿಂದೆ ತಿರುಗಿ ನೋಡಿದ. ಕೆಳಗೆ ಬಿದ್ದು ಚೂರುಚೂರಾಗಿಹೋದ. ಕೂಡಲೇ ದೇವಕನ್ಯೆ ಬಿಂದಿಗೆ ನೀರನ್ನು ಅವನ ಮೇಲೆ ಚಿಮುಕಿಸಿ ದರ್ಬೆಯ ಕೋಲಿನಲ್ಲಿ ಪೂಸಿದಳು. ರಾಜಕುಮಾರ ಎದ್ದುನಿಂತ.



ದೇವಕನ್ಯೆ "ಇನ್ನೊಮ್ಮೆ ಬಂಗಾರದ ನೂಲು ಹಿಡಿದು ಮೇಲಕ್ಕೇರು. ಹಿಂದಕ್ಕೆ ತಿರುಗಿ ನೋಡಬೇಡ. ಮಿರ್ಲೋಕದಲ್ಲಿ ನನ್ನ ತಂದೆ ದೇವೇಂದ್ರ ಇದ್ದಾನೆ. ನೀನು ನೆಟ್ಟಗೆಹೋಗಿ "ಏನು ಮಾವಯ್ಯ ಎಂದು ಹೇಳಿ ಅವನ ಕಾಲು ಹಿಡಿದುಕೋ" ಎಂದಳು. ರಾಜಕುಮಾರ ಹಾಗೇ ಮಾಡಿದ. ದೇವೇಂದ್ರನಿಗೆ ಸಿಟ್ಟು ಬಂತು. ಕಾಲಿನಲ್ಲಿ ತುಳಿದು, "ಕೊಂಡುಹೋಗಿ ಇವನ ತಲೆ ಕಡಿಯಿರಿ" ಎಂದ. ದೂತರು ಅವನ ತಲೆ ಕಡಿಯಲು ಹಿಡಿದು ಕೊಂಡು ಹೊರಟರು, ಅಷ್ಟರಲ್ಲಿ ದೇವಕನ್ಯೆ ಎದುರಾದಳು. ರಾಜಕುಮಾರ ನನ್ನು ದೂತರಿಂದ ಬಿಡಿಸಿ ದೇವೇಂದ್ರನ ಎದುರು ಕೊಂಡ್ಯೊದು ನಿಲ್ಲಿಸಿ "ನಾನು ಮೆಚ್ಚಿದ ಗಂಡನನ್ನು ನಾನು ಮದುವೆಯಾಗುವುದು. ಇವನೇ ನನ್ನ ಗಂಡ" ಎಂದಳು, ದೇವೇಂದ್ರ "ಆಗಲಿ ಮಗಾ" ಎಂದ. ರಾಜಕುಮಾರ ನೊಂದಿಗೆ ದೇವಕನ್ಯೆಯ ವಿವಾಹ ನಡೆಯಿತು.

ರಾಜಕುಮಾರ ದೇವಕನ್ಯೆಯನ್ನು ಕರೆದುಕೊಂಡು ಊರಿಗೆ ಹೊರಟ. "ನಿನ್ನೊಂದಿಗೆ ದೇವಕನ್ಯೆಯನ್ನು ಕಳುಹಿಸುವುದಿಲ್ಲ, ದೊಣ್ಣೆಪ್ಪ, ಮಣ್ಣೆಪ್ಪ ಎಂಬ ಇಬ್ಬರು ಆಳುಗಳನ್ನು ಕಳುಹಿಸುತ್ತೇನೆ" ಎಂದ ದೇವೇಂದ್ರ. ರಾಜ ಕುಮಾರ ಅದಕ್ಕೆ ಒಪ್ಪಲಿಲ್ಲ ಕೊನೆಗೆ ದೇವೇಂದ್ರ ಒಂದು ಬೀಣೆಯನ್ನು ಕೊಟ್ಟ. "ಈ ಬೀಣೆಯನ್ನು ಬಾರಿಸಿದಾಗ ದೇವಕನ್ಯೆ ಬರುತ್ತಾಳೆ" ಎಂದ. ದೊಣ್ಣೆಪ್ಪ, ಮಣ್ಣೆಪ್ಪ ಮತ್ತು ಬೀಣೆಯನ್ನು ಕೂಡಿಕೊಂಡು ರಾಜಕುಮಾರ ಹೊರಟ

ರಾಜಕುಮಾರ ಮೂರನೆ ಮುನಿಯ ಬಳಿ ಬಂದಾಗ ಕತ್ತಲಾಯಿತು. ಮುನಿಯೊಡನೆ ಎಲ್ಲಾ ವಿಚಾರ ಹೇಳಿದ. ಮುನಿಗೆ ದೇವಕನ್ಯೆಯನ್ನು ನೋಡಬೇಕೆಂಬ ಆಸೆಯಾಯಿತು. ರಾತ್ರಿಯಾಯಿತು, ರಾಜಕುಮಾರ ಸ್ನಾನ ಮಾಡಿ ಒಂದು ದೀಪ ಉರಿಸಿಟ್ಟ ಬೀಣೆ ನುಡಿಸಿದ ಅಷ್ಟಾಗುವಾಗ ಕೀಳಂಗಡಿ ಕೀಳ್ಯೆಸಿಕೊಂಡು ಸರ್ಪಲಿಂಗ ಭಾಗವತರ ಮೇಳದಲ್ಲಿ ಒಡ್ಡೋಲಗ ಓಲಗದಿಂದ ಕೂಡಿಕೊಂಡು ದೇವಕನ್ಯೆ ಬರುವಾಗ ರಾತ್ರಿ ಹೋಗಿ ಬೆಳಕಾ ಯಿತು ಮಿಂಚು ಮಿಂಚಿದಂತಾಯಿತು. ಮುನಿ ಸ್ಮೃತಿ ತಪ್ಪಿ ಬಿದ್ದು ಬಿಟ್ಟ

ಆತನಿಗೆ ಎಚ್ಚರಿಕೆಯಾಗುವಾಗ ದೇವಕನ್ಯೆ ಹೋಗಿಯಾಗಿತ್ತು. ಮರುದಿನ ರಾಜಕುಮಾರ ಹೊರಟ. ಆಗ ಮುನಿಯು ಬೀಣೆಯನ್ನು ಕೇಳಿದ. ಆಗ ದೊಣ್ಣೆಪ್ಪ ಮುನಿಗೆ ಎರಡು ಬಿಗಿದ. ಮುನಿಯು ಸುಮ್ಮನಾದ.

ರಾಜಕುಮಾರ ಎರಡನೇ ರಾತ್ರಿಗೆ ಎರಡನೇ ಮುನಿಯ ಬಳಿಗೆ ಬಂದ. ಆ ಮುನಿಯೂ ಕೂಡಾ ಅವನ ಆಶ್ರಮದಲ್ಲಿ ಆ ರಾತ್ರಿ ರಾಜಕುಮಾರನನ್ನು ನಿಲ್ಲಿಸಿಕೊಂಡ. ರಾತ್ರಿಯಾಯಿತು. ರಾಜಕುಮಾರ ಸ್ನಾನಮಾಡಿ ದೀಪ ಉರಿಸಿಟ್ಟು ವೀಣೆಯನ್ನು ಬಾರಿಸಿದ. ದೇವಕನ್ಯೆ ಪ್ರತ್ಯಕ್ಷವಾದಳು. ಮುನಿ ಸ್ಮೃತಿ ತಪ್ಪಿ ಬಿದ್ದುಬಿಟ್ಟ. ಬೆಳಗಾಗುವಾಗ ದೇವಕನ್ಯೆ ಮಾಯವಾಗಿದ್ದಳು. ಮಾರುದಿವಸ ಹೊರಟಾಗ ಮುನಿ ಬೀಣೆಯನ್ನು ಕೇಳಿದ. ರಾಜಕುಮಾರ ಕೊಡಲಿಲ್ಲ. ಮುನಿ ಎಳೆದುಕೊಳ್ಳಲು ಬಂದ. ಆಗ ದೊಣ್ಣೆಪ್ಪ ಮುನಿಗೆ ಎರಡು ಬಾರಿಸಿದ.

ರಾಜಕುಮಾರ ಮೂರನೆ ರಾತ್ರಿಗೆ ಮೊದಲನೇ ಮುನಿಯ ಬಳಿಗೆ ತಲುಪಿದ. ಅಲ್ಲೂ ಹಾಗೇ ಆಯಿತು. ನಾಲ್ಕನೇ ದಿವಸ ಒಂದು ಊರಿಗೆ ತಲುಪಿದರು. ಆ ಊರಿನ ಕಟ್ಟೆಯ ಮೇಲೆ ರಾಜಕುಮಾರ ಕುಳಿತುಕೊಂಡ. ಅರಸನು ಕುಳಿತುಕೊಳ್ಳುವ ಕಟ್ಟೆಯಲ್ಲಿ ಯಾರೋ ಒಬ್ಬ ಪ್ರಯಾಣಿಕ ಕುಳಿತುಕೊಂಡಿದ್ದಾನೆಂದು ಅರಸನಿಗೆ ಸುದ್ದಿ ಮುಟ್ಟಿತು. ಅರಸ ತನ್ನ ಆಳುಗಳನ್ನು ಕಳುಹಿಸಿದ. ಆಳುಗಳು ರಾಜಕುಮಾರನನ್ನು ಹಿಡಿಯಲು ಬಂದರು. ಆಗ ದೊಣ್ಣೆಪ್ಪ ಎಲ್ಲರಿಗೂ ಬಾರಿಸಿದ. ಎಲ್ಲರೂ ಸತ್ತುಹೋದರು.

ರಾತ್ರಿಯಾಯಿತು. ಸ್ನಾನಮಾಡಿ ಬಂದು ರಾಜಕುಮಾರ ದೀಪ ಹಚ್ಚಿದ. ಬೀಣೆಯನ್ನು ಬಾರಿಸಿದ. ಬೀಣೆ ಬಾರಿಸಿದೊಡನೆ ದೇವಕನ್ಯೆ ಪ್ರತ್ಯಕ್ಷವಾದಳು. ಬೆಳಗಾಗುವಾಗ ಸತ್ತ ಜನರ ಮೇಲೆ ಗಿಂಡಿ ನೀರನ್ನು ಸಿಂಪಡಿಸಿ ದರ್ಭೆ ಕೋಲಿನಲ್ಲಿ ಈಸಿ ಎಬ್ಬಿಸಿ ಮಾಯವಾಗಿ ಹೋದಳು.



ಮುಂಜಾನೆ ಎದ್ದು ರಾಜಕುಮಾರ ತನ್ನ ಸಂಗಡಿಗರೊಂದಿಗೆ ನಡೆದ. ನಡೆದು ನಡೆದು ತನ್ನ ಅರಮನೆಯನ್ನು ಸೇರಿದ. ಅರಮನೆಯಲ್ಲಿ ಅತ್ತಿಗೆಯಂದಿರು, ಅಣ್ಣಂದಿರು ಅವನು ಏಕಾಂಗಿಯಾಗಿ ಬಂದುದನ್ನು ನೋಡಿ "ಎಲ್ಲಿ ನಿನ್ನ ಮಡದಿ ದೇವಲೋಕದ ಕನ್ಯೆ!" ಎಂದು ತಮಾಷೆ ಮಾಡಿದರು. ರಾಜಕುಮಾರ ಮಾತನಾಡಲಿಲ್ಲ.

ರಾತ್ರಿಯಾಯಿತು. ರಾಜಕುಮಾರ ಸ್ನಾನಮಾಡಿಕೊಂಡು ಬಂದ. ದೀಪ ಉರಿಸಿಟ್ಟ, ಬೀಣೆಯನ್ನು ಬಾರಿಸಿದ. ಅಷ್ಟರಲ್ಲಿ ದೇವಕನ್ಯೆ ಪ್ರತ್ಯಕ್ಷವಾದಳು, ಜಗ್ಗೆಂದು ಕೋಣೆಯೆಲ್ಲಾ ಬೆಳಗಿತು. ಎಲ್ಲರೂ ಸ್ಮೃತಿ ತಪ್ಪಿ ಬಿದ್ದುಬಿಟ್ಟರು. ಬೆಳಗಾಗುವಾಗ ದೇವಕನ್ಯೆ ಹೊರಟಳು. ರಾಜಕುಮಾರನೂ ಅವಳ ಬೆನ್ನು ಬಿಡದೆ ಹಿಂಬಾಲಿಸಿದ. ಬಂಗಾರದ ನೂಲೇಣಿ ಹಿಡಿದು ಮೇಲ್ಲೋಕ ಸೇರಿದ. ಅಲ್ಲಿ ದೇವೇಂದ್ರನೊಡನೆ ದೇವಕನ್ಯೆಯನ್ನು ಕಳುಹಿಸಿಕೊಡುವಂತೆ ಪಟ್ಟು ಹಿಡಿದ. ದೇವೇಂದ್ರ ಅದಕ್ಕೊಪ್ಪಿ ದೇವಕನ್ಯೆಯನ್ನು ಕಳುಹಿಸಿಕೊಟ್ಟ. ದೇವಕನ್ಯೆಯನ್ನು ಕರೆದುಕೊಂಡು ಬಂದು ರಾಜಕುಮಾರ ಬಂಗಾರದ ಅರಮನೆಯಲ್ಲಿ ಸುಖವಾಗಿದ್ದ.

– ––

# ಕೆಪ್ಪರ ಎರಡು ಕತೆಗಳು

ಇದೆ ನಿವ್ ಜೀನಳ್ಳಿ ಅಂತ ಊರು. ಒಬ್ಬ ಕೆಪ್ಪ ತೆವರ ಹೊಲ್ದಾಗೆ ಹರಗ್ತಾ ಇದ್ದ. ಚೊಲ್ಟೂರಾಗೊಬ್ಬ ಕುರುಬ ಓಸ್ ಕುರಿ ಕಾದ್ಕಂಡು ಇದ್ದ. ಅವ್‌ನು ಒಂದೂರಿಂದ ಒಂದೂರಿಗೆ ಕುರಿ ತರಿಬಿಕ್ಕಂದು ಕಾಳುಕಡೆ ಇಸ್ಗಂತ ಜೀವ್ನವಾಡ್ತಿದ್ದ. ಹಿಂಗೆ ಒಂದ್ ಸಾರಿ ಕುರಿ ತರಿಬಿಕ್ಕಂದು ರಾತ್ರೆ ಮಕ್ಕಂದಿದ್ದ. ಕುರಿ ಹ್ಯಂಗ್ಹಂಗೊ ತಪ್ಪಿಸ್ಕಂದು ಎತ್ಲಾಗೊ ಹೋದ್ವು. ಅವ್ನು ಹುಡಿಕ್ಯಂತ ಬಂದ. ಹರಗ್‌ತಿದ್ನಲ, ಇವುಂತಾಕೆ ಬಂದು ಹರಗೋದ್ನ ನಿಲ್ಸಿ 'ಹಿಂಗೆ ಕುರಿ ಕಳ್ದಿದ್ವು, ಇತ್ಲಾಗೆ ಬಂದಿದ್ದೇನಾರೆ ಕಂಡ್ಯಾ ?' ಅಂತ ಕೇಳಿದ. ಹರಗ್ತಿರೊ ಕೆಪ್ಪ ಎಟೊತ್ನ್ಯಾಗೆ ಬರ್ತಿ ಎಟೊತ್ನ್ಯಾಗೆ ಹೋಗ್ತಿ ಅನ್ನೋದ್ನ ಕೇಳ್ತಾನಿವ್ನು ಅಂತ ತಿಳ್ಕಂಡು 'ಇಟುದ್ದ ಹೊತ್ನ್ಯಾಗೆ ಬರ್ತನಿ ಅಟೊತ್ನ್ಯಾಗೆ ಹೋಕನಿ' ಅಂತ ಹೊತ್ತು ತೋರಿಸಿ ಹೇಳ್ದ. ಚೊಲ್ಟೂರು ಕೆಪ್ಪಗೆ 'ಇಲ್ಲ್ಯಾಸಿ ಬಂದು ಅಲ್ಲ್ಯಾಸಿ ಹೋದ್ವು' ಅನ್ನಂಗಾಗಿ ಹುಡಿಕ್ಯಂತ ಹೊಂಟ.

ನಾಯಿಕೊಪ್ಲಾಗೆ ಕುರಿ ಆಡ್ತಿದ್ವು. ಹೊಡ್ಕಂಡ. ಮನ್‌ಸ್ನ್ಯಾಗೆ 'ಸಾವ್‌ರಾರು ರೂಪಾಯಿ ಕುರಿ ಹಂಗೆ ಹೋಕುದ್ವು. ಈ ಬ್ಯಾಸೆ ಹೊಡಿಯೋನು ಉಳಿಸ್ದ' ಅಂತಂದ್ಕಂಡು, ಬ್ಯಾಸೆ ಹೊಡಿಯೋನಿಗೆ ಒಂದ್ ಕುರಿ ಕೊಟ್ಟು ಹೋಗಾನಾಂತ ಅದೇ ದಾರ್‍ಯಾಗೇಸಿ ಬಂದ. 'ನಿನ್ಕಡಿಂದ ನನ್ ಕುರಿ ಉಳುದ್ವು ತಗೋ ನೀ ಒಂದ್ ಕುರಿ ಇಟ್ಕೊ' ಅಂತ ಕೊಡಾಕೆ



ಹೋದ. ಅದುಂ ಕುಂಟ್ ಕುರಿ. ನಿನ್ನೆತ್ಯಾಗೆ ಸಾಕ್ಕೊ ಅಂತ ಕೊಟ್ಟಾಗ ಹರಗೊ ಕೆಪ್ಪ 'ಏ, ನಾ ಹೊಡುದುಲ್ಲ ಮಾರಾಯ, ಯಾರು ಹೊಡರಿದ್ಯಾರೋ ಏನೋ' ಅಂದ, ಕುರಿಗೆ ಹೊಡುದ್ದಾ ಅಂತ ಕೇಳಾಕೆ ಬಂದಾನೇಂದು. ಚೊಲ್ಟೂರು ಕೆಪ್ಪ 'ಏ ತಗಳೊ ಮಾರಾಯ, ಒಂದ್‌ಚೂರು ಕುಂಟ್‌ತತಿ' ಅಂದ. 'ಏಯ್ ಇಲ್ಲೋ ನಾ ದೇವ್‌ರಾಣ್ಯಾಗೂ ಹೊಡಿದಿಲ್ಲ' ಅಂತ ಹರಗೊ ಕೆಪ್ಪ ವಾದ್ಸಿದ.

ಅಟತ್ತಿಗೆ ಒಬ್ಬ ಸಾಬ ಕೆಪ್ಪ ಬಂದ. ಬರಾಕರೆ ಅಲ್ಲೊಂದ್ ಎರೆ ಹೊಲ್ದಾಗೆ ಆಡ್ತಿದ್ದ ಕುದ್ರೆ ಹತ್ತಿಗಂದು ಬಂದಿದ್ದ. ಇವುರ್‌ತಾಕೆ ಬರತ್ಲೆ ಕೈಬೀಸಿ ಕರದ್ರು, ಸಾಬ ಇವ್‌ರಿಬ್ರು ಪೈಕಿ ಯಾರ್ದೊ ಒಂದ್ ಕುದ್ರೆ ಕಳ್ದಿರ್‌ಬೇಕು ಅಂತ ತಿಳ್ದು ಹತ್ರುಕ್ಕೆ ಬಂದ. ಚೊಲ್ಟೂರು ಕೆಪ್ಪ ಸಾಬ ಬರ್ತಿದ್ದಂಗೆ 'ಒಂದ್ ಚೂರು ಕುಂಟತತಿ ಹಿಡಕವಲ್ಲ ನೋಡು' ಅಂತಂದ. ಹರಗೋ ಕೆಪ್ಪ 'ನಾ ಹೊಡುದಿಲ್ಲ, ಯಾರ್ ಹೊಡುದ್ದಾರೊ ಏನೊ. ನಾನು ಹೊಡ್ದೆ ಅಂತ ಇವ್ನ್‌ಹೇಳ್ತಾ ಇದ್ದಾನೆ' ಅಂತಂದ. ಅಂಗೆ ಸಾಬ್‌ನೂ 'ಕುದ್ರೆ ಅಲ್ಲಿ ಆಡ್ತಿತ್ತು. ಹತ್ತಿಗಂದು ಬಂದೆ. ನಿನ್ದಾದ್ರೆ ನೀ ಹಿಡ್ಕೊ ನಿನ್ದಾದ್ರೆ ನೀ ಹಿಡ್ಕೊ' ಅಂತ ಇಬ್ರಿಗೂ ಹೇಳ್ದ. ಹಾಗೆ ಮುವ್ವ್ರರೂ ಒಂದಾಗ್‌ವಲ್ರು.

ಆ ಊರ ಗೌಡ ಹೊಲ ನೋಡಾನ ಅಂತ ದೂರ್‍ದಾಗೆ ಹೋಕುದ್ದ. ಗೌಡನ್ನ ಕೂಗಿ ಕರದ್ರು. ಗೌಡ್ನೂ ಕೆಪ್ಪ. ಇಬ್ರ್ ಹೆಂಡ್ರನ್ನ ಮದುವಾಗಿದ್ದ. ಯಾತ್ಯಾತ್ರ ಕಾಲಾಗೊ ಏನೊ ಇಬ್ರೆಂಡ್ರು ಕುಟಾಗೆ ಗುದ್ದಾಡಿಕಂಡು ಮೂರ್ ದಿನ ಉಣ್ಣಂಗಿದ್ದ. ಊರಾಗೆ ನಾಕ್ ಜನ ಪಂಚಾತಿ ಕೂಡ್ಸಿ ಹೇಳಿದ್ರೂ ಉಂಡಿದ್ದಿಲ್ಲ. ಒಂದೇ ಸಮುಕ್ಕೇ ಮುಖ ತಿರಿವಿಕಂಡ್ ಹೋಗ್ತಿದ್ದ. 'ಬರ್ರಿ ಗೌಡ್ರೆ' ಅಂತ ಕರದ್ರು, 'ಯ್ಯಾ ಹೋಗ್ರೊ ಮಾರಾಯ. ನೀವ್ ಬ್ಯಾರೆ ನನಿಗೆ ಹೇಳಾಕೆ ಬರ್‌ಬ್ಯಾಡ್ರಿ' ಅಂತ ಅಲ್ಲಿಂದ್ಲೇ ಅಂದ. ಇವ್‌ರೇ ಹತ್ರುಕ್ಕೆ ಹೋದ್ರು. ಹರಗೋ ಕೆಪ್ಪ ಅಲ್ಲಾಗೌಡ್ರೆ, ನಾ ಈ ಕುರಿಗೆ ಹೊಡ್ದುಲ್ಲ. ಇವ್ನು ನಾ ಹೊಡ್ದುದನಿ ಅಂತ ಹೇಳ್ತಿದಾನೆ'

ಅಂದ. ಚೊಲ್ಲೂರು ಕೆಪ್ಪ 'ನೋಡಿ ಗೌಡ್ರೆ, ಈ ಕುರೆ ಒಂಚೂರು ಕುಂಟತತಿ ಅಷ್ಟೆ. ಅದ್ಕೆ ಇವ್‌ನು ಹಿಡ್ಕವಲ್ಲ ಹಿಂಗ್ಮಾಡ್ತಾನೆ' ಅಂದ. ಅಟತ್ತಿಗೆ ಸಾಬ್‌ನೂ 'ನಾನಾಗಿ ನನ್ನೂಂತ ಹತ್ಗೆಳ್ಳಿಲ್ಲ ಗೌಡ್ರೆ, ಇವ್ರಿಬ್ರಾಗೆ ಯಾರ್ದಾದ್ರೂ ಇರ್‌ಬೋದೇನೊ ಅಂತ ಹೊಡ್ಕಂಡ್ ಬಂದೆ. ಅವ್ನದ್ದಾದ್ರೆ ಅವ್ನ ಹಿಡ್ಕಳ್ಳಿ, ಇವ್ನದಾದ್ರೆ ಇವುನ್ ಹಿಡ್ಕಳ್ಳಿ. ನೀವಾದ್ರೂ ಹೇಳಿಗೌಡ್ರೆ' ಅಂದ. ಗೌಡ ತನ್ ಮನಿಸ್ನ್ಯಾಗೆ 'ಹೋಹೋ ಊರೆಲ್ಲ ನಾ ಉಂಡಿಲ್ಲ ಅಂತ ಹೇಳೇತಿ' ಅಂದ್ಕಂಡು 'ನಿಮ್ ಕೆಪ್ರೆಗೆಲ್ಲ ಬಿಗ್ದೇನು! ನೀವ್ ಬ್ಯಾರೆ ಹೇಳಾಕೆ ಬಂದ್ರೇನೊ ಹೋಗ್ರೊ' ಅಂತ ಗದರಿಸ್ದ.

ಬಾಳತ್ತಾತು. ಅಟತ್ತಿಗೆ ಚಲೊ ಕಿವಿ ಕೇಳೋನೊಬ್ಬ ಅಲ್ಲಿಗೆ ಬಂದ. ಓಟ್ರೂ ತಾವ್ ಹೇಳಿದ್ನೆ ಹೇಳಿದ್ರು. ಅವ್ರಿಗೆಲ್ಲ ಸೊನ್ನೆ ಮಾಡಿ ಹೇಳಿದ. ಹರಗೋನಿಗೆ ಹರಗಾಕೆ ಹೇಳಿದ. ಕುರೆ ಕಾಯೋನಿಗೆ ಕುರೆ ಹೊಡ್ಕಂಡ್ ಹೋಗಾಕೆ ಹೇಳಿದ. ಕುದುರೆ ಹೊಡ್ಕಂಡ್ ಬಂದ ಸಾಬ್‌ನಿಗೆ ನೀ ಹೋಗು ಅಂದ. ಗೌಡ್ನಗೆ ಇವ್ರುಕುಂಟಾಗೇನ್ ಮಾತಾಡ್ತೀರಿ ಮನಿಗೆ ಹೋಗ್ರಿ ಅಂತ ಹೇಳಿದ. ಕುದುರೆ ಚನ್ನಾಗಿತ್ತು ಅಂದು ತಾನು ಹತ್ತಿಗಂದು ಹೊಂಟ.

೨

ಹಿಂಗೆ ನಿಮ್ ಜೇನಳ್ಳಿ ಅಂತ ಊರು. ಒಬ್ಬೋನು ಕೆಪ್ಪ ಉಕ್ಕೆ ಹೊಡಿತಾ ಇದ್ದ. ಒಂದ್ ಹಂಡೆತ್ತು ಇನ್ನೊಂದ್ ಹುಂಡೆತ್ತು ಹೂಡ್ಕ್ಯಂಡಿದ್ದ. ಕೆಂಚಿಕೊಪ್ಪದ ಕಡಿಂದ ಒಬ್ಬ ಆ ದಾರಿಗುಂಟಾಗೆ ಬಂದ, ಉಕ್ಕೆ ಹೊಡಿತಿದ್ದೋನ್ನ 'ಈ ದಾರಿ ಕತ್ತಿಗ್ಗೆ ಹೋಕತಾ ?' ಅಂತ ಕೇಳ್ದ. ಇವ್‌ನು ಎತ್ತು ಕೇಳ್ತಾನೆ ಅಂತಂದು 'ಹಂಡಗಾರ್‌ವರ ಹುಂಡುಗ್ ಮೂರ್ ವರ' ಅಂದ. 'ನಿನ್ನೆತ್ತ ಏನ್‌ಮಾಡ್ಲಿ ಮಾರಾಯ. ಈ ದಾರಿ ಎತ್ಲಾಗ್ಹೋಕತಿ ಹೇಳ್ ಬಾರ್ದ ?' ಅಂತ ಮತ್ತೆ ಕೇಳಿದ. ಕೆಪ್ಪ 'ನಾ ಒಂದ್ ಸಾರಿ ಹೇಳಿದ್ ಮ್ಯಾಲೆ ಹಗಲೆಲ್ಲ ಹೇಳಲ್ಲ' ಅಂತ ವಾದ್ಸಿದ. ಕೆಪ್ಪ ಇರಂಗೆ ಕಾಣ್ತಾನೆ ಅಂತ ತಾನೇ ಹಾದಿ ಹಿಡ್ಕಂಡ್ ಹೋದ.



ಕೆಪ್ಪನ್ಹೇಣ್ತಿ ಉಣ್ಣಾಕೆ ತಗಂದು ಬಂದ್ಲು. ಉಂಡ್ಕಂತ ಅಕಿ ಕುಂಟಾಗೆ 'ಏನೇ, ಎತ್ತಿಗ್ಯಾಪಾರ ಬಂದಿತ್ತು—ಹಂಡಗಾರ್‌ವರ ಹುಂಡುಗ್ ಮೂರ್ ವರಾಂತ ಹೇಳ್ದೆ' ಅಂದ. ಹೇಣ್ತೇನೂ ಕೆಪ್ಪೇ. ಗಂಡ ಮುದ್ದೆ ಜರೀತಾನಂತ ತಿಳ್ಕಂಡು 'ನಾ ಮಾಡಿಲ್ಲ ಮುದ್ದೇನ, ಗಂಟಾಗಿದಾವೆ ಅಂತೀಯು ? ಅತ್ತೆ ಮಾಡಿದಾಳೆ' ಅಂದ್ಲು. ಹಿಂಗಾಗಿ ಉಣ್ಣತ್ಲು ಮನಿಗೆ ಬಂದ್ಲು.

ಅತ್ತೆಕುಂಟಾಗೆ ಗಂಡ ಅಂದದ್ನ ಹೇಳಿದ್ಲು: ಅತೇ, ಗಂಟುಗ್ ಮುದ್ದ್ಯಾಗಿದಾವೆ. ಇದ್ನ್ಹೆಂಗೆ ಉಣ್ಣೋದು, ಮಾಡಿರೋರ್‍ಯಾರು ಅಂತ ಬೈದ್ರು' ಅಂತ. ಅತ್ತೆಗೆ ಸಿಟ್ಟು ಬಂತು. ಅಕೇನೂ ಮೊದ್ಲೆ ಕೆಪ್ಪೀನೆ. "ಏನೇ, ಈ ಊರ್ ಗೌಡುನ್ನ ಇಟ್ಗಂದಾಳೆ ಅಂತೀಯಾ ?" ಅಂತ ಜೋರ್ಸಿ ಹೋಡಿಯಾಕ್ಹೋದಂಗೆ ಕೇಳಿದ್ಲು. ಅವಗ ಮತ್ತೆ 'ನನ್ ಮಗ ಬರ್ಲಿ ತಡಿ ಹೇಳಿ ನಿನಿಗೆ ಮಾಡಿಸ್ತನಿ' ಅಂತ ಹೇಳಿದ್ಲು.

ಸಾಯಿಂಕಾಲಾತು. ಮಗ ಬಂದ. 'ತಮ, ಈ ಊರ್‌ಗೌಡುನ್ನ ಇಟ್ಗಂದಾಳೆ ಅಂತಾಳಿಕ್ಕೆ. ಇಕ್ಕೆ ಮೊದ್ಲು ಒದ್ದು ಓಡ್ಸು' ಅಂತ ಮಗುಗ್ಗೆ ಹೇಳಿದ್ಲು. ಮಗ ಕೆಪ್ಪಗೆ ಸಾರ್ ಮಾಡಾಕೆ ಇಟ್ಟಿರೊ ಅವರೆಕಾಳು ತಿಂದು ದೀಯಾ ಅಂತ ಬೈದಂಗಾತು. ಅದ್ಕೆ ಹಿಂಗಂದ: 'ಸೂರಿನ್ಯಾಳ ಸೊಟುಗ ಸೂರಿನ್ಯಾಗೈತಿ ನಾನೆಲ್ಲಿ ಅವ್‌ರೇಕಾಳು ತಿಂದೆ ?' ಅಂತ.

ಅಟತ್ತಿಗೆ ಒಂದಜ್ಜಿ ಬಂತು. ಆ ಅಜ್ಜಿಕುಂಟಾಗೆ ಹಿಂಗೆ ಹೇಳಿದ. ಅಜ್ಜಿ ಮಗಳು ಮದುವಿಗೆ ಬಂದಿತ್ತು. ಮನೆಯಾಗೆ ಸೀರಿದ್ದಿಲ್ಲ. ಅದ್ಕೆ ಕೇಳಾಕೆ ಅಂತ ಬಂದಿತ್ತಲ, ತನಿಗೆ ಸೀರೇನ ಒಳ್ಳೇದಾರಿಸಿ ಕೊಟ್ರೇನ್ ಸೈ ಅಲ್ಲ. ಅಂತಂದ್ಕಂತ 'ಯ್ಯಾ ಮದುವಿಗೆ ಕೆಂಪಂದರೆ ಹಸುರರೆ ಕರೆದರೆ ಕೊಡ್ರಿ ಮತ್ತೆ ತಂದ್ಕೊಡ್ತನಿ, ನಮ್ ಹುಡ್ಗಿ ಎಂತದ್ನರೆ ಉಟ್ಗಂತತಿ !' ಅಂತಂದ್ಲು. ಹಿಂಗೆ ಅಜ್ಜೀನೂ ಕೆಪ್ಪೀನೆ.

ಮತ್ತಂದ್ಹೆಜ್ಜಿಗೆ ಅಜ್ಜಿ ಮಗಳೂ ಬಂದ್ಲು. ಅಜ್ಜಿ ಮಗ್ಳೀಗೆ ಎಂತ ಸೀರೆ ಇಸ್ಕೊಡ್ಲಿ, ಹಿಂಗಾದಾವಿಲಿ, ಅಂತ ಕೇಳಿದ್ಲು. ಮತ್ತೆ 'ತಾಯಿ,

ನಿನ್ ಮಂದ್ವೀಗೆ ಹೊಸ ಸೀರೆ ತಂದ್ಕೊಡ್ಲೋ, ಇಲ್ಲೋ ಐತಲ ಇದ್ನೆ ಇಸ್ಗಳ್ಕೊ, ಅಂತ ಕೇಳ್ದಾಗ ಹುಡ್ಗಿ ಹಿಂಗಂತು : 'ಯಾ ಹುಚ್ಚುಗಾರೆ ಕೊಡ್ರಿ ಜಾಣಗಾರೆ ಕೊಡ್ರಿ' ಅಂತ ತನ್ನ ಯಾರಿಗರೆ ಮದುವೆ ಮಾಡಿ, ಕೊಡ್ಲಿ ಅನ್ನಂಗೆ ಹೇಳ್ತು. ಹಿಂಗೆ ಕೆಪ್ರು ಕೆಪ್ರು ಸೇರಿಕಂಡು ಒಂದಂದ್ ತರ ಮಾತಾಡಾಕೆ ಹತ್ತಿದ್ರು. ಕೇಳ್ದೋರಿಗೆಲ್ಲ ಇದೊಂದ್‌ಥರ ಹಾಸ್ಯಾಗಿತ್ತು.

—

# ತೊಡೆ ಮ್ಯಾಲೆ ಗಂಡ ತೋಳು ಮ್ಯಾಲೆ ಮಿಂಡ

ಚಂದ್ರಾವತಿ ಅನ್ನೋದೊಂದು ಪಟ್ಣ. ಆ ಪಟ್ಣಕ್ಕೆ ರಾಜ ಯಾರಪ್ಪಂದ್ರೆ ಚಂದ್ರಶೇಖರರಾಯ. ಅವನು ಒಂದಿನ ಪಟ್ಣ ಸಂಚಾರ ಕ್ಹೋದಾಗ ಏನಾಯ್ತಪ್ಪಂದ್ರೆ ಬಾವಿ ಕಟ್ಟೆ ಹತ್ರ ಒಂದು ಹೆಣ್ ನೋಡ್ದ. ಅವ್ಳು ಬಾಳ ಚಂದಾಗಿದ್ಲು. ಮದ್ವೆಯಾದ್ರೆ ಇವ್ಳೇ ಆಗ್ಬೇಕು ಅಂತ ಮಂತ್ರಿಗ್ಹೇಳ್ದ. ಮಂತ್ರಿ ಆ ಹುಡ್ಗಿ ತಂದೆತಾಯ್ಗೊಳ ಇಚಾರಿಸಿದಾಗ ಅವ್ರು ಬಾಳ ಸಂತೋಸಪಟ್ಕೊಂಡು ತಮ್ಮ ಮಗಳ್ನ ರಾಜಂಗೆ ಧಾರೆ ಹುಯ್ಕೊಟ್ರು. ಆ ಹೆಣ್ಣು ರಾಣಿಯೇನೊ ಆದ್ಲು. ಆದ್ರೆ ಅವುಳು ಮದ್ವೇಗ್ ಮುಂಚೆ ಬಸನಿಂಗ ಅನ್ನೋ ಆಚಾರ್‍ರ್ನೋನ್ನ ಮಡಿಕೊಂಡಿದ್ಲು. ಅವ್ನಗ್ಗ ಇವುಳುನ್ ಬುಟ್ಟಿರಕಾಗಕಿಲ್ಲ. ಇವ್ಳಿಗ್ಗಿ ಅವುನ್ ಬುಟ್ಟಿರಕಾಗಕಿಲ್ಲ. ಆಗ ಆ ಆಚಾರಿ ಏನು ಮಾಡುದ್ನಪ್ಪಂದ್ರೆ ಒಬ್ಬ ಮಾಟ್ಲ ಕೂಟ್ಲ ಮಾಡೋನ ಹಿಡ್ದು ನೂರೂಪಾಯ್ ಕೊಟ್ಟು "ಅವುಳತ್ರಕ್ಹೋಗಕ್ಕೆ ಏನರೂ ಒಂದು ಉಪಾಯ ಹೇಳ್ಬೇಕು" ಅಂದ. ಅವ್ನ ಒಂದು ಮಂತ್ರ ಹೇಳ್ಕೊಟ್ಟು 'ನೀನು ಯಾವಾಗ ಅವುಳತ್ರಕೆ ಹೋಗ್ಬೇಕು ಅನುಸ್ತದೋ ಆಗ ಈ ಮಂತ್ರ ಹೇಳು, ಆಗ ನಿನ್ಗೆ ಹಾವುನ್ ರೂಪಾಯ್ತದೆ. ಅರ್ಮನೆಗೋಗಿ ರಾಣಿ ನೋಡ್‌ಬೈದು' ಅಂದ. ಆಚಾರಿ ಬಸನಿಂಗ ಹಂಗೆ ಮಾಡ್ದ. ಅವುನ್ ಏಳೆಡೆ ಕಾಳಿಂಗ ಸರ್ಪ ಆಗಿ ರಾಣಿ ಮನುಗಿರೊ ಮಾಡದ ಮನೆಗೆ ಹೋದ.

ಮಹಾರಾಣಿ ಮಂಚದ ಮ್ಯಾಲೆ ಮನುಗಿದ್ಲು. ಈ ಹಾವು ಅವಳ ತಲ್ದೇಸಿಗೆ ಹೋಗಿ ಅವುಳ್ ಮೊಕುದ್ಮ್ಯಾಲೆ ಹೆಡೆ ಆಡುಸ್ತಾ ಇತ್ತು. ಇವುಳ್ಗೆ ಎಚ್ಚರ ಆಯ್ತು. ಕಣ್ ಬುಟ್ಟು ನೋಡುದ್ರೆ ಏಳೆಡೆ ಕಾಳಿಂಗ ಸರ್ಪ! ಕಿಟ್ಟಂತ ಕಿರುಚ್ಕೋಬೇಕು ಅನ್ನುವಾಗ ಆ ಹಾವು :

'ಹೆದ್ರುಬ್ಯಾಡ. ನಾನು ಬಸನಿಂಗ. ನಿನಗೇನೂ ತೊಂದ್ರೆ ಮಾಡಕಿಲ್ಲ.' ಅಂತ ಧೈರ್ಯ ಹೇಳ್ತು. "ನಾನು ನಿನ್ಮೇಲೆ ಪ್ರೀತಿಯಾಗಿ ಇಲ್ಲಿಗೆ ಬಂದಿವ್ನಿ" ಅಂದಾಗ ಅವುಳ್ಗೆ ಬಾಳ ಸಂತೋಷವಾಗಿ ಅದುರ್‌ಕುಟ್ಟೆ ಮಾತಾಡ್ತ ಸಂತೋಷದಿಂದ ಕಾಲ ಕಳೀತಾಳೆ. ಹಿಂಗೆ ಎಷ್ಟೋ ದಿನಗಳು ಇವುರಿರ್ತರೆ.

ಬಸನಿಂಗನೂ ರಾಣೀನೂ ಜೊತೆಲಿರೋಗ ರಾಜ ಬಂದು ಬಾಗ್ಲು ತಟ್ತನ. "ಅಯ್ಯೋ ರಾಜ ಬಂದ್ನಲ್ಲ" ಅಂತನೆ. ಬಸನಿಂಗ ಹಾವಾಗಿ ಮಂಚದ ಕೆಳ್ಗೆ ಅವುತ್ಕೊತಾನೆ. ಒಂದಿನ ಇವರಿಬ್ರು ಮಾತಾಡ್ಕೊತರೆ.

"ಈ ರಾಜ ಇದ್ರುಲ್ವ ನನ್ಗೂ ತೊಂದ್ರೆ ?" ಅಂತನೆ ಬಸನಿಂಗ.

"ಹಂಗಾರೆ ಏನ್ಮಾಡನ ?" ಅಂತ ಕೇಳ್ತಳೆ ರಾಣಿ.

ಅದ್ಕೆ ಇವನು "ನೋಪು ನೀನು ತಲ್ನೋವು ಅಂತ ಮನಿಕೊ. ಏನೇನ್ ಔಸ್ತಿ ಮಾಡಿದ್ರು ತಲ್ನೋವು ಹೋಗ್ಲಿಲ್ಲ ಅನ್ನು 'ಹಂಗಾರೆ ಅದ್ಕೆ ಏನು ಔಸ್ತಿ' ಅಂತ ರಾಜ ಕೇಳ್ತನೆ, ಅದ್ಕೆ ನೀನು 'ನಮ್ಮರ್ಮನೆ ತ್ವಾಟದ ಮಧ್ಯದಲ್ಲಿರೋ ಹುತ್ತದ ಮಣ್ಣು ಮಧ್ಯ ರಾತ್ರೀಲಿ ಅಗದು ತಂದು ತಲೆಗೆ ಪಟ್ಟು ಕಟ್ಟುದ್ರೆ ವಾಸಿ ಆಯ್ತದೆ' ಅನ್ನು. ರಾಜ ಮಣ್ ತರಾಕೆ ಹುತ್ತುಕ್ಕೆ ಬಂದಾಗ ನಾನು ಅವುನ್ನ ಕಚ್ಚಿ ಸಾಯುಸ್ತೀನಿ" ಅಂತನೆ.

ರಾಣಿ ಹಂಗೆ ಮಾಡುದ್ಲು. ರಾಜ ಬಂದು ನೋಡಿ ವೈದ್ಯರನ್ನೆಲ್ಲ ಕರ್ಸಿ ಔಸ್ತಿ ಕೊಡುಸ್ದ. ಅವುಳ ತಲ್ನೋವು ನಿಲ್ನಿಲ್ಲ ಆಗ ರಾಜ ;

"ಇನ್ನೇನು ಔಸ್ತಿ ?" ಅಂತ ಕೇಳ್ತನೆ.



"ಒಂದೇ ಔಸ್ತಿ" ಅಂತಳೆ

"ಅದ್ಯಾವ್ದು ಹೇಳು" ಅಂತ ಕೇಳ್ತನೆ.

"ನಮ್ಮ ಉದ್ಯಾನುವನದಲ್ಲಿ ಒಂದು ದೊಡ್ಹುತ್ತ ಅದೆ. ಆ ಹುತ್ತದ ಮಧ್ಯದ ಮಣ್ಣು ತಂದು ಆ ಮಣ್ಣು ನನ್ನ ತಲೆಗೆ ಕಟ್ಟುದ್ರೆ ನನ್ನ ತಲ್ನೋವೋಯ್ತದೆ" ಅಂತ ಹೇಳ್ತಳೆ.

"ಇಷ್ಟೇ ತಾನೆ ಬುಡು" ಅಂತ ಹೇಳಿ ರಾಜ ಸಮುಸಮೊತ್ನಲ್ಲಿ ಆಯುಧಗಳ ಸಮೇತ ಹೋಗಿ ಹುತ್ತ ಅಗೀತಾ ಅವ್ನೆ. ಅಷ್ಟೊತ್ಗೆ ಈ ಘಟ ಸರ್ಪ ಇತ್ತಿಲ್ಲ ರಾಜುನ್ನ ಕಚ್ಚಬೇಕು ಅಂತ ಬುಸ್ಗುಟ್ಕೊಂಡು ಮ್ಯಾಕೆ ಬಂತು. ಆಗ ರಾಜ ಥಟ್ಟನೆ ಕತ್ತಿ ಹಿರ್ದು ಮೂರು ತುಂಡ್ಗೆ ಕತ್ತುರುಸ್ದ. ಅದ್ನ ತಗುದ್ ಅಲ್ಲೊಂದು ಹಳ್ಳಾ ಹರೀತಿತ್ತು. ಆ ಹಳ್ಳದಿಂದ ಆಚೆ ಕಡೆಗೆ ಎಸ್ದ. ಮಣ್ಣು ತಂದು ಹೆಂಡ್ತಿ ಹಣೆಗೆ ಪಟ್ಟು ಕಟ್ಟುದ. ಮಹಾರಾಣಿ ಮೂರನೇ ದಿನಕ್ಕೆ "ನಾನು ಸುಖವಾಗಿದ್ದೀನಿ" ಅಂದಳು. ಆಗ ರಾಜ ದರಬಾರಕ್ಕೆ ಅಂತ ಹೋದ.

ಇತ್ಲಾಗೆ ಇವ್ಳು ಬಸನಿಂಗ ಬರ್ನಿಲ್ಲವಲ್ಲ ಅಂತ ಚಿಂತೆಮಾಡ್ತ ತ್ವಾಟಕ್ಕೆ ಹೋದ್ಲು. ಹುತ್ತ ಅಗ್ದಿತ್ತು. ಅಲ್ಲಲ್ಲೆ ರಕ್ತ ತೊಟ್ಟಿಕ್ಕಿತ್ತು. ಸುತ್ತ ಮುತ್ತ ಹುಡುಕಾಡುದ್ಲು. ಎಲ್ಲೂ ಹಾವುನ ಪತ್ತೆ ಸಿಕ್ನಿಲ್ಲ. ತಿರುಗಾಡ್ಕೊಂಡು ಮುಂದಕ್ಕೆ ಹೋದ್ಲು. ಹೋದ್ರೆ ಅಲ್ಲೊಬ್ಬ ಹುಡುಗ ದನಕಾಯ್ತಾ ಇರ್ತನೆ. ಅವುನ್ನ ಕರೀತಾಳೆ ಅವುನ್ಗೆ ಹೇಳ್ತಳೆ ;

"ಆಚೆ ಏನೊ ಕಾಣ್ತಾದಲ್ಲ, ಅದೇನು ಅಂತ ನೋಡ್ಕೊಂಡು ಬತ್ತಿಯಾ ? ನಿಂಗೆ ಒಂದ್ರುಪಾಯ್ ಕೊಡ್ತಿನಿ'' ಅಂತಳೆ, ಆ ಹುಡ್ಗ ಹೋಯ್ತನೆ ಅಲ್ಲಿಗೋಗಿ ನೋಡ್ಕಂಡ್ ಬಂದು ಹೇಳ್ತನೆ ;

"ಅವ್ವಾ ಅತ್ಲಾಗೆ ಯಾರೋ ಒಂದ್ ಹಾವ್ ಹೊಡ್ದಾಕವರೆ'' ಅಂತನೆ. ಅದಕ್ಕೆ ಇವ್ಳು ;

''ನಿಂಗೆ ಎರಡ್ರೂಪಾಯ್ ಕೊಡ್ತೀನಿ ಅದುರಂದೊಂದು ಚೂರು ಬಾಲ ಕುಯ್ದು ತಂದು ಕೊಡ್ತಿಯಾ ?'' ಅಂತಾಳೆ.

''ಆಗ್ಲಿಕನವ್ವ'' ಅಂತ ಹೇಳಿ ಓಡೋಗಿ ಒಂದು ಚೂರು ಬಾಲ ಕುಯ್ಕೊಂಡು ಬತ್ತನೆ. ಆ ಹುಡುಗುಂಗೆ ಎರಡ್ರೂಪಾಯಿ ಕೊಡ್ತಳೆ. ಅಲ್ಲಿಂದ ಆಚಾರ್ರು ಮನೆಗೋಯ್ತಳೆ.

''ಮೂರ್ರೂಪಾಯಿ ಕೊಡ್ತಿನಿ ಒಂದು ತಾತಿ ಮಾಡ್ಕೊಡು" ಅಂತಾಳೆ. ಆಚಾರಿ ತಾತಿ ಮಾಡ್ಕೊಡ್ತನೆ, ಆದ ತಂದು ಆದರೊಳೀಕೆ ಬಾಲದ ಚೂರು ಸೇರ್ಸಿ ತನ್ನ ತೋಳ್ಗೆ ಕಟ್ಕೊತಳೆ.

ಆದಿನ ಮಹಾರಾಜ ಮಾಳ್ಗೆ ಮನೆಗೆ ಬತ್ತನೆ. ಆಗಿವಳು "ನಿಮುಗೊಂದು ಒಗಟೇಳ್ತಿನಿ ಕೇಳ್ತಿರಾ?" ಅಂತಳೆ.

''ಅದೇನು ಹೇಳು" ಅಂತನೆ ರಾಜ.

"ಸುಮ್ಕೆ ಹೇಳೋದಲ್ಲ. ಆ ಒಗಟೆ ಒಡೀದೆ ಹೋದ್ರೆ ಅದಕ್ಕೆ ಶಿಕ್ಷೆ ಅದೆ'' ಅಂಶಳೆ,

"ಆಯ್ತು ಹೇಳು" ಅಂತನೆ

"ಆಮ್ಯಾಲೆ ಮಾತಿಗೆ ತಪ್ಬಾರ್ದು" ಅಂತಳೆ

"ತಪ್ಪಕೆ ನಾನು ನಮ್ಮಪ್ಪನ ಮಗ" ಅಂತ ಹೇಳ್ತನೆ. ಆಗಿವಳು ಒಗಟೇಳ್ತಳೆ ;

"ಒಂದು ಕೊಟ್ಟು ನೋಡುಸ್ದೆ
ಎರಡು ಕೊಟ್ಟು ತರುಸ್ದೆ
ಮೂರು ಕೊಟ್ಟು ಮಾಡುಸ್ದೆ



ತೊಡೆ ಮ್ಯಾಲೆ ಗಂಡ
ತೋಳ ಮ್ಯಾಲೆ ಮುಂಡ
ಇದ ಹೇಳದೆ ಹೋದೋನ್ಗೆ ಕೆಂಡಕೊಂಡ"

ಅದಕ್ಕೆ ರಾಜ ಬಾಳ ಯೋಚನೆ ಮಾಡ್ತನೆ. ಅರ್ಥ ಹೊಳಿಯುಕಿಲ್ಲ

''ಯೋಚ್ನೆ ಮಾಡ್ತಿನಿ ಒಸಿ ಕಾಲ ಬೇಕು" ಅಂತನೆ.

''ಯೋಚ್ನೆ ಮಾಡಿ ಬ್ಯಾಡ ಅನ್ನಾಕಿಲ್ಲ. ನಲವತ್ತು ದಿನ ವಾಯಿದ್ದೆ ತಕ್ಕೊಳ್ಳಿ. ನಿಮ್ಗೆ ಹೇಳಕ್ಕೆ ಬರದಿದ್ರೆ ನಿಮ್ ಕಡೇರ್ ಯಾರ ಕೈಲಾದ್ರೂ ಹೇಳ್ಸಿ ಪರ್ವಿಲ್ಲ'' ಅಂತಳೆ.

ರಾಜ ಯಾರ್ಯಾರ್ನೆಲ್ಲ ಕೇಳ್ದ. ಯಾರ್ಗೂ ಇದೇನು ಅಂತ ತಿಳೀನಿಲ್ಲ. ಹಿಂಗೆ ಮೂವತ್ತೊಂಬತ್ತು ದಿನ ಕಳುದೋಯ್ತು. ಇನ್ನೊಂದೇ ಒಂದು ದಿನ ಅದೆ. ಕಡೆದಾಗಿ ಸಾಯಹಾಕೆ ಮುಂಚೆ ನಮ್ಮಕ್ಕನ್ನ ನೋಡ್ಬುಟ್ಟು ಬರಬೇಕು ಅಂತ್ಹೇಳಿ ನೀಲಾವತಿ ಪಟ್ಣಕೊಯತ್ತಾನೆ. ಅಕ್ಕ ತಮ್ಮನ್ನ ನೋಡಿ ಗೋಳೊ ಅಂತ ಅಳ್ತಳೆ.

''ಯಾಕಪ್ಪಾ ಹಿಂಗಾದೆ, ಇರೋನು ಒಬ್ನೆ ತಮ್ಮ ಅಂತ ಎಷ್ಟು ಚಂದಾಗಿ ನೋಡ್ಕೊಂಡಿದ್ದೊ'' ಅಂತಳೆ.

ಅದುಕ್ಕವನು ಎಲ್ಲಾ ವಿಷ್ಯಾನು ಹೇಳ್ತನೆ. "ಕಡೇದಾಗಿ ನಿನ್ನ ನೋಡ್ಕೊಂಡು ಹೋಗಾನ ಅಂತ ಬಂದೆ. ನಾಳೆ ನಾನು ಕೆಂಡ ಕೊಂಡ ಆಯ್ತೀನಿ" ಅಂತ ಕಣ್ಣೀರು ಹಾಕ್ತನೆ. "ಹೇಳಿದ ಮಾತ್ಗೆ ತಪ್ಪುದ್ರೆ ನನ್ನ ಪ್ರಜೆಗಳೂ ದಾರಿ ತಪ್ತರೆ. ಅದ್ಕೆ ನಾನು ಮಾತಿಗೆ ತಪ್ಪೋದಿಲ್ಲ." ಅಂತನೆ.

ಅದೇ ರಾತ್ರಿ ಅಕ್ಕ–ತಮ್ಮ ಇಬ್ರೂವೆ ಚಂದ್ರಾವತಿ ಪಟ್ಣಕೆ ಪ್ರಯಾಣ ಹೊರಡ್ತಾರೆ. ರಾತ್ರಿ ಪ್ರಯಾಣ. ನಿದ್ದೆ ಬಂದಂಗಾಯ್ತದೆ. ಒಂದು ಮರದ ಕೆಳಗೆ ಮಲಕೋತಾರೆ. ತಮ್ಮುಂಗೆ ನಿದ್ರೆಬಂದ್ಬುಡ್ತು. ಅಕ್ಕ ಎಚ್ಚರವಾಗೇ ಮನಿಕೊಂಡವ್ಳೆ.

ಆಗ ಮರದ ಮ್ಯಾಲುಕ್ಕೆ ಗಂಡಭೇರುಂಡ ಹೆಣ್ಣುಭೇರುಂಡ ಅನ್ನೋ ವೆರೆಡು ಪಕ್ಷಿಗಳು ಬಂದು ಕುಂತ್ಕೊತವೆ. ಕುಂತ್ಕೊಂಡು ಏನು ಮಾತಾಡಿದವಪ್ಪ ಅಂದ್ರೆ,

"ಅಯ್ಯೋನೋಡೆ ಹುಚ್ಚು ರಾಜ ಇವ್ನು. ಹೆಂಡ್ತಿ ಒಡ್ಡಿದ ಒಗಟಿಗೆ ಉತ್ತರ ಹೇಳಲಾರ್ದೆ ನಾಳೆ ಪ್ರಾಣ ಬಿಡ್ತಾನೆ ನೋಡು. ಆ ಕತೆ ಏನು ಅನ್ನದ ಇವುನು ಹೇಳಾಕಾಗ್ನಿಲ್ವಲ್ಲ'' ಅಂತ ಗಂಡಭೇರುಂಡ ಪಕ್ಷಿ ಹೆಣ್ಣುಭೇರುಂಡ ಪಕ್ಷಿಗೆ ಹೇಳ್ತದೆ. ಅದ್ಕೆ ಹೆಣ್ಣುಭೇರುಂಡ,

''ಅದೆಂತಾ ಕತೀನ್ರಿ ? ಹೇಳ್ರಿ ಹೇಳ್ರಿ'' ಅಂತ ಕೇಳ್ತದೆ.

"ಅಯ್ಯೋ ಅದೊಂದು ಕತಿಯಾ ? ಸುಲಭಾಗೈತಿ ಸ್ವಲ್ಪಿರು ಅವ್ರು ಮನಿಕೊಳ್ಳಿ ಹೇಳ್ತಿನಿ'' ಅಂತದೆ.

ಇದುನ್ನೆಲ್ಲ ಅಕ್ಕ ಎಚ್ಚರವಾಗಿದ್ಕೊಂಡು ಕೇಳ್ಕೊತಾ ಅವ್ಳೆ. ಮಹಾರಾಣಿ ರಾಜುನ್ನ ಸಾಯಿಸೋಕ್ಕೋಸ್ಕರ ಮಾಡಿದ ಕೆಲ್ಸನೆಲ್ಲ ಗಂಡಭೇರುಂಡ ಪಕ್ಷಿ ಈ ತರುಕೀತರಾ–ಹಿಂಗಿಂಗೆ–ಹಿಂಗಿಂಗೆ–ಹಿಂಗಿಂಗೆ ಅಂತ ಹೇಳ್ತದೆ. ಅದುಕ್ಕೆ ಹೆಣ್ಣುಭೇರುಂಡ ಪಕ್ಷಿ ಆ ಒಗಟಿಗೆ ಉತ್ರ ಏನು ಅಂತ ಕೇಳ್ತದ. ಆಗ ಗಂಡಭೇರುಂಡ—

''ಒಂದು ಕೊಟ್ಟು ನೋಡುಸ್ದೆ ಅಂದ್ರೆ ಒಂದು ರೂಪಾಯಿ ಕೊಟ್ಟು ಆ ಹಾವು ಎಲ್ಲಿ ಬಿದ್ದದೆ ಅಂತ ಹುಡುಕಿಸಿದ್ಳು, ಎರಡು ಕೊಟ್ಟು ತರುಸ್ದೆ ಅಂದ್ರೆ- ಎರಡು ರೂಪಾಯಿ ಕೊಟ್ಟು ಆ ಹಾವುನ ಬಾಲದ ಚೂರು ತರಿಸಿದ್ಳು. ಮೂರು ಕೊಟ್ಟು ಮಾಡುಸ್ದೆ ಅಂದ್ರೆ ಮೂರು ರೂಪಾಯಿ ಕೊಟ್ಟು ಅಕ್ಕಸಾಲಿಗನ ಹತ್ರ ತಾತಿ ಮಾಡಿಸಿ ಆ ಹಾವುನ ಬಾಲವನ್ನು ಅದಕ್ಕೆ ಸೇರಿಸಿದ್ಳು. ತೊಡೆ ಮ್ಯಾಲೆ ಗಂಡ ಅಂದ್ರೆ—ರಾಜ. ತೋಳ ಮ್ಯಾಲೆ ಮಿಂಡ ಅಂದ್ರೆ ಆ ತಾತಿಯು ಅವುಳು ತೋಳುಗೆ ಕಟ್ಕೊಂಡವ್ಳೆ. ಇಷ್ಟು ಸಣ್ಣ ವಿಚಾರಕ್ಕೆ ರಾಜನ ಪ್ರಾಣವೇ ಹೋಯ್ತಾದಲ್ಲ ಹುಂ, ಅವರವರ ಹಣೆಬರಹ !" ಅಂತ ಹೇಳ್ಬಿಟ್ಟು ಎರಡು ಪಕ್ಷಿಗಳೂ ಪುರ್‍ರ್ ಅಂತ ಹಾರಿ ಹೋಯ್ತುವೆ.



ಇದುನ್ನೆಲ್ಲ ಕೇಳ್ಕೊಂಡ್ಳು ಈ ರಾಜನ ಅಕ್ಕ. ಕೇಳ್ಕೊಂಡು ನನ್ನ ತಮ್ಮನ ಪ್ರಾಣ ಉಳುಸ್ತೀನಿ ಅಂತ ಮನುಸ್ನಲ್ಲಿ ಮಾಡ್ಕೊಂಡು ಹೊತ್ತಾರೆ ಹೊತ್ಗೆ ಪಟ್ಟುಣ್ಕೆ ಬತ್ತಳೆ, ಅಷ್ಟೊತ್ಗೆ ಕೊಂಡದಲ್ಲಿ ಬೆಂಕಿ ಧಗಧಗಾಂತ ಉರೀತಾ ಅದೆ. ಅಲ್ಲಿಗೆ ನಲವತ್ತು ದಿನ ಆಗೋಯ್ತು. ಎಲ್ಲಾ ರಾಜುರ್ನೂ ಕರ್ಸಿದ್ದಾಳೆ ಮಹಾರಾಣಿ. ಎಲ್ಲರೆದುರ್ಗೂ ಅಕ್ಕ-ತಮ್ಮ ನಿಂತವ್ರೆ. ಆಗ ರಾಣಿ ಹೇಳ್ತಳೆ. ''ರಾಜ ನಾನು ಕೇಳಿದ ಒಗಟಿಗೆ ಉತ್ತರ ಹೇಳಬೇಕು, ಇಲ್ಲ, ಅಗ್ನಿ ಪ್ರವೇಶ ಮಾಡಬೇಕು, ರಾಜುಂಗೆ ಗೊತ್ತಾಗದೆ ಇದ್ರೆ ಯಾರಾದ್ರೂ ಹೇಳಿ ರಾಜುನ್ನ ಉಳಿಸ್ಕೊಬೋದು !'' ಅಂತಳೆ, ಆಗ ರಾಜುನ ಅಕ್ಕ ನಾದಿನಿಯ ಕರ್ದು ಎಲ್ಲಾರ ಮುಂದೆ ನಿಲ್ಸಿ ತಮ್ಮನ ನಾದ್ನಿ ತೊಡೆ ಮೇಲೆ ಕುಂಡ್ರುಸ್ತಳೆ ''ನಿನ್ನ ತೋಳುನಾಗಿರೋ ಮಿಂಡುನ್ನ ತಗೀ ಈಚೆಗೆ'' ಅಂತಳೆ, ಆಗ ರಾಣಿ ತಾತಿ ಬಿಚ್ಚಿ ಮಡುಗ್ತಳೆ. ರಾಜನ ಅಕ್ಕ ಬಂದಿದ್ಯೋರಿಗೆಲ್ಲ ಕೈಮುಗಿದು ಆದಿಯಿಂದ ನಡೆದ ವಿಷ್ಯಾನೆಲ್ಲ ಈ ತರಕೆ ಈ ತರಾ-ಈತರಕೆ ಈ ತರಾ-ಅಂತ ಹೇಳ್ತಳೆ. ಆಗ ಮಾರಾಣಿ ತಲೆ ತಗ್ಗುಸ್ಕೊಂಡ್ಳು. ರಾಜುಂಗೆ ಆಶ್ಚರ್ಯ ಆಯ್ತು. ಆಗ ಆ ರಂಡೆ ಕೆಂಡಕೊಂಡ ಆದಳು.

ಆಮೇಲೆ ಬ್ಯಾರೆ ದೇಶದ ರಾಜಕುಮಾರಿ ತಂದು ಅವುನ್ಗೆ ಮದುವೆ ಮಾಡಿದ್ರು, ಅಕ್ಕ ನೀಲಾವತಿ ಪಟ್ಟುಕ್ಕೊಂಡ್ಳು, ಈ ರಾಜ ರಾಣಿ ಸುಖವಾಗವ್ರೆ.

# ಸಾವಿರದ ಬುದ್ಧಿ

ಒಂದು ಪಟ್ಣದಲ್ಲಿ ಒಬ್ಬ ರಾಜ. ಆ ರಾಜುಂಗೊಬ್ಬ ಮಂತ್ರಿ. ಪ್ರೇಮುವಾದ ಮಂತ್ರಿ ; ಪ್ರೀತಿಯಾದ ದೊರೆ. ಹಿಂಗಿರೋಗ ಒಂದಾನುಒಂದಿವ್ಸ ಬೇರೆ ದೇಸುದಿಂದ ಒಬ್ಬ ಇದ್ದುಮಾಂಸ ಬಂದ. ಅವ್ನು ಆ ಪಟ್ಣ ಸೇರಿ ಒಬ್ಬ ಸಿನೇತುನ ಸಂಗ ಮಾಡ್ದ. ಆ ಸಿನೇತ ಅರುಮನ್ಗೆ ಬೇಕಾದಂತೆ ಮನುಸ. ಸಿನೇತುನ ಸಂಗ್ದಲ್ಲಿ ಒಂದಿವ್ಸ ಅರಮನೆಗ್ಹೋದ. ಮಾರಾಜ್ರು :

'ಇವ್ರುರ್ಯಾರು ?' ಅಂತ ಕೇಳುದ್ರು. ಅದುಕ್ಕೆ ಇವ್ನು,

'ಇವ್ರು ದೊಡ್ಡ ಇದ್ದುಮಾಂಸ್ರು. ಬ್ಯಾರೆ ದೇಸ್ದಿಂದ ಬಂದು ನಮ್ಮ ಪಟ್ಣ ಸೇರವ್ರೆ ಬುದ್ಧಿ' ಅಂದ. ಮಾರಾಜ್ರು ಸಂತೋಸ ಅಂದು ಸುಮ್ಮನಾದ್ರು. ಆಗ ಇವ್ರು 'ಅರಮನೆ ಬುಂಟ್ರು ಬಂದ್ಬುಟ್ರು. ಈ ಇದ್ದುಮಾಂಸ :

'ಸ್ವಾಮಿ ಸ್ವಾಮಿ ನನಗೆ ನಿಮ್ಮ ಸಾಯದಿಂದ ಅರಮಲ್ಲಿ ಯಾವ್ದಾದ್ರೂ ನೌಕ್ರಿ ಕೊಡ್ಸಿ' ಅಂತಂದ. ಅದ್ಕೆ ಸಿನೇತ ಆಗ್ಲಿ ಅಂತ ಒಪ್ಕೊಂಡು ಇನ್ನೊಂದಿನ ದೊರೆಗಳತ್ರುಕೆ ಬಂದಾಗ ಆ ಮಾತೆತ್ತಿದ :

'ಸ್ವಾಮಿ ನಾನವತ್ತು ಕರ್ಕೊಂಡ್ಬಂದಿದ್ನಲ್ಲ ಅವ್ರು ಬಾಳ ಬುದ್ಧಿವಂತ್ರು. ಅವ್ರು ಹಿಂದೆ ಮಂತ್ರಿ ಪದವಿ ಮಾಡ್ತಿದ್ರಂತೆ. ಅವ್ರುಗ್ಗೆ ನಿಮ್ ದರಬಾರ್ದಲ್ಲಿ ಒಂದು ನೌಕ್ರಿ ಮಾಡ್ಕೊಡಿ" ಅಂತ ಕೇಳ್ಕೊಂಡ.



'ಹಂಗಾದ್ಮೇಕೆ ನಾಳೆ ದಿವ್ಸ ಅವುರ್ನ ಕರ್ಕೊಂಡ್ಬಾಪ್ಪ' ಅಂದ್ರು.

ಇವ್ನು ನಾಳೆ ದಿವ್ಸ ರಾಜುನ್ತಾಕೆ ಅವುನ್ನ ಕರ್ಕೊಂಡ್ಬಂದ. ಆವಾಗ ರಾಜ್ರು :

'ಏನಪ್ಪ, ನಿನ್ನ ಬುದ್ಧಿ ಚಟುವಟ್ಕೆ ? ಏನ್ ನೌಕ್ರಿ ಮಾಡ್ತಿ ?' ಅಂತ ಕೇಳಂದ್ರು.

'ಸ್ವಾಮಿ, ತಾವು ಯಾವುದ್ಕೆ ನೇಮುಸ್ತೀರೊ ಅದ್ಕೆ ನಾನು ಜಾಗರೂಕನಾಗಿದ್ದೀನಿ' ಅಂದ.

ಈ ಮಾತಾಡೋಗ ಆ ರಾಜುನ ಮಂತ್ರಿ ಅಲ್ಲಿರ್ನಿಲ್ಲ. ಆಗ ದೊರೆಗಳು:

'ಹಂಗಾದ್ರೆ ಸಂಬ್ಳ ಎಷ್ಟ್ ಕೊಡ್ಬೇಕು ?' ಅಂತ ಕೇಳುದ್ರು.

'ನಿಮ್ಮಿಷ್ಟ ಸ್ವಾಮಿ ಅದ ನಾ ಹೇಳಕಿಲ್ಲ' ಅಂದ.

'ಹಂಗಾದ್ರೆ ಒಂದ್ಸಾವುರ್ರೂಪಾಯ್ ಕೊಡ್ತೀನಿ, ಹೆಂಗಿದ್ರೂ ನೀವು ನಿಮ್ಮ ದೇಸ್ದಲ್ಲಿ ಮಂತ್ರಿ ಚಾಕ್ರಿ ಮಾಡಿದ್ದೀರಲ್ಲ ನನ್ನ ರಾಜ್ಯಕ್ಕೆ ಮಂತ್ರಿಯಾಗಪ್ಪ' ಅಂದ್ರು.

'ಆಗ್ಲಿ ಬುದ್ಧಿ ಇದ್ಕೊತೀನಿ' ಅಂದ.

ಮೊದಲಿದ್ದ ಮಂತ್ರಿಕೆ ಎರಡ್ಸಾವುರ್ರೂಪಾಯ್ ಸಂಬ್ಳ ಕೊಡ್ತಾಇದ್ರು. ಹೊಸಬುನ್ ನೇಮುಸ್ಕೊಂಡ್ರೆ ಒಂದ್ಸಾವುರ್ರೂಪಾಯ್ ಉಳಿತದಲ್ಲ ಅಂತ್ಹೇಳಿ ಹಿಂದಿದ್ದ ಮಂತ್ರಿಯ ಕೆಲುಸ್ದಿಂದ ವಜಾ ಮಾಡ್ಬುಟ್ರು.

ಹಿಂಗೆ ಎಷ್ಟೋ ವರ್ಷ ಕಳುದೊ.

ಒಂದಿನ ಸನ್ನಿಪುದ ದೇಸದ ದೊರೆ ಇವುರ್ಗೆ ಒಂದು ಕಾಜ್ಗ ಬರ್ದು ಕಳುಸ್ದ. ಆ ಕಾಜ್ಗದಲ್ಲಿ ಏನಿತ್ತಪ್ಪಾಂದ್ರೆ—

"ನಿಮ್ದೇಸಂದ ಬುದ್ಧಿ ವಿವೇಕ ನಡುವಳ್ಕೆನೆಲ್ಲ ಗಾಡಿಗೆ ಭರ್ತಿ ಮಾಡಿ ನಮಂಗೆ ಕಳುಸ್ಬೇಕು. ಕಳುಸ್ದೇ ಹೋದ್ರೆ ನೀವು ನಮ್ಗೆ ಪೊಗದಿ ಕೊಡ್ಬೇಕು ಮೂರ್ತಿಂಗುಳೊಳ್ಗೆ ಯಾವುದ್ನೂ ನಮ್ಗೆ ತಿಳುಸ್ಬೇಕು" ಅಂತ ಬರ್ದಿತ್ತು.

ರಾಜ ಓದ್ಕೊಂಡ. ಇದಕ್ಕೆ ಸರಿಯಾದ ಜವಾಬ್ ಕೊಡ್ದೆ ಇದ್ರೆ ನಮ್ ದೇಸಂಕ್ಕೆ ಅವುಮಾನ ಅಂತ್ಹೇಳಿ ರಾಜ ಎತೆ ಬಂದು ಹೊಸ್ ಮಂತ್ರಿ ಕರುಸ್ಕೊಂಡ. ಮಂತ್ರಿ ಬಂದ.

'ಮಹಾಸ್ವಾಮಿಗಳೆ ನನ್ನ ಇಷ್ಟು ಜಾಗ್ರುತಿ ಕರುಸಿದ ಕಾರ್ಣವೇನು ? ನನ್ನಿಂದೇನಾಗ್ಬೇಕು ?' ಅಂದ.

'ಮಂತ್ರಿ ಬ್ಯಾರೆ ದೇಸ್ದಿಂದ ಈ ಕಾಜ್ಗ ಬಂದದೆ ಓದು' ಅಂತ ಕೊಟ್ಟ. ಮಂತ್ರಿ ಓದ್ದ. ಏನಂದನು ? ಅರ್ಥ ಆಗ್ದೆ ಹಂಗೆ ನಿಂತಿದ್ದ. ಆಗ ರಾಜ :

'ಮಂತ್ರಿ ಇದರರ್ಥವೇನು ? ಇದ್ಕೆ ನೀನೇ ಉಪಾಯ ಕಂಡೇಳ್ಬೇಕು !" ಅಂದ. ಈ ಮಂತ್ರಿ :

'ಬುದ್ಧಿ ಈ ಕಾಜುಗ್ದಲ್ ಬರ್ದಿರೊ ಸುದ್ದಿ ಓದ್ದೆ. ಹಿಂಗಂದ್ರೇನು ಅನ್ನದು ನನ್ಗೂ ಹೊಳೀದು ಬುದ್ಧಿ !' ಅಂದ.

ಮಂತ್ರಿ ಮಾತ್ಕೇಳಿ ರಾಜುಂಗೆ ಎದೆ ಒಡ್ದೋದಂಗಾಯ್ತು. ಏನ್ ಮಾಡ್ಬೇಕು ಅನ್ನದು ಗೊತ್ತಾಗ್ದೆ ಸಭೆ ಕರುಸ್ದ. ಬೇಕ್ ಬೇಕಾದೋರೆಲ್ಲ ಸಭಾ ಮಂಟುಪ್ಕೆ ಬಂದ್ರು. ರಾಜ 'ಹಿಂಗಂದ್ರೇನು ಅಂತ ಹೇಳಿ' ಅಂದ್ಬುಟ್ಟು ಕಾಜ್ಗ ಓದ್ದ. ಯಾರ್ಗೂ ತಿಳುವಳ್ಕೆ ಬರ್ನಿಲ್ಲ. ಈಗೇನ್ ಮಾಡದು ಅಂತ್ಹೇಳಿ ರಾಜ ಎತೆ ಮಾಡ್ತಿದ್ದಾಗ ಅರಸು ಮಕ್ಳು :

'ಅಪ್ಪಾಜಿ ಹೊಟ್ಟೆ ಹೊರ್ಕಳಕೆ ಬಂದೋರೆಲ್ಲ ಮಂತ್ರಿ ಪದವಿ ಕೊಟ್ಟು ಇಂತೆ ಎತೆ ತಂದ್ಕೊಂಡ್ರುಲ್ಲ. ಹಿಂದಿದ್ದ ಮಂತ್ರಿಗಳ್ನೆ ಕರ್ಸಿ ಈ ಇಷ್ಯ ತಿಳೀಸಿ. ಅವುರೇನಂದರು ನೋಡನ' ಅಂದ್ರು. ಆವಾಗ ದೊರೆ



ಗಳ್ಗೆ ಮಾತೆ ಹೊಂದ್ನಿಲ್ಲ. ಎಂತೆ ಮಂತ್ರಿಯು ಹಿನ್‌ಮುಂದ್ ನೋಡ್ದೆ ಕಳುಸ್ಬುಟ್ಟೆ. ಇಂತ ಕಷ್ಟಕ್ಕೆ ಸಾವುರ್ರೂಪಾಯ್ ಹೆಚ್ಚಾಯ್ತು ! ನಾನೆಂತೇ ಬುದ್ಧಿಗೇಡಿ !!' ಅಂತ್ಹೇಳಿ ಹಳೇ ಮಂತ್ರಿಗಳ ಕರಿಯಕ್ಕೆ ಕಳುಸ್ದ. ರಾಜ ಕರುಸವ್ರೆ ಅಂತ ಹೇಳುದ್ರುಲ್ಲ–ಮಂತ್ರಿ.

'ಅದೇನಪ್ಪ ಈವತ್ತು ? ನನ್ನುನ್ಯಾಕೆ ಕರುದ್ರು ?' ಅಂತ್ಹೇಳಿ ಕೇಳುದ್ರು.

'ಸ್ವಾಮಿ ನಮಂಗೆ ಗೊತ್ತಿಲ್ಲ. ನಿಮ್ಮ ಕರ್ಕೊಂಡ್ಬಾ ಅಂದ್ರು ಬುದಿವಿ' ಅಂದ್ರು. ಆಗ ಮಂತ್ರಿ ಬಂದ. ಮಾರಾಜುರ್ಗೆ ಕೈಮುಗ್ದು,

'ಯಾತುಕ್ಕೆ ಸ್ವಾಮಿ ನನ್ನ ಕರುಸ್ರಲ್ಲ' ಅಂದ.

'ಮಂತ್ರಿ, ಬ್ಯಾರೆ ದೇಸ್ದಿಂದ ನನ್ಗೆ ವಾಲೆ ಬಂದದೆ. ಅದ್ರು ವಿಷ್ಯ ತಿಳ್ಸಸ ಅಂತ ಕರುಸ್ದೆ'

'ಅಂತೆ ಮಾತೇನು ಬುದ್ಧಿ ?'

ಆ ಕಾಜ್ಗ ತಗ್ದು ಮಂತ್ರಿ ಕೈಗೆ ಕೊಟ್ಟ. ಮಂತ್ರಿ ಓದ್ಕೊಂಡ.

'ಬುದ್ಧಿ ಕಾಜ್ಗ ಕಳುಗಿರದು ಸರಿಯಾಗದೆ. ಈವಾಗ ನಮ್ಮ ಬುದ್ಧಿ, ವಿವೇಕವನ್ನು ಅವುರ್ಗೆ ಕಳುಸ್ಬೇಕು' ಅಂದ.

'ಹಂಗಂದೇನು ಮಂತ್ರಿ ?'

'ಅದ್ಹೇಳಕಾಗದಿಲ್ಲ ಬುದ್ಧಿ'

'ಹಂಗಾರ್ ನಮ್ ಪಾಡು ?'

'ಹೆದುರ್ಬ್ಯಾಡಿ ಬುದ್ಧಿ'

'ಹಂಗಾರೇನ್ಮಾಡ್ಬೇಕು ಮಂತ್ರಿ ?'

*

'ಸ್ವಾಮಿ ಆರಂಬ ಮಾಡೋ ಒಕ್ಕಲುಂಗ್ರುನುವೆ. ಮಡ್ಕೆ ಕುಡ್ಕೆ ಮಾಡೊ ಕುಂಬಾರ್ಸೆಟ್ರುನೂವೆ ಕರ್ಸಿ' ಅಂದ, ಆಗ ದೊರೆ ಅವುರೆಲ್ರುನೂ ಕರುಸ್ತ್ರು.

'ಮಂತ್ರಿ' ಎಲ್ರೂ ಬಂದವ್ರೆ ಅದೇನ್ ಕೇಳಪ್ಪ' ಅಂದ್ರು. ಆಗ ಮಂತ್ರಿ 'ಅಯ್ಯಾ ನೀವ್ಯಾರ್ರಪ್ಪ ?'

ನಾವು ರೈತ್ರು ಬುದ್ಧಿ'
'ನಿಮಗೇನ್ ಕೆಲುಸ್ವಪ್ಪ'
'ಆರಂಬ ಮಾಡದು ಬುದ್ಧಿ'
'ಏನೇನು ಬೆಳೆ ಬೆಳಿತೀರಪ್ಪ ?'

'ಬತ್ತ ರಾಗಿ ಜ್ವಾಳ, ಹುಳ್ಳಿ. ಅವುರೆ ತಡ್ನಿ, ತಗ್ರಿ, ಕಾಯಿ ಕಸಿ ಅದು ಇದು ಬೆಳಿತೀವಿ ಬುದ್ಧಿ.'

'ನೋಡ್ರಪ್ಪ, ನಮ್ಮಲ್ಲಿ ಸೀಮಿಂದ ತರ್ಸಿರೋ ಬಿತ್ತ್ನೊ ಬೀಜ ಅವೆ. ಅವ ಬೆಳಿತೀವಿ ಅಂದ್ರೆ ನಾವು ಕೊಡ್ತೀವಪ್ಪ.'

'ಕೊಡಿ ಬುದ್ದಿ ಬೆಳಿತೀವಿ' ಅಂದ್ರು.
'ಹೆಂಗ್ ಬೆಳಿತೀರಿ ?'
'ನಾವು ಅಗ್ದು ಗೊಬ್ರ ಹಾಕಿ ವೆಳಸಾಯ ಬೆಳಿತೀವಿ ಬುದ್ಧಿ'

'ನೋಡ್ರಪ್ಪ ಅಗಿಯೋದು, ಗೊಬ್ರ ಹಾಕದು ನೀರುಯ್ಯೋದು ಎಲ್ಲ ನಿಮ್ಮ ಕೆಲ್ಸ. ಫಲ ಕುಚ್ಚಿದ್ ಮ್ಯಾಲೆ ಆ ಮಾಲು ನಮ್ದು. ಅದ್ಕೆ ಬೆಲಿ ಏನಾಯ್ತದೋ ಅದರ ಏಡ್ರಷ್ಟು ಹಣ ಕೊಡ್ತಿವಿ' ಅಂದ್ರು.

'ಹಂಗೆ ಆಗ್ಲಿ ಬುದ್ಧಿ' ಅಂತ್ಹೇಳಿ ಬಿತ್ನೋ ಬೀಜ ಈಸ್ಕೊಂಡ್ ಹೋದ್ರು. ಆಮೇಲೆ ಕುಂಬಾರ್ ಸೆಟ್ಟಿಗಳ ಕರದ್ರು :

'ನಿಮ್ ಕಸುಬೇನ್ರಪ್ಪ ?'



'ನಾವು ಕುಂಬಾರ್ ಸೆಟ್ಗಳು, ಬುದ್ಧಿ, ಹಂಚು, ಮಡ್ಕೆ, ಗುಂಬ, ಹರುವಿ, ಗುಡಾಣ, ಅಳ್ಗೆ, ಮೊಗೆ, ಮುಚ್ಳ, ಧೂಪಾಲ್ಗೆ ಸೊಡ್ಲು ಎಲ್ಲಾನು ಮಾಡ್ತಿವಿ ಸ್ವಾಮಿ' ಅಂದ್ರು.

'ಹಂಗಾದ್ಮೇಲೆ ನಾವ್ಹೇಳಿದ್ ಮಾಡ್ಕೊಡ್ತಿರೇನ್ರಪ್ಪ ?'
'ಮಾಡ್ಕೊಡ್ತಿವಿ ಬುದ್ಧಿ'

'ಸರಿ ಮತ್ತೆ ನೀವೆಲ್ಲಾರು ಸೇರಿ ನಮ್ಮರುಮನ್ಗೆ ಒಂದ್ ಹತ್ ಸಾವ್ರದಷ್ಟು ಮಡ್ಕೆ ಕುಡ್ಕೆಗಳ್ ಮಾಡ್ಬೇಕು. ಅದ್ಕೆ ಏನಾಯ್ತದೋ ಬೆಲೆ ಅದರೇಡರಷ್ಟು ಹಣ ಕೊಡ್ತಿವ್ರಪ್ಪ' ಅಂದ.

'ಹಂಗೆ ಆಗ್ಲಿ ಬುದ್ಧಿ'

'ಆದ್ರೆ ಒಂದ್ ಮಾತ್ಕೇಳ್ರಪ್ಪ. ನಮ್ಗೆ ಹಂಚು, ಧೂಪಾಲ್ಗೆ ಸೊಡ್ಲು ಮುಚ್ಳ ಬೇಕಾಗಿಲ್ಲ. ಎಂತೆಂತೆ ಕಾಯಿಕಸಿಗಳವೆ ಅಂತಂತೆ ರೂಪುನ ಮಡ್ಕೆಗಳ ಮಾಡ್ಕೊಡ್ಬೇಕು.'

ಅದ್ಕೆ ಕುಂಬಾರ್ರೆಲ್ಲ ಒಪ್ಕೊಂಡ್ರು. ಇವ್ರು ಹಾಗ್ಲುದ್ ಕಾಯಿ, ಹೀರದ ಕಾಯಿ, ಬದ್ನೆಕಾಯಿ, ಕುಂಬುಳ್‌ಕಾಯಿ, ಸ್ವಾರೇಕಾಯಿ, ಹಳ್ಳದ್ ಕಾಯಿ, ಪಳ್ಳುಕಾಯಿ, ಮೆಣ್ಸೆಕಾಯಿ, ಕಲ್ಲಂಗ್ರಿಕಾಯಿ, ಕರುಬೂರದಕಾಯಿ-ಇಂತೆ ಕಾಯಗ್ಳಾಕಾರ್ದಲ್ಲಿ ಮಡ್ಕೆಗಳ್ ಮಾಡಿ ಅರುಮನ್ಗೆ ತಲ್‌ಪುಸ್ತ್ರು. ಇತ್ಲಾಗೆ ಒಕ್ಕಲುಂಗ್ರೆಲ್ಲ ಆರು-ಕಾರು ಕಟ್ಕೊಂಡು ದಡಾಮೋಡ್ನೆಲ್ಲ ಉತ್ತು, ಬಿತ್ನೊ ಬೀಜನೆಲ್ಲ ಹಾಕಿ, ಗೊಬ್ರ ನೀರ್ನೆಲ್ಲ ಹೂದು ಬೆಳುದ್ರು. ಎಲ್ಲಾ ಗಿಡುವಾಗಿ ಬೆಳ್ದು ಹೂ ಕಚ್ತು. ಹಿಂದ್ಗುಟ್ಲೆ ಪೀಚಾಯ್ತು. ಆಗ ದೊರೆ ಮಂತ್ರಿಗಳಿಬ್ರೂ ಸೇರಿ ಜಮೀನ್‌ತಾಕೆ ಬಂದ್ರು. ಆ ಕುಂಬಾರ್ರು ಮಾಡಿದ್ರಲ್ಲ ಆ ಮಡ್ಕೆಗಳೆಲ್ಲ ಜಮೀನ್ ತಾಕೆ ಸಾಗುಸ್ತ್ರು. ಮೊಗುರು ಪೀಚ್ನೆಲ್ಲ ಎಂತೆಂತೆ ಕಾಯ್ನು ಅಂತಂತೆ ಆಕಾರದ ಮಡ್ಕೆಗೆ ಭರ್ತಿ ಮಾಡುದ್ರು. ಆಮ್ಯಾಲೆ ಗೌಡ್ಗಳ್ನೆಲ್ಲ ಕರ್ದು,

'ನೋಡ್ರಪ್ಪ ಈ ಮೊಗರು ಪಿಚ್ಗಳೆಲ್ಲ ಈ ಮಡ್ಕೆಗಳೊಳ್ಗೆದಪ್ಪಾ ಆಗೋ ಹಂಗೆ ಬೆಳುಸ್ಬೇಕು.' ಅಂತ ಆಗ್ನೆ ಮಾಡುದ್ರು.

'ಹಂಗೇ ಆಗ್ಲಿ ಬುದ್ಧಿ' ಅಂದ್ರು ಅವುರು.

ಅಲ್ಗೆ ಮೂರ್ ತಿಂಗ್ಯಾಗಕ್ಕೆ ಎರಡು ದಿನ ಕಮ್ಮಿ. ರಾಜುನುವೆ ಮಂತ್ರಿನುವೆ ಬಂದ್ರು. ಗಾಡಿ ತರುಸ್ರು. ಈ ಕಾಯ್ಗ್ಳು ಮಡ್ಕೆ ಒಳುಗೆ ಬೆಳುದಿದ್ವಲ್ಲ, ಅವ ಮಡ್ಕೆ ಸೈತ ತೊಟ್ ಕಳುಸಿ ಬಾಯ್ಗೆ ಮುಂದ್ರೆ ಮಾಡ್ಸಿ ಗಾಡಿಗೆ ತುಂಬುಸ್ರು.

'ತುಂಬಿದ ಗಾಡಿಯು, ತಕ್ಕೊಂಡೋಗಿ ಕೊಟ್ಬನ್ರೊ' ಅಂತ್ಹೇಳಿ ಒಬ್ಬುನ ಕೈಲಿ ಒಂದ್ ಕಾಜ್ಗ ಕೊಟ್ ಕಳುಸ್ರು. ಆ ಕಾಜುಗ್ದಲ್ಲಿ ಏನ್ ಬರ್ದಿದ್ದಪ್ರು ಅಂದ್ರೆ—

"ನಮ್ಮ ಬುದ್ಧಿ, ವಿವೇಕನೆಲ್ಲ ನಿಮ್ಮ ವಾಸುಕ್ಕೆ ಕಳ್ಸಿದ್ದೀವಿ. ಯಾವೊಂದು ಮಡ್ಕೇನೂ ಒಡಿದೇನೆ ಒಳಗಿರೊ ನಮ್ಮ ಬುದ್ಧಿ ವಿವೇಕಗಳ್ನೆಲ್ಲ ಜ್ವೋಪಾನವಾಗಿ ನೀವು ತಕ್ಕೋಬೇಕು. ಇಲ್ಲದೆ ಹೋದ್ರೆ ನಿಮ್ಮಿಂದ ಪೊಗದಿ ನಮ್ಮ ವಾಸುಕ್ಕೆ ಬರ್ಬೇಕು" ಅಂತ ಬರ್ದಿತ್ತು.

ಕಾಯಿ ಕಸಿನೆಲ್ಲ ಮಡ್ಕೆ ಸೈತುವಾಗಿ ತುಂಬ್ಕೊಂಡು ಗಾಡಿಗಳು ಏಕುವಾಗಿ ಆ ದೇಸುಕ್ಕೆ ಹೊಂಟೊ. ಆ ದೇಸದ ರಾಜನುವೆ ಮಂತ್ರಿಯೂವೆ ನೋಡುದ್ರು.

"ಅಹ್ಹಾ ಎಂತೆ ಬುದ್ಧಿವಂತ್ರು! ನಾವಾಗಿ ನಾವು ಅವುರ್ನ ಕೆಣ್ಕ ಇಣುಕುಸ್ಕೊಂಡ್ವಲ್ಲ" ಅಂತ್ಹೇಳಿ ಬಂದ ಗಾಡಿಗಳ್ಗೆ ಪೊಗದಿ ತುಂಬಿ ಕಳುಸ್ಕೊಟ್ರು. ಹಳೇ ಮಂತ್ರಿ ನೌಕ್ರಿ ಖಾಯಂ ಆಯ್ತು. ಹೊಸ್ಮಂತ್ರಿಯ ಚಾಕ್ರಿಯಿಂದ ವಜಾ ಮಾಡುದ್ರು.

ಅಲ್ಲಾ-ಸಮಯುಕ್ಕೆ ಬಂದ ಬುದ್ಧಿ ಹೆಚ್ಚೊ 'ಸಾವುರ್ರುಪಾಯ್ಹೆಚ್ಚೊ?' —ಹೇಳಿ.



ಜನಪದ ಶಬ್ದರೂಪಗಳು :

ಅಳ್ಗೆ — ಅಳಗೆ, ಧಾನ್ಯ ತುಂಬಲು ಬಳಸುವ ಮಣ್ಣಿನ ದೊಡ್ಡ ಸಾಧನ.
ಆರಂಬ — ವ್ಯವಸಾಯ
ಇದ್ದುವಾಂಸ — ವಿದ್ವಾಂಸ
ಎತೆ — ವ್ಯಥೆ
ಕಾಜ್ಗ — ಕಾಗದ
ಗುಂಬ — ಕುಂಭ, ಗಡಿಗೆ
ಧೂಪಾಲ್ಗೆ — ಧೂಪಾರತಿಗಾಗಿ ಬಳಸುವ ಸಾಧನ
ಪೊಗದಿ — ಕಪ್ಪ, ಗೌರವಧನ
ಮುಚ್ಲ — ಮುಚ್ಚಳ
ಮೊಗರುಪೀಚು — ಎಳೆ ಹೀಚು
ಮೊಗೆ — ಮಣ್ಣಿನ ಕೊಡ
ವಾಸುಕ್ಕೆ — ವಶಕ್ಕೆ
ವೆಳಸಾಯ — ವ್ಯವಸಾಯ
ಸನ್ನಿಪ — ಸಮೀಪ
ಸಾಯ — ಸಹಾಯ
ಸಿನೇತ — ಸ್ನೇಹಿತ
ಸೊಡ್ಲು — ಸೊಡರು
ಸೈತ — ಸಹಿತ, ಜೊತೆಯಾಗಿ

# ಕಿಲಾಡಿ ಭಾವ

ಇಬ್ಬರು ತಾಯಿ ಮಗ ಇದ್ರು. ಅವ್ರು ತುಂಬ ಬಡವ್ರು ಇದ್ರು. ಮಗನ್ಗೆ ಸಣ್ಣವನಿದ್ದಾಗ ಲಗ್ನ ಆಗಿತ್ತು. ಮದ್ವೆ ಆಗಿದ್ದ ಇಷ್ಯ ಅವನ್ಗೆ ಗೊತ್ತಿದ್ದಿಲ್ಲ. ಬೆಳೆದು ದೊಡ್ಡವನಾದ. ಆಗ ಅವ್ನ, ಯವ್ವ ನಂಗೆ ಲಗ್ನ ಮಾಡ್ಲೇ ಅಂತ ಕೇಳ್ದ. ನಿನ್ಗೆ ಲಗ್ನ ಸಣ್ಣಂದಾಗೆ ಆಗ್ಯತೆ ಮಗ ಅಂದ್ಲು: ಅಂದ್ರೆ ನನ್ನ ಹೆಂಡ್ತಿ ಕರಿಲಕ್ಕೆ ಹೋಯ್ತಿನಿ ಅಂತಾನೆ. ಹೋಗ್ ಮಗ ಕರ್ಕೊಂಡು ಬಾ ಅಂತ ಅವ್ನ ಹೆಂಡ್ತಿ ಇರೋ ಜಾಗ, ಊರು, ಕೇರಿ ಎಲ್ಲಾ ಹೇಳಿ ಕಳಿಸ್ತಾಳೆ. ಅವ ಹೋದ. ಮನೆಗೆ ಹೋಗಿ ಊಟ ಗೀಟ ಮಾಡ್ದ. ಭಾವನ ಜೊತೆಗೆ ಕಲ್ತು ಹೊಲಕ್ಕೆ ಹೋದ. ಹೊಲ್ದಿಂದ ಬರೋ ಹೊತ್ಗೆ ಚಂಜಿ ಆಯ್ತು.

ಭಾವನ ತಲೆ ಮ್ಯಾಲೆ ಹುಲ್ಲಿನ ಹೊರೆ ಇತ್ತು. ಚಂಜಿ ಆಗ್ತನ ಅವ್ನ ಕಣ್ಣು ಇಳಿಗಣ್ಣು ಹೋಗ್ತದೆ. ಭಾವ ಮುಂದಾಗಿ ಹೊರೆ ಹೊತ್ಕೊಂಡು ಮನ್ಗೆ ಹೋದ. ಇವ ದನಗಳನ್ನು ಹೊಡೆಕೊಂಡು ಹೊರಟ. ಹುಡ್ಗ ಏನು ಲೆಕ್ಕ ಆಕ್ತನ, ಬೇರೆ ದನ ಅತ್ತ ಇತತ ಹೊಯ್ತಾವೆ. ಆ ಕೋಣನ ಬಾಲ ಹಿಡ್ಕೊಂಡ. ಆ ಕೋಣ ನೆಟ್ಗೆ ಸಂಡಾಸಿಗೆ ಹೋಯ್ತು. ಎಲ್ಲಾ ದನ ಬಂದ್ವು. ಇನ್ನು ಭಾವ ಬರ್ದೆ ಹೋದ ಅಂತ ಯೋಚ್ನೆ ಮಾಡ್ತಾ, ಹೋರಿ ಮನೆಗೆ ಬಿಟ್ಟು ಇವ್ನ ಕರಿಲಕ್ಕೆ ಎದುರಿಗೆ ಬಂದ. ಬರಾಟ್ಗೆಗೆ ಇವ ಸಂಡಾಸಿನಗೆ ಅವ್ನೆ. ಗ್ವಾಡೆಲ್ಲ ಸವರಿ ನೋಡಾಕತ್ಯವ್ನೆ. ಹಾದಿ ಎತ್ಲ ಕಡೆ ಐತೆ ನೋಡಾಕೆಂತ. ಇನ್ನು ಭಾವ ಬಂದು ನೋಡಿ ಏನಂದ, ಅದ್ರ ಕ್ಯಾಕೆ ಹೋಗಿದ್ದಿ. ಆವಾಗ ಹುಡ್ಗ ಅಂತಾನೆ ಇಂಥದೊಂದು ಕಟ್ಟಿಸ್ಬೇಕು, ನಮ್ಮಲ್ಲಿ ಜೋಳ ಬಾಳ ಆದಾವ ಅಂತ ಹೇಳ್ದ. ಆವಾಗ ಭಾವ ಬರ್ರಿ ಮಾವ ಅದೇನು ಮಾಡ್ತಿರಿ ಅಂದ. ನೀನು ಖರೆ ಭಾವ ಇದ್ರೆ ಬಲಿಗೆ ಬಂದು ಕೈ ಹಿಡ್ದು ಕರ್ಕೊಂಡು ಹೋಗಿ ಅಂದ. ಭಾವ ಯಾಕಾಗಲ್ದು ಅಂತ ಕೈ ಹಿಡ್ದು ಕರ್ಕೊಂಡು ಹೋದ. ಇವ ಪಡಸಾಲೆಗೆ ಕುಂತ. ಊಟ ಮಾಡಾಕೆ ಏಳ್ರಿ ಅಂದ್ರು. ಇಲ್ಲೆ ತರ್ರಿ ಊಟ ಮಾಡ್ತೀನಿ, ನಂಗೆ ಕೈ ಕಾಲು ನೊಯ್ಯಕತ್ತದ, ಹೈರಾಣ ಆಗ್ಯೆತೆ ಹೊಲ್ದತಾವ ಹೋಗಿದ್ದೆ ಅಂತಾನೆ. ಊಟ ಎಲ್ಲ ಬಡಿಸಿದ್ರು. ಸನಿಗೆ ಒಂದು ಎಮ್ಮೆ ಕರ ಇತ್ತು. ಅತ್ತೆ ತುಪ್ಪ ತಂದು ಸುರಿಲಿಕ್ಕೆ ಹತ್ತಿದ್ಲು, ಎಮ್ಮೆ ಕರ ಉಚ್ಚೆ ಹುಯ್ಲಕ್ಕತ್ಯದೆ ಅಂತ ಪಾಡ್ ಅಂತ ಹೊಡ್ದ. ಯಾಕ್ರಿ ಭಾವ ಅತ್ತೆಗೆ ಹೊಡೆದ್ರಿ ಅಂದ. ಹೊಡಿಯುಲ್ದೆ ಏನು ಮಾಡ್ಲಿ ಪರಾಯುದವರೆಲ್ಲಾ ಮನೆಗೆ ಇದ್ದೀರಿ, ಹಿರಿ ಮನುಷ್ಯರ್ಗೆ ಉಣ್ಣಕ್ಕೆ ನೀಡ್ಲಕಚ್ಚೀರಿ. ಅರೆ ಇದು ಖರೆನೆ ಐತಿ. ಆಗ ಊಟ ಬಡಿಸು. ನೀರು ಕೊಡು ಅಂತ ಆ ಹುಡ್ಗನ ಹೆಂಡ್ತಿಗೆ ಹೇಳಿದ್ರು.

ಆಗ ಎಲ್ಲಾ ಬಡಿಸ್ಕೋತ ಬಂದ್ಲು. ಬೆಲ್ಲದ ಪಾಕ ನೀಡ್ಲಿಕ್ಕೆ ಹತ್ತಿದ್ಲು. ಪಾಕ ನೀಡ್ಯಾನ್ರಿ ಅಂತ ಬಗ್ತಿದ್ಲು. ಬ್ಯಾಡ ಬ್ಯಾಡ ಅಂತ ಕೈ ಹಿಡಿದ, ಕೈ ಮ್ಯಾಲೆ ನುಚ್ಚೆ ಬಿತ್ತು. ಅದ ನೆಕ್ಕಿ ನೋಡ್ದ, ಅರೆ ಸಯ್ಯಿ ಅದೆಲ್ಲ, ನೀಡು ಅಂಬೋನಾ ಅಂದ್ರೆ ಹೋದ್ಲಲ್ಲ ಅಂತ ಮನಸ್ನಾಗೆ ಅಂದ್ಕೊಂಡು ಅಂದು ಊಟ ಸಾಕು ಮಾಡ್ದ. ಎಲ್ರೂ ಮುಕೊಂಡ್ರು. ಮುಕೊಂಡಾನ ಹೆಂಡ್ತಿ ಕೇಳ್ದ, ಪಾಕ ಸಯ್ಯಿ ಅದೆಲ್ಲ, ಎಲ್ಲದೆ ಅಂತ. ಅಲ್ಲೆ ನೆಲವಿನ ಮ್ಯಾಲೆ ಅದೆ ನೋಡ್ರಿ ಅಂದ್ಲು. ಎದ್ದ, ಒಂದು ಕುಡಿಗೋಲು ತಗೊಂಡು ಅದ್ಕೆ ತೂತು ಹೊಡೆದ. ಪಾಕ ಮೈಮ್ಯಾಲೆಲ್ಲ ಬಿತ್ತು. ಕೈಯಿಂದ ಎಲ್ಲ ತಿಂದ. ಮೈ ಮ್ಯಾಲೆಲ್ಲ ಆಯ್ತು ಪಾಕ. ನಾನೇನು ಮಾಡ್ಲಿ ಅಲ್ಲೆ ಹತ್ತಿ ಐತೆ ಅದ್ರಾಗೆ ಹೊಳ್ಯಾಡಿ; ಅಂದ್ಲು. ಹೋಗಿ ಹತ್ಯಾಗೆ ಹೊಳ್ಯಾಡ್ದ. ಮೈಯೆಲ್ಲ ಹತ್ತಿ ಆಯ್ತು. ಇನ್ನೇನು ಮಾಡ್ಬೇಕು ನಾನು ಹೋಯ್ತಿನಿ ಮನೆಗೆ ಅಂತ ಎದ್ದ. ಆವಾಗ ಮೂರು ಗಂಟೆ ರಾತ್ರಿ ಇತ್ತು. ಹೋದ. ಅಲ್ಲಿ ಊರ ದಾಟಿ ಒಂದು ಕುರಿ ಮುರೆ ಹಾಕಿದ್ರು ಕುರ್ಬರು. ಆ ಕುರಿಯಾಗೆ ಹೋಗಿಬಿದ್ದ. ಕುರಿ ಒಯ್ಲಿಕ್ಕೆ ಕಳ್ರು ಬಂದ್ರು, ಹೇ ಕುರಿ

ಛಲೋದು ನೋಡಿ ಒಯ್ಯಬೇಕು ಅಂತ ಮಾತಾಡ್ಕೊಂಡು ಅವನ್ಗೆ ನೋಡಿದ್ರು. ಮೈಯೆಲ್ಲ ಬಿಗಿ ಇತ್ತು. ದಪ್ಪ ಐತೆ ಕುರಿ ಛಲೋ ಅದೆ. ಇದೆ ಕುರಿನಾ ಒಯ್ಯಾನ ಅಂತ ಮಾತಾಡ್ಕೊಂಡು ಕುರಿನಾ ಎತ್ಕೊಂಡು ಓಡೋದ್ರು. ಅಲ್ಕೊಂದು ಹಳ್ಳ ಬಂತು. ಇಳ್ಳಿ ಸಂಡಾಕ ಕೂಡಾನ ಅಂತ ಹೋದ್ರು. ಇವ ಎದ್ದ. ಅವರು ಕಂಬಳಿ ತುಂಬ ರೂಪಾಯಿ ತಂದಿದ್ರು. ಅಲ್ಲೆ ಬಂದೂಕಿತ್ತು. ಅವರ್ಗೆ ಬಂದೂಕಿಲಿಂದ ಡಣ್ ಅಂತ ಆವಾಜು ಮಾಡ್ದ. ಕಳ್ರು ನಮ್ನ ಹಿಡಿಲಿಕ್ಕೆ ಬಂದ್ರುಲ್ಲ ಅಂತ ಎಲ್ಲ ಬಿಟ್ರು ಓಡಿ ಹೋದ್ರು. ಇವ ಕಂಬಳಿ ತುಂಬ ರೂಪಾಯಿ ತಗೊಂಡ. ಬಂದೂಕ ತಗೊಂಡು ಹಿಂದಕ್ಕೆ ತಿರುಗ್ದ. ಏನ್ರಿ ಭಾವ ಸರಿ ರಾತ್ರಿಗೆ ಹೇಳ್ದೆ ಕೇಳಲ್ದೆ ಹೋಗಿದ್ರಿ ಅಂತ ಕೇಳ್ದ, ಅದ್ಕ ಆವ ಏನಿಮ್ಮ ಜೊತೆ ಮಲಿಕಂಡ್ರೆ ಸಂಸಾರ ಆತದ, ಬೆಳಗಾಗ ಹೊತ್ಗೆ ಈಸ್ ರೂಪಾಯಿ ತಂದೆ ನೋಡ್ರಿ. ಕಳ್ಸಿಡ್ರಿ ನನ್ನ ಹೆಂಡ್ತಿನ, ಕರ್ಕೊಂಡು ಮನಿಗೆ ಹೋಯ್ತಿನಿ ಅಂದು ಕರ್ಕೊಂಡು ಒಯ್ದ.

ಮನಿಗೆ ಬಂದ. ಯವ್ವ ಕರ್ಕೊಂಡು ಬಂದೆ ನನ್ನ ಹೆಂಡ್ತಿನ ಅಂದ. ಯಾಕಾಲ್ದಪ್ಪ ಛಲೋನೆ ಆಯ್ತು ಅಂದ್ಲು. ರೂಪಾಯಿ ತೋರಿಸ್ದ. ರೂಪಾಯಿ ಛಲೋ ತಂದಿದಿ ಮಗ ಎಲ್ಲಿಂದೆ ಈಸೊಂದು ಅಂದ್ಲು. ಎಲ್ಲಾರು ಮಲಗಿದ್ರು ನಾನು ಹೋಗಿ ಈಸ್ ಗಳಿಸ್ಕೊಂಡು ಬಂದೆ ಅಂದ. ಎಲ್ರೂ ಆರಾಮಾಗಿ ಇದ್ರು.

---

ಅರ್ಥಕೋಶ

ಕಲ್ತು .... ಸೇರಿ  ಹೇಳಿದವರು ... ಶ್ರೀ ಚಂದ್ರಪ್ಪ
ಚಂಜೆ ... ರಾತ್ರಿ  ವಯಸ್ಸು ... ಸುಮಾರು ೪೫ ವರ್ಷ



ಇಳಿಗಣ್ಣು—ಮೂಲಗಣ್ಣು
ಬರಾಟ್ಲಿನೆ—ಬರುಪಾಗ
ಬಲಿಗೆ—ಬದಿಗೆ, ಹತ್ತಿರ
ನಡಸಾಲಿ—ನಡುಮನೆ
ಬೈರಾಗ್ಲಾ—ಸಾಕಾಗಿದೆ, ಸುಸ್ತಾಗಿದೆ
ಸನಿಗೆ—ಸಮೀಪದಲ್ಲಿ, ಹತ್ತಿರ
ಪರಾಯದವರ್ಗೆಲ್ಲಾ—ವಯಸ್ಸಿಗೆ ಬಂದವರು
ಸಯ್ಯ—ಸಿಹಿ
ಟಿಗಿ—ಅಂಟು
ಆವಾಜು—ಶಬ್ದ

**

# ಸ್ವರ್ಗಕ್ಕೆ ಸವಾರಿ

ಹಿಂದಿನ ಕಾಲ್ದಲ್ಲಿ ಕುಂದಾಪುರ ಪಟ್ಟಣದ ಬಳಿ ಕುಮರಿ ತೋಟ ಎಂಬ ಹಳ್ಳಿ ಇತ್ತು. ಅಲ್ಲಿ ಆವೆ ಮಣ್ಣಿಂದ ಮಡಕೆ ಮಾಡಿ ಮಾರುತ್ತಿದ್ದ ಕುಂಬಾರ ಕೋಟಿಯಣ್ಣ ಎಂಬವನೊಬ್ಬ ಇದ್ದ. ಅವನಿಗೆ ದೈವ ದೇವರ ಮೇಲೆ ಭಾರೀ ಭಕ್ತಿ. ನಿತ್ಯ ದೇವರ ಮುಂದೆ ಹೂಗಳನ್ನಿಡಬೇಕು ಅಂತ ಅವನಿಗೆ ಆಸೆ. ಹೂವಿಗೇ ಬರಗಾಲ. ಅವನಿಗೆ ಹಟ ಬಂದು ತಾನೇ ಸ್ವಂತ ಒಂದು ಒಳ್ಳೆಯ ಹೂ ತೋಟ ಮಾಡಿದ. ಅದರಲ್ಲಿ ಮಲ್ಲಿಗೆ, ಜಾಜಿ, ಸಂಪಿಗೆ, ಗುಲಾಬಿ ಎಲ್ಲ ಗಿಡಗಳೂ ಬೆಳೆದವು. ಮೊಗ್ಗು ಬಿಟ್ಟವು. ನಾಳೆ ಹೂಗಳು ಅರಳುತ್ತವೆ ಅಂತ ಆಸೆಪಡ್ತಿದ್ದ ಕುಂಬಾರ ಕೋಟಿಯಣ್ಣ. ಬೆಳಗ್ಗ ಎದ್ದು ನೋಡಿದರೆ ಒಂದೇ ಒಂದು ಅರಳು ಹೂವಿಲ್ಲ. ಕೋಟಿಯಣ್ಣ ಆಶ್ಚರ್ಯಪಟ್ಟ, ಕಂಗಾಲಾದ. ಮರುದಿನ ನೋಡಿದ್ರೆ ಮರುದಿನವೂ ಹಾಗೇ. ಒಂದೇ ಒಂದು ಅರಳು ಹೂವಿಲ್ಲ. ಬೇಜಾರು ಬಂದು ಆ ದಿನ ರಾತ್ರಿಯಿಡೀ ನಿದ್ದೆಗೆಟ್ಟು ತೋಟದಲ್ಲಿ ಕಾವಲುಮಾಡಿದ. ತೋಟದ ಮೂಲೇಲಿ ಅವನು ಒರಗಿ ನಿಂತಿದ್ದ ಹಾಗೇ ಆಕಾಶದಿಂದ ಬಿಳಿಯಾಗಿ ಏನೋ ಇಳಿದು ಬಂತು. ತೋಟದಲ್ಲಿ ನಿಂತಿತು ! ನೋಡ್ತಾನೆ ದೇವಲೋಕದ ಬಿಳಿಯಾನೆ ಐರಾವತ! ಬಿಟ್ಟ ಕಣ್ಣು ಬಿಟ್ಟಹಾಗೇ ನೋಡ್ತಿದ್ದ ಕೋಟಿಯಣ್ಣ. ಬಿಳಿಯಾನೆ ತನ್ನ ಸೊಂಡಿಲಿನಿಂದ ಒಳ್ಳೊಳ್ಳೇ ಹೂಗಳನ್ನು ಕೊಯ್ದು ಮಡಚಿಟ್ಟುಕೊಂಡಿತು. ಕೊರಳಸರದ ಸುತ್ತಮುತ್ತ ಸುರಿದು ಕೊಂಡಿತು. ಅರಳಿ ಪರಿಮಳ ಸೂಸುತ್ತಿದ್ದ ಹೂಗಳೆಲ್ಲಾ ಮುಗಿದವು.



ಆನೆ ಆಕಾಶಕ್ಕೆ ಏರಲುತೊಡಗಿತು. ಅಷ್ಟರಲ್ಲಿ ಕೋಟಿಯಣ್ಣ ತೀರಾ ಹತ್ತಿರ ಹೋಗಿ ತುಂಬಾ ಧೈರ್ಯ ಮಾಡಿ ಅದರ ಬಾಲವನ್ನು ಗಟ್ಟಿಯಾಗಿ ಹಿಡಿದುಕೊಂಡೇಬಿಟ್ಟ. ಆನೆ ನೇರವಾಗಿ ಆಕಾಶಕ್ಕೇರಿ ಅಲ್ಲಿಂದ ಸ್ವರ್ಗ ಲೋಕದೊಳಗೆ ಹೋಗಿ ದೇವೇಂದ್ರನೆದುರು ನಿಂತಿತು. ಹೂಗಳನ್ನೆಲ್ಲಾ ರಾಶಿ ಸುರಿಯಿತು.

•

“ದೇವೇಂದ್ರಾ ! ನಾನು ನಿತ್ಯ ಹೂ ತರುತ್ತೇನಲ್ಲ, ಆ ತೋಟದ ಒಡೆಯ ಬಂದಿದ್ದಾನೆ ನೋಡು !” ಎಂದು ಕೋಟಿಯಣ್ಣನನ್ನು ತೋರಿಸಿ ತಿರುಗಿ ನಿಂತಿತು ಬಿಳಿಯಾನೆ. ಕೋಟಿಯಣ್ಣ ಕಣ್ಣರಳಿಸಿ ಕೈಕಾಲು ನಡುಗಿ ನಿಂತಿದ್ದ. ದೇವೇಂದ್ರ ಪ್ರೀತಿಪೂರ್ವಕ ನೋಟ ಹರಿಸಿ, “ಮಾನ್ಯ ಅತಿಥಿಗಳೇ! ನಿಮ್ಮಿಂದ ನಾವು ಉಪಕೃತರಾಗಿದ್ದೇವೆ. ನಮ್ಮ ಅರಮನೆ, ಭಂಡಾರ, ವೈಭೋಗಗಳನ್ನೆಲ್ಲ ನೋಡಿರಿ. ನಿಮಗೆ ಬೇಕಾದುದನ್ನು ಪಡೆಯಿರಿ. ಇಷ್ಟ ಏದ್ದಷ್ಟು ಕಾಲ ಇರಿ.” ಎಂದು ಹೇಳಿ ದೂತನೊಡನೆ ಕೋಟಿಯಣ್ಣನನ್ನು ಸ್ವರ್ಗಲೋಕದಲ್ಲೆಲ್ಲ ಸುತ್ತಾಡಿಸಲು ಹೇಳಿದ.

ಕೋಟಿಯಣ್ಣ ಕಂಗಾಲಾಗಿದ್ದ. ಈ ತಂಟೆ ಬೇಡವಿತ್ತು, ಅಂದು ಕೊಳ್ಳುತ್ತಲೇ ದೂತನ ಹಿಂದೆ ಬಲವಂತಕ್ಕೆಂಬಂತೆ ತಿರುಗಾಡಿದ. ಕೊನೆಯಲ್ಲಿ ದೇವೇಂದ್ರನೆದುರು ಪುನಃ ಬಂದು ನಿಂತಾಗ, “ನಾನು ಮನೆಗೆ ಹೋಗ್ಬೇಕು!” ಎಂದ. ದೇವೇಂದ್ರ ನಸುನಕ್ಕು,

“ಈಗಲೇ ಹೊರಟಿರಾ ? ಸರಿ ! ತಮ್ಮಿಷ್ಟ ! ನೋಡಿ ! ಈ ನಮ್ಮ ಭಂಡಾರದಲ್ಲಿ ರಾಶಿ ಬಿದ್ದಿರುವ ಆಭರಣ, ಸಂಪತ್ತುಗಳಲ್ಲಿ ತಾವು ಯಾವುದನ್ನು ಬೇಕಾದರೂ ಆರಿಸಿ ತೆಗೆದುಕೊಳ್ಳಬಹುದು. ನಮ್ಮ ಕಿಂಚಿತ್ ಕಾಣಿಕೆ ಇದು!” ಎಂದು ಹೇಳಿದ.

ಕೋಟಿಯಣ್ಣ ಆ ಮುತ್ತು , ರತ್ನ. ವಜ್ರ, ಬಂಗಾರ, ಮಾಣಿಕ್ಯ ಗಳೆಡೆ ಕಣ್ಣು ಹಾಯಿಸಿದ. ಒಮ್ಮೆಗೆ ಬಿಡುಗಡೆ ಆದರೆ ಸಾಕಪ್ಪ ಅನ್ನಿಸಿ

ದೊಡ್ಡದೊಡ್ಡ ಒಡವೆ, ಬಂಗಾರಗಳನ್ನೆಲ್ಲ ಅತ್ತಿತ್ತ ಸರಿಸಿ ಒಂದು ಗೇಣುದ್ದದ ಬಂಗಾರದ ಗಟ್ಟಿಯೊಂದನ್ನು ಹಿಡಿದುಕೊಂಡ. ಆವೆ ಮಣ್ಣಿನಿಂದ ಮಡಕೆ ಮಾಡುವಾಗ ತಟ್ಟಿ ಸರಿಮಾಡಲು ಈ ಗಟ್ಟಿ ಅನುಕೂಲವಾದೀತೆಂಬ ದೂರಾಲೋಚನೆ ಅವನಿಗೆ .

ಅಂದೇ ಕತ್ತಲು ಮುಸುಕುವ ಹೊತ್ತಿಗೆ ಐರಾವತದ ಕಾಲವನ್ನಾಧರಿಸಿ ಕೋಟಿಯಣ್ಣ ಮರಳಿ ತನ್ನ ತೋಟಕ್ಕೆ, ಆಮೇಲೆ ಮನೆಗೆ ಹಿಂದಿರುಗಿ ಬಂದ.

ಮರುದಿನದಿಂದ ತೋಟ ಕಾಯಲು ಹೋಗುವುದನ್ನೇ ಬಿಟ್ಟ. ಹಗಲಿಡೀ ಮಡಕೆ ತಟ್ಟುತ್ತಲೇ ಇರುತ್ತಿದ್ದ. ಬಂಗಾರದ ಗಟ್ಟಿಯಿಂದ ಮಡಕೆ ತಟ್ಟುತ್ತೇನೆಂಬ ಅಹಂ ಎಲ್ಲೋ ಸಾಸಿವೆಯು ಕಾಳಿನಷ್ಟು ಅವನ ಮುಖದಲ್ಲಿ ಇತ್ತೋ ಏನೋ. ಆದರೆ ಮನೆ ಮಂದಿ...ಅಂದರೆ ಅವನ ಮುಗ್ಧ ಹೆಂಡತಿ ಮಕ್ಕಳು ಈ ಬಗ್ಗೆ ಪ್ರಶ್ನಿಸಲೂ ಇಲ್ಲ, ಇವನಾಗಿ ಹೇಳಲೂ ಇಲ್ಲ.

ಒಂದು ದಿನ ಪಕ್ಕದ ಊರಿನ ತರಲೆ ತಿಪ್ಪಯ್ಯ ಆ ದಾರಿಯಾಗಿ ಬಂದ.

"ಏನೋ ಕೋಟಿಯಣ್ಣ ! ಹೇಗಿದೆ ಮಡಕೆ ವ್ಯಾಪಾರ ? ತೋಟ ಗೀಟ ಮಾಡಿದ್ದೀಯಂತೆ !..."ಹಾಗೆ, ಹೀಗೆ ಅನ್ನುತ್ತ ಕುಳಿತೇ ಬಿಟ್ಟ. ದೂರದಲ್ಲಿ ಫಳಫಳ ಹೊಳೆಯುತ್ತಾ ಬಿದ್ದಿತ್ತು ಬಂಗಾರದ ಗಟ್ಟಿ. ತಟಕ್ಕನೆ ಅದರೆಡೆ ಬಾಗಿ ಎತ್ತಿಕೊಂಡ ತಿಪ್ಪ.

"ಇದೇನೋ ಇದು ? ಬಂಗಾರದ ಹಾಗಿದೆ ! ಎಂದು ತಿಪ್ಪ ಹೇಳಿದಾಗ

"ಬಂಗಾರದ ಹಾಗೇನು ! ಬಂಗಾರವೆ" ನಿರ್ಲಕ್ಷ್ಯದಿಂದ ಕೋಟಿಯಣ್ಣ ಹೇಳುತ್ತಾ ಹೋದ. "ಮಡಕೆಯಾದ್ರೂ ತಟ್ಟೋಕಾದೀತು ಅಂತ ತಂದ್ರೆ... ಅದರಲ್ಲಿ ತಟ್ಟಿದ್ದು ಸರಿಯಾಗೋದೇ ಇಲ್ಲ. ಒಗೆದು ಬಿಟ್ಟೆ ಆಚೆಗೆ !"

"ಏನಂದೆ ? ಇಷ್ಟು ದೊಡ್ಡ ಬಂಗಾರದ ಗಟ್ಟಿ ಎಲ್ಲಿಯದಣ್ಣ ?"

ಕೋಟಿಯಣ್ಣ ಎಲ್ಲವನ್ನೂ ವಿವರಿಸಿ ಹೇಳಿದ.

ತಿಪ್ಪಯ್ಯ ದೀನನಾಗಿ ತನ್ನನ್ನಿಂದು ಸ್ವರ್ಗಲೋಕಕ್ಕೆ ಕರೆದುಕೊಂಡು



ಹೋಗಲೇಬೇಕೆಂದು ಬೇಡಿಕೊಂಡ, ಒಪ್ಪಿಗೆ ಕೊಡದೆ ಇರಲು ಸಾಧ್ಯವಾಗಲಿಲ್ಲ ಕೋಟಿಯಣ್ಣನಿಗೆ.

ಅಂದು ಅರ್ಧರಾತ್ರಿಯವರೆಗೂ ತೋಟದಲ್ಲಿ ಕುಳಿತು ಚಳಿಯಲ್ಲಿ ನಡುಗುತ್ತಾ ಕಾದೇ ಕಾದರು ಕೋಟಿ, ತಿಪ್ಪ ಇಬ್ಬರೂ. ಬೆಳಗಿನ ಜಾವದ ಹೊತ್ತಿಗೆ ಆಕಾಶದಿಂದ ಇಳಿದು ಬಂತು ಐರಾವತ. ತೋಟದಲ್ಲಿ ಸುತ್ತಾಡಿ ಹೂಗಳನ್ನು ಕೀಳುತ್ತಾ ಇತ್ತು. ತರಲೆ ತಿಪ್ಪ ಕೊರಳುದ್ದಮಾಡಿ ಇಣುಕಿ ನೋಡಹತ್ತಿದ. ಕೋಟಿ ಸುಮ್ಮನಿರೆಂದು ಸಂಜ್ಞೆ ಮಾಡಿದರೂ ಕತ್ತೆತ್ತಿ ತಿರುಗುತ್ತಿದ್ದ.

ಕೊನೆಗೊಮ್ಮೆ ಐರಾವತ ಹಿಂದಿರುಗಿ ಹೊರಟಾಗ ಮೊದಲೇ ಮಾತಾಡಿಕೊಂಡಿದ್ದಂತೆ ಕೋಟಿಯಣ್ಣ ಅದರ ಬಾಲ ಹಿಡಿದು ನೇತಾಡಿದ. ಅವನ ಕಾಲು ಹಿಡಿದು ತಿಪ್ಪಯ್ಯ ಜೋತಾಡಿದ. ಆಕಾಶದೆತ್ತರಕ್ಕೆ ಅರ್ಧ ಏರಿ ಮೇಲೆ ಸಾಗುತ್ತಿದ್ದಾಗ ತರಲೆ ತಿಪ್ಪಯ್ಯನ ಬಾಯಿ ಸುಮ್ಮನಿರಬೇಕಲ್ಲ.

"ಕೋಟಿಯಣ್ಣ ! ಅಲ್ಲಿ ಬಂಗಾರ, ವಜ್ರ, ಮಾಣಿಕ್ಯ ಎಲ್ಲ ರಾಶಿ ರಾಶಿ ಇವೆಯೆ ?"

"ಹೂಂ"

"ತುಂಬಾ ದೊಡ್ಡವೂ ಇರುವವೇ ?"

"ಹೌದು"

"ತುಂಬಾ ? ಎಷ್ಟು ದೊಡ್ಡವು ?"

"ತುಂಬಾ ಅಂದರೆ ತುಂಬಾ."

"ಎಷ್ಟು ? ತೋರಿಸು ನೋಡೋಣ" ಕತ್ತೆತ್ತಿ ಮೇಲೆ ನೋಡುತ್ತಾ ಕೇಳಿದ ತಿಪ್ಪ.

"ಥೂ ನಿನ್ನ ! ಇಗಾ ಓ... ಇಷ್ಟು ! ಕೈಯಗಲಿಸಿ ಅಂದಾಜು ಅಳತೆ ತೋರಿಸಹೊರಟ ಕೋಟಿಯಣ್ಣ, ತರಲೆ ತಿಪ್ಪನ ಸಹಿತ ಆಕಾಶದಿಂದ ಧರೆಗೆ ಬಿದ್ದು ಪ್ರಾಣ ಬಿಟ್ಟ !

ಒಬ್ಬ ಬುದ್ಧಿಹೀನ. ಮತ್ತೊಬ್ಬ ಅತಿಲೋಭಿ ಅವರ ಪಾಡು ಮತ್ತೇನಾಗುತ್ತೆ ?

---

## ಕೆದ್ಗೆ ರಾಯ್ನ ಸೊಸೆ

ಒಬ್ ಅರ್ಸು ಮಗಾ, ಒಬ್ ಮಂತ್ರಿ ಮಗಾ ಇದ್ರು; ಅವ್ರು ದಿನಾಲು ಸಂಜೆ ಹೊತ್ಗೆ ತಿರ್ಗಾಡೂಕೋಗ್ತಿದ್ರು. ಹಿಂಗೆ ಒಂದಿನ ಅರ್ಸು ಮಗಾ ಮುಂದೋಗ್ತಾ ಇದ್ದಾ. ಮಂತ್ರಿಮಗಾ ಹಿಂದ್ನಿಂದ್ ಹೋಗ್ತಾ ಇದ್ದಾ. ಅರ್ಸು ಮಗಾ ಓ ಅಟ್ಕೆ ಹೋಗೂದ್ರಾಗೆ ಒಬ್ಬಜ್ ಮುದ್ಕಿ ಮಾರ್ಗದ್ಮೈನೆ ಬಂದ್ನಿತ್ಕಂತು, ಮಂತ್ರಿ ಮಗ್ನ ಕೂಡೆ,

"ತಂಸಾ ನಿಲ್ಮಗಾ" ಅಂತು. ಅವ್ನಿಂತಾ. "ಏನಜ್ಜಿ" ಅಂದಾ.

"ನೋಡು ಮಗಾ ಒಂದ್ಬತ್ಕೆ ಒಂದಕ್ಕಿ ಒಂದ್ಕಂಡ್ಗ್ ಬತ್ಕೆ ಎಟ್ ಅಕ್ಕಿ ಬರೂದು, ಲೆಕ್ಕಾಚಾರಾ ಮಾಡಿ ಹೇಳ್ಕೊಡು ಮಗಾ" ಅಂತು.

"ಇಷ್ಟೇಯಾ ಅಜ್ಜಿ? ಒಂದ್ಕಂಡ್ಗಾ ಬತ್ತಾ ಮಿರ್ದ್ರೆ ಹತ್ಕೊಳ್ಗಾ ಅಕ್ಕಿ ಬರೂದಜ್ಜಿ" ಅಂದಾ. ಮುಂದ್ಹೋದಾ. ಅರ್ಸು ಮಗಾ ಮುಂದ್ಹೋಗ್ಲಿಲ್ಲಾ, ನಿಂತಾ.

"ಏನೊ ಮಂತ್ರಿ ಅಜ್ಜಿ ಏನ್ಹೇಳ್ತೊ ?"

"ಏನಿಲ್ವೊ ಒಂದ್ಕಂಡ್ಗ್ ಬತ್ಕೆ ಎಶ್ಟ್ ಅಕ್ಕಿ ಅಗ್ತದೆ ಅಂದ್ ಕೇಳ್ತೊ" ಅಂದಾ ಮಂತ್ರಿ ಮಗಾ, ಅರ್ಸು ಮಗಾ ನಂಬ್ಲೇ ಇಲ್ಲಾ.

"ನೀ ಸುಳ್ ಹೇಳ್ಬೇಡಾ, ಇದ್ ಸಂಗ್ತಿ ಇದ್ದಂಗ್ ಹೇಳು" ಅಂದಾ. ಅಂವ್ನ ಮೆನೆ ಸಂಶಯು, ಅಜ್ಜಿ ಏನೋ ಚಾಡಿ ಹೇಳದೆ. ಇಂವಾ ಗುಟ್ ಬಡುದಿಲ್ಲಾ ಅಂದ್ಕಂಡಾ ಮಂತ್ರಿ ಮಗ್ನ ಮಾತ್ ದಿಕ್ಕರ್ಸೀ ಬಿಟ್ಟಾ ಅರ್ಸು ಮಗಾ. ಮಾರ್ನೆ ದಿನ್ದಿಂದಾ ಒಬ್ನ ಮೊಕಾ ಅತ್ಲಾಗೆ, ಒಬ್ನ ಮೊಕಾ ಇತ್ಲಾಗೆ ಆಯ್ತು.

ಮಾರ್ನೆ ದಿನಾ ಅರ್ಸೂ ಮಗಾ, ಒಬ್ನೇ ತಿರ್ಗಾಡೂಕ್ ಹೋಗ್ತಿದ್ದಾ. ಆಗಾ ಒಬ್ಳು ಅಸ್ವಂತ್ ಕಟ್ಟೆ ತಿರ್ಗ್ತಿತ್ತು. ಅದು ಅರ್ಸು ಮಗ್ನ ನೋಡ್ದ ಕೂಡ್ಲೆಯಾ ತನ್ ಕಾಲ್ ಮುಟ್ತು; ತನ್ ತಲೆ ಮುಟ್ತು, ಹಂಗೆ ಹೋಗ್ ಬಿಡ್ತು. ಇದ್ರ ಅರ್ತಾ ಏನು ? ಅರ್ಸು ಮಗ್ಗೆ ತೆಳೀಲೇ ಇಲ್ಲಾ.

ಆಗಾ " ಅಯ್ಯೋ ಮಂತ್ರಿ ಮಗನ್ದೂರ್ಮಾಡ್ಕಂಡದ್ದೇ ತಪ್ಪಾಯ್ತು, ಅವ್ನಿದ್ರೆ ಈಗಾ ಇದ್ರರ್ತಾ ಹೇಳ್ದಿ ಬಿಡೂದಿಲ್ಲಾಗಿದ್ದಾ. ಈಗ್ಲೆ ಹೋಗಿ ಮಂತ್ರಿ ಮಗ್ನ ಕರ್ತಾ ಬರ್ಬೇಕು" ಅಂದಾ. ಅತ್ಲಾಗ್ ತಿರ್ಗ್ದಾ. ತಾ ಬಂದ್ಕಾರ್ಣಾ ಹೇಳಿ ತಾ ನೋಡ್ದ ಸಂಗ್ತಿ, ಅರ್ತಾ ಏನು ಕೇಳ್ದಾ. ಆಗಾ ಮಂತ್ರಿ ಮಗಾ "ಈಗ್ಬೇಕಾದ್ನೊ ನಾನು ? ಅರ್ಸು ಮರ್ಜಿ ಬಡವನ ಬಾಗ್ಲ್ಯಾ ಒಂದೇ ನೋಡು. ಯಾವಾಗ್ಬರ್ತದೆ ಯಾವಾಗ್ ಹೋಗ್ತದೆ ಅಂಬೂದ್ ಕಷ್ಟಾ. ಆಗ್ಲಿ ಅರ್ಸೂ ಮಗಾ ಗೆಳ್ಯಾ ಅಂದ್ಮೆಲೆ ಹೊತ್ತೀಗ್ ಮುಟ್ದಿದ್ರೆಂಗೆ ? ಅಂದಾ. ಆದ್ರರ್ತಾ ಹೇಳ್ದಾ. "ಅದು ನಿಂಗೆ ತನ್ಗರ್ತಾ ಹೇಳ್ತು. ಅದು ಮೊಳಕಾಲರಸಿನ ಮಗ್ಳು. ಕೆದಗೀ ರಾಯ್ನ ಸೊಸೆ. ಮನೆ ಕಡ್ಗೆ ಹೆಯ್ಟ್ ಹೋಯ್ತು ಅಂದ್ರೆ, ಬೆನ್ಗೇ ಬಾ ಅಂತು" ಅಂದಾ "ಅಂದ್ಮೇಲೆ ಹೆಂಗ್ಮಾಡಿ ಅದ್ರಮನೆಗೆ ಹೋಗೂದಾಯ್ತು ?" ಕೇಳ್ದಾ ಅರ್ಸು ಮಗಾ.

"ನೋಡ್ವನಿ ಬಾ " ಅಂದಾ. ಇಂವ್ನ ಕರ್ಕಂಡ್ ಹೋದ್ರಾ, ಒಂದ್ ಅಜ್ಮುದ್ಕಿ ಮನ್ಗೆ ಇಲ್ಲಿ ಇಜ್ಮುದ್ಕಿ ಹೂಂವ್ಗ ದಂಡೆ ಕಟ್ತಾ ಕೂತಿತ್ತು.

"ಅಜ್ಜಿ ನಮ್ಗೊಂದಿಟ್ ಕೂಳ್ ಬೇಯ್ಸಾಕ್ತೀಯಾ ?" ಅಂದಾ.



ಅಜ್ಜಿ "ಹೂಂವ್ಗ ಕಟ್ಟರೆರಿಲ್ಲಾ ಮಗ್ನೆ ಕೆದ್ಗಿರಾಯ್ನ ಮನೆಗ್ಹೋಗ್ಬೇಕು." ಅಂತು.

"ಇ ಕೆಲ್ಸಾ ನಾ ಮಾಡ್ತೆ ಅಜ್ಜಿ" ಅಂದಾ, ಮಂತ್ರಿ ಮಗಾ. ಚಂದಕ್ಕೆ ಹೂಂವ್ಗ ಕಟ್ದಾ. ಅದ್ರಲೊಂದ್ ಕಾಗ್ತಾ ಇಟ್ಟಾ.
ಅದ್ರಲ್ಲಿ " ಅರ್ಸು ಮಗಾ ಹೆಂಗ್ಬರ್ಬೇಕು ?" ಅಂದ್ ಬರ್ದಾ. ಕೆದ್ಗೀರಾಯ್ನ ಸೊಸೆ ಓದ್ತು.

"ಸರ್ಪಳಿ ಏಣಿ ಬಿಡ್ತೆ, ಹತ್ ಬರ್ಬೇಕು" ಅಂದ್ ಚೀಟಿ ಬರಿತು. ಅಜ್ಜಿ, ಹೂಂವ್ಗ್ನಬುಟ್ಟಿಗೆ ಇಟ್ರಾಗಿ ಹೊಯ್ತು. ಅಲ್ಲೇ ಚೀಟಿನೂ ಇಡ್ತು. ಅಜ್ಜಿ ರಾಗಿ ಚಬ್ಬೆ ತಕ್ಕಾ ಮನೆಗ್ಬಂತು.

ಅಜ್ಜಿ ರಾಗಿ ಚಬ್ಬೆ ನೋಡಿ ಮಂತ್ರಿ ಮಗಾ ಹೇಳ್ದಾ. "ಅಜ್ಜೀ ಆ ರಾಗಿ ಇಲ್ತಾ. ನಾ ಹೆಕ್ಕಿ ಚೊಕ್ಕಮಾಡ್ಕೊಡ್ತೆ." ಅಂದಾ. ಅಜ್ಜಿಗೆ ಕುಸೀ ಆಯ್ತು. ರಾಗಿ ಹೆಕ್ವಾಗೆ ಒಂದ್ ಚೀಟಿ ಸಿಕ್ತು. ಓದ್ಕೊಂಡಾ ಮಂತ್ರಿ ಮಗಾ. ಇಂವಾ ಕವ್ಳ, ಪರಿಮಳ್ದ ಸಾಮಾನು, ಹೂಂವ್ಗ ಎಲ್ಲಾ ತಂದಾ. ಅರ್ಸು ಮಗ್ನ ಕಯ್ಲ್ ಕೊಟ್ಟಾ. ಹೆಂಗ್ ಹೋಗ್ಬೇಕು ಅಂಬೂದೆಲ್ಲಾ ತಿಳಿಸ್ದಾ. "ಹೋಗಿ ಪಲ್ಲಂಗದ್ಮೆಲೆ ಇದೆಲ್ಲಾ ಸಾಮಾನಿಡು." ಅಂದಾ.

ಅರ್ಸು ಮಗಾ ಸರ್ಪಳಿ ಏಣಿ ಹತ್ತಿ ಮೆನ್ಹೋದಾ. ತಕ್ಕಂಡೋದ್ಸಾಮಾನೆಲ್ಲಾ ಪಲ್ಲಂಗ್ದ ಮೆನಿಟ್ಟಾ ಬಂದ್ಬಿಟ್ಟಾ. ಮಂತ್ರಿ ಮಗಾ ಕೇಳ್ದಾ "ಏನ್ ಮಾಡ್ದೆ ? "

"ಸಾಮಾನೆಲ್ಲಾ ಪಲ್ಲಂಗದ್ಮೆನಿಟ್ಟೆ ಬಂದ್ಬಿಟ್ಟೆ" ಅಂದಾ.

"ಅಯ್ಯೋ ಪೆದ್ದಾ ಅರ್ಸು ಬುದ್ಧಿ ನನ್ಕತ್ತಿ ಬುದ್ದಿ ಒಂದೇ ಅಂದಿದ್ರಂತೆ ಅದೇ ಗಾದೆ ಆಯ್ತಲೋ " ಅಂದಾ. ಒಂದೆರ್ಡ್ ಬುದ್ಧಿ ಮಾತೇಳ್ದಾ. ಮತ್ತಿಕ್ಳಿ ಕೊಟ್ಟಾ.

ಮಾರ್ನೆದಿನಾ ಸರ್ಪಳಿ ಏಣಿ ಹತ್ ಹೋದಾ ಅರ್ಸ್ನ ಮಗಾ. ಹೋಗ್ತಾ, ಕೆದ್ಗಿ ರಾಯ್ನಸೊಸೆ ಸೆರ್ಗ ಹಿಡ್ದಾ. ಅದು "ಬಿಡು" ಅಂತು. ಬಿಟ್ಟಾ, ಬಂದ್ಬಿಟ್ಟಾ.

ಮಂತ್ರಿ ಮಗಾ ಕೇಳ್ದಾ " ಮತ್ತೆ ಏನ್ಹೇಳ್ತೋ ಅದು ?"

"ಏನಿಲ್ಲಾ ಸೆರ್ಗ ಬಿಡು ಅಂತು, ಬಿಟ್ ಬಂದೆ" ಅಂದಾ. ಇವ್ನ ಕಯ್ಲಿ ಕೆಲ್ಸಾ ಆಗೂದಲ್ಲಾ; ಬೇರೆ ಉಪಾಯ ಮಾಡ್ಬೇಕು ಅಂದ್ಕಂಡಾ.

ಅರ್ಸ್ನ ಮಗ್ಗೆ ಹೆಣ್ ದಿರ್ಸ್ನ ಮಾಡ್ದಾ, ಕೆದ್ಗೆರಾಯ್ನ ಮನೆಗೆ ಕರ್ಕಂಡ್ ಹೋದಾ. " ಇದು ನನ್ತಂಗಿ ನಾನು ಎಂಟ್ದಾತ್ ದಿನ್ಕೆ ತಿರ್ಗಬಂದ್ ಕರ್ಕಾ ಹೋಗ್ತೆ. ಇಲ್ಲಿ ತಂಟು ನಿಮ್ಕೂಡೆ ಇದ್ರಿಟ್ಕಂಡ್ರೆ ಉಪ್ಕಾರಾಗ್ತದೆ" ಅಂದಾ.

"ಆಗ್ಲಿ ನಮ್ಮನೆಲಿ ನನ್ ಸೊಸೆ ಒಬ್ಳೇ ಅದೆ. ನನ್ಮಗಾ ದಂಡೀಗೋ ದಂಪಾ ಬರೂಕ್ತಡಾ ಅದೆ." ಅಂದಾ.

"ಮತ್ತೆ ನಿಮ್ಮಗಾ ಬಂದ್ಮೇಲೆ ನನ್ತಂಗಿ ಕಾಳ್ಜ ಇರ್ಲಿ" ಅಂದ್ಹೇಳಿಟ್ಟ ಹೋದಾ ಮಂತ್ರಿ ಮಗಾ.

ಅರ್ಸ್ನ ಮಗಾ ಕೆದಗೀ ರಾಯ್ನ ಸೊಸೆ ಹತ್ರಾ ಉಳ್ದಾ. ಒಂದಿನಾ ಕೆದಗೀ ರಾಯ್ನ ಮಗಾ ಬಂದಾ. ಆಗಾ ಅಂವ್ನ ಹೆಂಡ್ತಿ ಮೊದ್ಲೆ ಎಚ್ಚರ್ಕೆ ಕೊಡ್ತು. "ಮತ್ತೆ ಆ ಹಂಡ್ಗಿ ಕೋಣೆಗ್ ಹೋಗ್ಬೇಡಿ ಪರ್ರ ಮನೆ ಹುಡ್ಗಿ" ಇಂತು. ಆದ್ರೂ ಈ ಕೆದಗೀ ರಾಯ್ನ ಮಗಾ ಎಲ್ಲವ್ರೂ ಮನಗದ್ ನೋಡ್ಕಂಡಾ, ಅದ್ರ ಕೊಣೆಗ್ ಹೋದ. ಅದು ಒಂದ್ಸಾರಿ ತಕ್ಕಂತು ಈವ್ನ ಮೂಗ್ ಕೊಯ್ದ್ಬಿಡ್ತು. ಮೂಗ್ ಹೋದ್ಮೆನೆ ಮೊಕಾ ಹೆಂಗ್ ತೋರ್ಸ್ನದು ? ಆಗ್ಲೇ ಎದ್ದಾ ಕಾಸೀಯಾತ್ರೆಗೆ ಹೋಗ್ಬಿಟ್ಟಾ ಕೆದಗೀ ರಾಯ್ನ ಮಗಾ. ಅರ್ಸ್ನ ಮಗ್ನೂ ಸರ್ಪಳಿ ಏಣಿ ಇಳ್ದಾ, ಮಂತ್ರಿ ಮಗಾ



ಇದ್ದಲ್ಲೆ ಬಂದ್ಬಿಟ್ಟಾ. ಬೆಳ್ಗ ಮುಂಚೆ ಮಂತ್ರಿ ಮಗಾ ಬಂದಾ, ತನ್ ತಂಗಿ ಕರ್ಕಂಡ್ ಹೋಗೂಕೆ. ಕೆದಗೀ ರಾಯಾ ಏನ್ ಮಾಡ್ತಾ ? "ನನ್ನ ಮಗ್ನೇ ನಿನ್ತಂಗಿ ಓಡಸ್ಕಂಡೋದಾ ಏನ್ ಮಾಡ್ಲಿ ಹೇಳಪ್ಪಾ ? ಅಂದಾ.

ಆಗಾ "ನಿನ್ಸೊಸೇನೇ ನನ್ಗೆ ಕೊಡ್ಬೇಕು" ಅಂದಾ.

"ಆಗ್ಲಿ" ಅಂದಾ ಕೆದಗೀರಾಯಾ. ಮಂತ್ರಿ ಮಗಾ ಕೆದಗೀರಾಯ್ನ ಸೊಸೆ ಕರ್ಕಂಡು ಅರ್ಸ್ನ ಮಗ್ನ ಕರ್ಕಂಡು ಅರಮನೆಗ್ಬಂದಾ.

---

## ಶಬ್ದಗಳು

ಮೆನೆ–ಮೇಲೆ. ಬತ್ಕೆ–ಬತ್ತಕ್ಕೆ, ಕಂಡ್ಗ–ಕಂಡಂಗ, ಇಪ್ಪತ್ತು ಕೊಳಗ. ಮಿರ್ದ್ರ-ಒನಕೆಯಿಂದ ಕುಟ್ಟಿದರೆ ದಿಕ್ಕರ್ಸೇ–ಧಿಕ್ಕರಿಸಿಯೇ, ಮೊಕಾ–ಮುಖ, ಇತ್ಲಾಗೆ-ಇತ್ತಕಡೆ, ಅತ್ಲಾಗೆ–ಅತ್ತಕಡೆ, ಈಸ್ವಂತ-ಅಶ್ವತ್ಥ, ತೆಳೀಲೇ–ತಿಳಿಯಲೇ, ಕರ್ಕಾ–ಕರೆದು, ಮರ್ಜಿ–ಅನುಗ್ರಹ, ಅರಸಿನ-ಅರಸನ, ಹೆಯ್ಟ-ಹೊರಟು, ನೋಡ್ವಾನಿ–ನೋಡೋಣ, ಹೂಂವ್ನ-ಹೂವಿನ, ಕಾಗ್ತಾ-ಕಾಗದ, ಬಿಡ್ತೆ–ಬಿಡುತ್ತೇನೆ. ಬರಿತು-ಬರೆದಳು, ಚಬ್ಬೆ-ಚಿಕ್ಕಬುಟ್ಟಿ, ಹೆಕ್ಕಿ-ಆರಿಸಿ, ಚೊಕ್ಕಾ–ಸ್ವಚ್ಛ, ಕುಸೀ-ಖುಶಿ, ಕವ್ಳಾ-ತಾಂಬೂಲ, ಪಲ್ಲಂಗ (ಪನ್ನಂಗ)-ಮಂಚ, ಕಳೀಕೊಟ್ಟಾ-ಕಳುಹಿಸಿಕೊಟ್ಟನು, ದಿರುಸು–ಡ್ರೆಸ್ಸು, ತಂಟು–ವರೆಗೆ, ನಿಮ್ಕೂಡೆ-ನಿಮ್ಮ ಜೊತೆಗೆ

## ಕತ್ತೆ-ಹುಲಿ ಮತ್ತು ಮನುಷ್ಯ

ಬಾಚಿನಳ್ಳಿ ಕೆರಿ ದಂಡೆ ಮ್ಯಾಲೆ ಒಂದು ಬಡಕಲು ಕತ್ತಿ ಮೇಯುತ್ತಿತ್ತಂತೆ. ಅಲ್ಲಿಗೆ ಒಂದು ಹಸಿದ ಹುಲಿ ಬಂತಂತೆ. ಹುಲಿ ಹಸಿವೆ ತಾಳಲಾರದೆ ಕತ್ತೀನ ತಿಂತನೀ ಅಂತಂತೆ. ಆಗ ಕತ್ತಿ ಹೇಗಾದರೂ ಮಾಡಿ ಪಾರಾಗಬೇಕೆಂದು ಉಪಾಯ ಹುಡುಕಿ ಬ್ಯಾಡಪಾ ಹುಲಿರಾಯ ನಾನು ನೋಡಿದರ ಬಡಕಲು ಆಗೀನಿ. ಸ್ವಲ್ಪ ಹೊತ್ತು ತಡಿ ಬೇಕಾದ್ರೆ ಚನ್ನಾಗಿ ಮೇದು ಬರ್ತೀನಿ ಆ ಮ್ಯಾಲೆ ತಿನ್ನೂವಂತಿ ಅಂತಂತೆ. ಅದಕ್ಕೆ ಹುಲಿ ಒಪ್ಪಿ ಹಂಗಾದ್ರೆ ನಾನು ಇಲ್ಲೆ ಇರ್ತೀನಿ. ನೀನು ಚನ್ನಾಗಿ ಮೇದು ಇದೇ ಜಾಗಕ್ಕೆ ಬಾ ಅಂತಂತೆ. ಅಲ್ಲಿಂದ ಕತ್ತಿ ಸೀದಾ ಹಳ್ಳದ ದಂಡಿಗೆ ಬಂದು ರಾಡ್ಯಾಗ ಉಳ್ಳ್ಯಾಡಿ ಮೈತುಂಬ ರಾಡಿ ಮೆತ್ತಿಕೊಂಡು ಹುಲಿ ಹತ್ರ ಬಂತಂತೆ. ಹುಲಿರಾಯ ನೋಡು ನಾನೀಗ ಚನ್ನಾಗಿ ಮೇದು ದಪ್ಪ ಆಗೀನಿ. ನೀನು ಬೇಕಾದ್ರೆ ಈಗ ನನ್ನ ತಿನ್ನಬಹುದು. ಆದ್ರೆ ಒಂದು ಕರಾರು, ಏನಪಾ ಅಂದ್ರೆ ನೀನು ಮೂರೇ ಮೂರು ಸಾರಿ ನನ್ನ ಮೈಗೆ ಬಾಯಿ ಹಾಕು. ಬಾಯಿಗೆ ಬಂದಷ್ಟು ಮಾಂಸ ತಿನ್ನು. ನಂತರ ನಾನು ನಿನ್ನ ಮೂರೇ ಮೂರು ಸಾರಿ ಒದೀತಿನಿ. ಒದಿಸ್ಕೋಬೇಕು ಅಂತ ಕತ್ತಿ ಹೇಳಿತಂತೆ. ಅದಕ್ಕೂನು ಹುಲಿ ಒಪ್ಕೊಂಡು ಮೂರು ಸಾರಿ ಕತ್ತಿ ಮೈಗೆ ಬಾಯಿ ಹಾಕಿತಂತೆ. ಆದರೆ ಹುಲಿ ಬಾಯಿಗೆ ಕತ್ತೆ ಮೈಗಂಟಿದ್ದ ಕೆಸರು ರಾಡಿ ಬಂತೇ ಹೊರತು ಮಾಂಸ ಬರಲಿಲ್ಲ. ಈಗ ಕರಾರಿನಂತೆ ಕತ್ತಿ ಹುಲೀನ ಒಮ್ಮೆ ಒದೀತಂತೆ. ಆ ಒಂದೇ ಒದೆತಕ್ಕೆ ಹುಲಿ ತಲಿ ತಿರುಗಿ ಅಲ್ಲಿಂದ ಓಟ ಕಿತ್ತಿತಂತೆ. ಆಗ ದಾರ್ಯಾಗ ಒಂದು ಹೊಲದಾಗ ಒಬ್ಬ ಮನಿಸ್ಯಾ ಎತ್ತು ಮೇಯಿಸುತ್ತಾ ಇದ್ನಂತೆ. ಆ ಮನಿಸ್ಯಾ ದಾರಿ ಬದಿ ಓಡುವ ಹುಲಿ ಕಂಡು ಏನಪಾ ಹುಲಿರಾಯ, ಯಾಕ ಹೆದರ್ಕೊಂಡು ಓಡ್ತಿದಿ ಅಂದ್ನಂತೆ. ಅಲ್ಲೆ ಗಿಡಗಂಟಿ ಮರೀಗೆ ಹೊಕ್ಕೊಂಡು ಹುಲಿ ಕತ್ತಿ ನನ್ನ ಒದೆಯೋಕೆ ಹಿಂಬಾಲಿಸಿದೆ. ಅದಕ್ಕೆ ಇಲ್ಲಿ ಹೊಕ್ಕೊಂಡೀನಿ. ಕತ್ತಿ ಬಂದರೆ ನಾ ಇಲ್ಲಿ ಆದೀನಿ ಅಂತ ಹೇಳ್ಬೇಡ ಅಂತಂತೆ. ಅದಕ್ಕೆ ಆ ಮನಿಸ್ಯಾ ಕತ್ತೀಗೆ ಹೆದರ್ಕೊಂಡು ಬಂದೀಯಲ್ಲೊ ಹುಲಿರಾಯ ಅಂತ ನಕ್ಕು ನಾನು ಇರ್ತೀನಿ ನೀನೇನ್ ಹೆದರ ಬ್ಯಾಡ ಅಂತ ಧೈರ್ಯ ಹೇಳಿದನಂತೆ. ಆ ಮ್ಯಾಲೆ ಕತ್ಲೆ ಆತಂತೆ. ಹುಲಿಗೆ ಮತ್ತಷ್ಟು ಭಯ ಆಗಿ ಆ ಮನಿಸ್ಯಾನ ಹಿಂದಿಂದೆ ಆತನ ಮನೀಗೆ ಬಂತಂತೆ. ಮನೀಗೆ ಬಂದು ರಾತ್ರಿ ಊಟಕ್ಕೆ ಕುಂತಾಗ ಆ ಮನಿಸ್ಯಾ ಕತ್ತಿಗೆ ಹೆದರ್ಕೊಂಡು ಬಂದ ಹುಲಿ ಕತೀನ ಮನಿಯವರಿಗೆಲ್ಲ ಹೇಳಿದನಂತೆ. ಅದೇ ಮನಿ ಹಿಂದೆ ಅವಿತುಕೊಂಡಿದ್ದ ಹುಲಿ ಅದನ್ನೆಲ್ಲ ಕೇಳಿಸಿಕೊಂಡು ಸಂಕಟ ಆತಂತೆ. ಯಾಕಂದ್ರೆ ಹುಲಿ ಕತೆ ಕೇಳಿ ಮನೆಯವರೆಲ್ಲ ನಕ್ಕರಂತೆ. ತಿರುಗಿ ಮನೆಯವರಿಗೆಲ್ಲ ಹೇಳಿ ತನಗೆ ಅವಮಾನ ಮಾಡಿದ ಆ ಮನಿಸ್ಯಾನ ಮೇಲೆ ಆ ಹುಲಿಗೆ ಸಿಟ್ಟು ಬಂತಂತೆ. ಮತ್ತೆ ಮರುದಿನ ಆ ಮನಿಸ್ಯಾ ಎತ್ತು ಮೇಯಿಸಾಕೆ ಅಡವಿಗೆ ಬಂದಾಗ ಆ ಹುಲಿ ಹೇಳಿತಂತೆ–ಏನಪಾ ಮನಿಸ್ಯಾ ನಿನ್ನೆ ನಾನು ಕತ್ತಿ ಒದ್ದಾಗ ಓಡಿ ಬಂದ ವಿಷಯ ನೀನು ಎಲ್ಲರಿಗೂ ಹೇಳಿ ನನಗ ಅವಮಾನ ಮಾಡಾಕ ಹತ್ತಿ ಏನು ? ಅಂತಂತೆ. ಅದಕ್ಕೆ ಆ ಮನಿಸ್ಯಾ ಹೆದರ್ಕೊಂಡು ಏ ಇಲ್ಲ ಪಾ, ನಾ ಮಾತ್ರ ಯಾರಿಗೂ ಹೇಳಿಲ್ಲ ಅಂದ್ನಂತೆ. ಮತ್ತೆ ನಿನ್ನೆ ರಾತ್ರಿ ನಿಮ್ಮ ಮನ್ಯಾಗ ಊಟಕ್ಕೆ ಕುಂತಾಗ ನೀನು ಎಲ್ಲಾರಿಗೂ ಹೇಳ್ದಿ. ಅವರೆಲ್ಲ ನಕ್ಕರು. ನನಗೆ ಅವಮಾನ ಮಾಡೀದಿ. ನಿನ್ನ ಈಗ ತಿಂದು ಬಿಡ್ತೀನಿ ಅಂತಂತೆ ಹುಲಿ. ಆ ಮನಿಸ್ಯಾಗ ಹೆದರಿಕೆ ಆಗಿ 'ಪುರುಕ್' ಅಂತ ಹೂಸು ಬಿಟ್ನಂತೆ ಆ ಹೂಸಿನಶಬ್ದ ಕೇಳಿ ಬೆಚ್ಚಿ ಬಿದ್ದ ಹುಲಿ ಏನದು ಶಬ್ದ 'ಪುರುಕ್' ಅಂತಲ್ಲ ಅಂತ ಕೇಳ್ತಂತೆ. ಆಗ ಆ ಮನಿಸ್ಯಾ ಹೇಳಿದ್ನಂತೆ–ಮತ್ತೆ ನಾನು ಸಣ್ಣಾತ ಇದ್ದಾಗ ನಮ್ಮಜ್ಜಿ ನನ್ನ ಮುಕಳಾಕ ಒಂದು ಕತ್ತೀ ಮರಿ ಬಿಟ್ಟಿದ್ದಳು ಆ ಕತ್ತೀ ಮರಿ ಈಗ ನನ್ನ ಹೊರಾಕ ಬಿಡು ಆ ಹುಲೀನ ಒದೀತೀನಿ ಅಂತ ಹೇಳ್ತತಿ ಅಂದ್ನಂತೆ. ಹುಲಿ ಕತ್ತೀಮರಿ ಅನ್ನೋ ಶಬ್ದ ಕಿವಿಗೆ ಬೀಳುತ್ತಲೆ

ಓಡಾಕ ಶುರು ಮಾಡಿ ಏssssಏ ಮಾರಾಯ ಆ ಕತ್ತೀಮರಿ ಮಾತ್ರ ಹೊರಾಕ ಬಿಡಬ್ಯಾಡ ನಾ ನಿನ್ನ ತಿನ್ನಂಗಿಲ್ಲಪ ಮಾರಾಯ ನಾ ಹೋಗುತೀನಿ ಅಂತ ಓಡಿ ಹೋತಂತೆ. ಆ ಮನಿಸ್ಯಾ-ಏ ನೋಡು ಮತ್ತೆ ಆ ಕತ್ತೀ ಮರಿ ಹೊರಾಕ ಬಿಟ್ರ ನಿನ್ನ ತಲಿ ತಿರುಗಂಗೆ ಒದೀತದೆ ಈಗ ಬಿಡ್ತೀನಿ ನೋಡು ಅಂದ್ನಂತೆ ಹುಲಿ ಕಣ್ಣಿಗೆ ಕಾಣದ್ಹಾಂಗ ಓಡಿ ಹೋತಂತೆ.

---

# ಏಳು ಮಂದಿ ರಾಜಕುಮಾರಿಯರು ಮತ್ತು ಅರಶಿನದ ಗಡ್ಡೆ

ಒಂದೂರಿನಲ್ಲಿ ಒಬ್ಬ ರಾಜನಿದ್ದನು. ಅವನಿಗೆ ಏಳು ಜನ ಹೆಣ್ಣು ಮಕ್ಕಳು. ಪ್ರತಿದಿನವೂ ಆ ಏಳು ಜನವೂ ಒಟ್ಟಾಗಿಯೇ ಬಾವಿ ಕಟ್ಟೆಗೆ ಹೋಗಿ ಅರಶಿನವನ್ನು ತೇದು ಮೈಗೆಲ್ಲಾ ಹಚ್ಚಿಕೊಂಡು ಸ್ನಾನ ಮಾಡಿ ಬರುವರು. ಒಂದು ದಿನ ಅರಶಿನದ ಗಡ್ಡೆಯನ್ನು ತೇಯುತ್ತಿದ್ದಾಗ ಅದು ಫಕ್ಕನೆ ಬಾವಿಯೊಳಗೆ ಬಿತ್ತು. ಆಗ ದೊಡ್ಡ ಮಗಳು ಬಾವಿಗಿಳಿದು "ದೇವರೇ, ನನ್ನಪ್ಪ ಮಾಡಿದ ಪುಣ್ಯದಿಂದಲಾದರೂ ನನಗೆ ಗಡ್ಡೆ ಸಿಗಲಿ" ಎಂದು ಹೇಳಿ ಗಡ್ಡೆಯನ್ನು ಹುಡುಕಿದಳು. ಅವಳಿಗೆ ಗಡ್ಡೆ ಸಿಗಲೇ ಇಲ್ಲ. ಬಳಿಕ ಎರಡನೇ ಮಗಳು ಬಾವಿಗಿಳಿದು "ದೇವರೇ ನನ್ನಮ್ಮ ಮಾಡಿದ ಪುಣ್ಯದಿಂದಲಾದರೂ ಗಡ್ಡೆ ಸಿಗಲಿ" ಎಂದು ಹೇಳಿ ಹುಡುಕಿದಳು. ಅವಳಿಗೂ ಗಡ್ಡೆ ಸಿಗಲೇ ಇಲ್ಲ. ಹಾಗೆ ಒಬ್ಬೊಬ್ಬರೂ ತಮ್ಮ ಅಜ್ಜ, ಮಾವ, ಹೀಗೆ ಒಬ್ಬೊಬ್ಬರ ಹೆಸರನ್ನು ಹೇಳಿ ಹುಡುಕಿದರೂ ಗಡ್ಡೆ ಸಿಗಲೇ ಇಲ್ಲ. ಕೊನೆಯ ರಾಜಕುಮಾರಿ "ದೇವರೇ ನನ್ನ ಗಂಡ ಮಾಡಿದ ಪುಣ್ಯದಿಂದಲಾದರೂ ಗಡ್ಡೆ ಸಿಗಲಿ' ಎಂದು ಹೇಳಿ ಹುಡುಕಿದಳು. ಅವಳಿಗೆ ಗಡ್ಡೆ ಸಿಕ್ಕಿತು. ಇದನ್ನು ಕಂಡು ಅವಳ ಅಕ್ಕಂದಿರಿಗೆಲ್ಲಾ ಅವಳ ಮೇಲೆ ಹೊಟ್ಟೆಕಿಚ್ಚು ಉಂಟಾಯಿತು. "ಓಹೋ, ಇವಳ ಗಂಡ ಬಹಳ ಪುಣ್ಯವಂತನೇನೋ ? ಇವಳಿಗಿನ್ನೂ ಮದುವೆಯೇ ಆಗಿಲ್ಲ. ಆಗಲೆ ಗಂಡನ ಧ್ಯಾನ. ಇವಳ ಗಂಡನ ಪುಣ್ಯ ನೋಡೋಣ" ಎನ್ನುತ್ತಾ ಮನೆಗೆ ಹೋದರು. ತಂದೆ ತಾಯಿಯ ಹತ್ತಿರ

ಚಿಕ್ಕ ತಂಗಿಯು ಕುರಿತು ಇಲ್ಲ ಸಲ್ಲದ ದೂರನ್ನು ಹೇಳಿದರು. "ನಮ್ಮ ಚಿಕ್ಕ ತಂಗಿಗೆ ತಾಯಿ ತಂದೆಯರು ಮಾಡಿದ ಪುಣ್ಯಕ್ಕಿಂತಲೂ ಅವಳ ಗಂಡನು ಮಾಡಿದ ಪುಣ್ಯವೇ ಹೆಚ್ಚಂತೆ. ಅದರಿಂದಲೇ ಅವಳಿಗೆ ಅರಶಿನದ ಗಡ್ಡೆ ಸಿಕ್ಕಿದ್ದಂತೆ. ಯಾಕೂ ಬೇಡದವನನ್ನು ತಂದು ಅವಳಿಗೆ ಮದುವೆ ಮಾಡ ಬೇಕು. ಆಗಲೇ ಇವಳ ಗಂಡನ ಪುಣ್ಯ ಗೊತ್ತಾಗುತ್ತದೆ." ಎಂದವರು ಹೇಳಿದರು.

ರಾಜನು ಇದನ್ನು ಒಪ್ಪಿಕೊಂಡು ಆರು ಮಂದಿಗೂ ಒಳ್ಳೊಳ್ಳೆಯ ನೆಂಟಸ್ತಿಕೆ ಹುಡುಕಿ ಮದುವೆ ಮಾಡಿದನು. ಕೊನೆಯವಳಿಗೆ ಮಾತ್ರ 'ಈಗತಾನೆ ಸಾಯಲು ಸಿದ್ಧ' ನಾದವನ್ನು ಹುಡುಕಿ ತರಬೇಕೆಂದು ರಾಜಭಟರಿಗೆ ಹೇಳಿ ಕಳುಹಿಸಿದನು. ರಾಜಭಟರು ಅಂತಹ ವ್ಯಕ್ತಿಯನ್ನು ಹುಡುಕುತ್ತಾ ಹೋಗುತ್ತಿರುವಾಗ ದಾರಿಯಲ್ಲಿ ಒಬ್ಬನು 'ಅಯ್ಯೊಪ್ಪಾ, ನಾನೀಗಲೇ ಸಾಯ್ತೇನಪ್ಪಾ ನಾನು ಬದುಕಲಾರೆನಪ್ಪಾ' ಎಂದು ನರಳುತ್ತಾ ಬಿದ್ದುಕೊಂಡಿದ್ದನು. ರಾಜಭಟರು ಅವನನ್ನು ಜಾಗ್ರತೆಯಿಂದ ಎತ್ತಿಕೊಂಡು ಅರಮನೆಗೆ ಬಂದರು. ಆ ದರಿದ್ರನೊಂದಿಗೆ ರಾಜನು ತನ್ನ ಕೊನೆಯ ಮಗಳ ಲಗ್ನವನ್ನು ಮುಗಿಸಿದನು. ಬಳಿಕ ತನ್ನ ಹಿರಿಯ ಮಗಳಂದಿರಿಗೆ ಧನ ಕನಕ ವಸ್ತ್ರ ವಾಹನಾದಿ ಬೆಲೆಬಾಳುವ ಉಡುಗೊರೆಗಳನ್ನೂ ಪರಿಚಾರಿಕೆಯರನ್ನೂ ಕೊಟ್ಟು ಕಳುಹಿಸಿದನು. ಕೊನೆಯವಳಿಗೆ ಮಾತ್ರ ಒಡೆದ ಪಾತ್ರೆಗಳು, ಹರಕು ಬಟ್ಟೆಗಳನ್ನು ಬಳುವಳಿಯಾಗಿ ಕೊಟ್ಟು ಅರಮನೆಯ ಹತ್ತಿರವೇ ಒಂದು ಗುಡಿಸಲನ್ನು ಕಟ್ಟಿಕೊಟ್ಟು ಕಳುಹಿಸಿಕೊಡುತ್ತಾನೆ. ಪ್ರತಿದಿನವೂ ಕುದುರೆಗೆ ಬೇಯಿಸುವ ನುಚ್ಚಕ್ಕಿಯನ್ನು ಅರ್ಧ ಸೇರಿನಷ್ಟು ಅವಳಿಗೆ ಕೊಡಿಸುತ್ತಿದ್ದನು.

ಹೀಗೇ ದಿನಗಳು ಕಳೆದವು. ತಾಯಿ ಮಹಾರಾಣಿ ಒಮ್ಮೆ ಎಲ್ಲ ಮಗಳಂದಿರ ಮನೆಗೆ ಭೇಟಿಕೊಟ್ಟು ಕೊನೆಯ ಮಗಳ ಮನೆಗೆ ಬರುತ್ತಾರೆ. 'ಏನಮ್ಮ ಚೆನ್ನಾಗಿದ್ದೀಯಾ' ಎಂದು ಮಗಳನ್ನು ಕೇಳುತ್ತಾರೆ. 'ತಕ್ಕಮಟ್ಟಿಗೆ ಇದ್ದೇನೆ' ಎಂದು ಮಗಳು ಹೇಳುತ್ತಾಳೆ. 'ನಿನ್ನ ಗಂಡ ಹೇಗಿದ್ದಾನೆ' ಎಂದು ತಾಯಿ ತಿರುಗಿ ಕೇಳಲು ಮಗಳು 'ಅವರು ಊಟವನ್ನೇ ಮಾಡುವುದಿಲ್ಲ.



ನೀವು ಕೊಡಿಸುವ ನುಚ್ಚಕ್ಕಿಯನ್ನು ನಾನೊಬ್ಬಳೇ ಬೇಯಿಸಿ ತಿನ್ನುತ್ತೇನೆ. ಅವರು ಇಡೀ ದಿನ ಏನೂ ತಿನ್ನುವುದಿಲ್ಲ.' ಎಂದು ದುಃಖದಿಂದ ಹೇಳುತ್ತಾಳೆ. ಆಗ ತಾಯಿ 'ಹಾಗಿದ್ದರೆ ಅವನು ಮತ್ತೇನನ್ನು ತಿನ್ನುತ್ತಾನೆ. ಏನೂ ತಿನ್ನದೆ ಬದುಕಿರುವುದಾದರೂ ಹೇಗೆ ?' ಎಂದು ಕೇಳಿದಾಗ, ಮಗಳು 'ಅದೇನೊ ನನಗೆ ಗೊತ್ತಿಲ್ಲ. ಈ ಮನೆಯಲ್ಲಿ ಏನೂ ತಿನ್ನುವುದಿಲ್ಲ. ಮನೆ ಬಿಟ್ಟು ಬೇರೆಲ್ಲೂ ಹೋಗುವುದಿಲ್ಲ' ಎಂದಳು. 'ಹಾಗಿದ್ರೆ ರಾತ್ರಿ ಏನಾದ್ರೂ ತಿನ್ನುತ್ತಿರಬಹುದು, ನೀನು ಈ ರಾತ್ರಿ ಜಾಗರಣೆ ಮಾಡಿ ಅವನು ಏನನ್ನು ತಿನ್ನುತ್ತಾನೆಂಬುದನ್ನು ನೋಡು' ಎಂದು ತಾಯಿ ಮಗಳಿಗೆ ಹೇಳಿದಳು. ರಾಜಕುಮಾರಿ ಆಗಲೆಂದು ಒಪ್ಪಿಕೊಂಡಳು,

ಮರುದಿನ ತಾಯಿ ಬಂದು 'ರಾತ್ರಿ ಏನು ನಡೆಯಿತೆಂದು' ಕೇಳಿದಾಗ ರಾಜಕುಮಾರಿ 'ಅಯ್ಯೋ ಅಮ್ಮ' ನನಗೆ ನಿದ್ರೆ ಬಿಡಲೇ ಇಲ್ಲ. ಎಷ್ಟು ಪ್ರಯತ್ನಪಟ್ಟರೂ ಎಚ್ಚರವಿರಲು ಸಾಧ್ಯವಾಗಲಿಲ್ಲ' ಎಂದು ಹೇಳಿದಳು. 'ಹಾಗಿದ್ರೆ ಈ ದಿನ ಒಂದು ಕೆಲಸ ಮಾಡು, ಕಿರುಬೆರಳಿಗೆ ಒಂದಿಷ್ಟು ಗಾಯ ಮಾಡಿ ಬಿಡು. ಹಾಗಿದ್ರೆ ರಾತ್ರಿ ನಿದ್ರೆ ಬರ್ಲಿಕ್ಕಿಲ್ಲ, ಎಂದು ಹೇಳಿದಳು. ಅದೇ ರೀತಿ ಮಗಳು ರಾತ್ರಿ ಬೆರಳಿಗೆ ಗಾಯ ಮಾಡಿಕೊಂಡು ಮಲಗಿದಳು. ರಾತ್ರಿಯೆಲ್ಲ ನಿದ್ರೆ ಬಾರದೆ ನರಳುತ್ತಿದ್ದ ಅವಳನ್ನು ಕಂಡು ಅವಳ ಗಂಡನು 'ಏನಿದು ನಿನ್ನ ನರಳಾಟ' ಸುಮ್ಮನೆ ಕಣ್ಣು ಮುಚ್ಚಿ ಮಲಗಬಾರದೆ' ಎಂದು ಗದರಿಸಿದನು . ರಾಜಕುಮಾರಿ ಕಣ್ಣು ಮುಚ್ಚಿಕೊಂಡು ನಿದ್ರೆ ಬಂದವಳಂತೆ ನಟಿಸಿದಳು. ಅವಳಿಗೆ ನಿದ್ರೆ ಬಂದಿತೆಂದು ತಿಳಿದ ಅವಳ ಗಂಡನು ಕೂಡಲೇ ಎದ್ದು ತನ್ನ ಹರಕು ಅಂಗಿಯನ್ನು ಮೂಲೆಯಲ್ಲಿಟ್ಟು ಸ್ನಾನಮಾಡಿ ದೇವರನ್ನು ಧ್ಯಾನಿಸಿಕೊಂಡು ಬಂದು ತನ್ನಲ್ಲಿದ್ದ ಬೀಸಣಿಗೆಯನ್ನು ಎಡದಿಂದ ಬಲಕ್ಕೆ ತಿರುಗಿಸುತ್ತಾನೆ. ಆಗ ಅವನಿಗೆ ಬೇಕಾದ ಭಕ್ಷ್ಯ ಭೋಜ್ಯಗಳೆಲ್ಲ ಬೆಳ್ಳಿತಟ್ಟೆಗಳಲ್ಲಿ ಸಿದ್ಧವಾಗುತ್ತವೆ. ವಿವಿಧ ಕಜ್ಜಾಯಗಳು, ಲಾಡುಗಳು ಇನ್ನಿತರ ಸಿಹಿ ತಿಂಡಿಗಳೆಲ್ಲ ಅಲ್ಲಿ ಕಂಡು ಬರುತ್ತವೆ. ಅವುಗಳಲ್ಲಿ ತನಗೆ ಬೇಕಾದುದನ್ನು ತಿಂದು ಬೀಸಣಿಗೆಯನ್ನು ಬಲದಿಂದ ಎಡಕ್ಕೆ ಬೀಸುತ್ತಾನೆ.

**

ಆಗ ಪಾತ್ರೆಗಳೂ, ತಿಂಡಿಗಳೂ ಮಾಯವಾಗುತ್ತವೆ. ಇದನ್ನೆಲ್ಲ ಅವನ ಹೆಂಡತಿ ಅಡಗಿ ಕುಳಿತು ಬಾಗಿಲ ಸಂದಿಯಿಂದ ನೋಡುತ್ತಾಳೆ. ಸ್ನಾನಮಾಡಿ ದೇವರ ಪೂಜೆಗೆಂದು ಕುಳಿತ ತನ್ನ ಗಂಡನ ಗುರುತೇ ಸಿಗುವುದಿಲ್ಲ ಅವಳಿಗೆ. ಹರಕು ಅಂಗಿ ತೆಗೆದ ಕೂಡಲೇ ರಾಜಕುಮಾರನಂತೆ ಕಾಣಿಸಿದನು. ಆದ್ದರಿಂದ ಅವನ ಹೆಂಡತಿ ಕೂಡಲೇ ಆ ಅಂಗಿಯನ್ನು ಒಲೆಗೆ ಹಾಕಿ ಸುಟ್ಟುಬಿಟ್ಟು ಮೆಲ್ಲನೆ ಬಂದು ಏನೂ ಗೊತ್ತಿಲ್ಲದವಳಂತೆ ಬಂದು ಮಲಗಿಕೊಳ್ಳುತ್ತಾಳೆ. ಊಟಮಾಡಿ ಕೈತೊಳೆದುಕೊಂಡು ಬಂದ ಗಂಡನು ತನ್ನ ಅಂಗಿಯನ್ನು ಕಾಣದೆ ಹೆಂಡತಿಯನ್ನು ಎಬ್ಬಿಸಿ ತನ್ನ ಅಂಗಿಯನ್ನು ಕಂಡಿದ್ದೀಯಾ ಎಂದು ಕೇಳುತ್ತಾನೆ. ಆದರೆ ಆಕೆ ತನಗೇನೂ ಗೊತ್ತಿಲ್ಲವೆಂದು ಹೇಳುತ್ತಾಳೆ. ಅವನು ಗದರಿಸಿ ಕೇಳಿದಾಗ ತಾನು ಅದನ್ನು ಒಲೆಗೆ ಹಾಕಿ ಸುಟ್ಟುಬಿಟ್ಟೆನೆಂದು ಹೇಳುತ್ತಾಳೆ. ಆಗ ಅವನು 'ಅಯ್ಯೋ' ನನ್ನನ್ನು ಲಗಾಡಿ ತೆಗೆದೆಯೇ ಮಹರಾಯ್ತಿ. ಇನ್ನು ನಾನು ಏನು ಮಾಡಲಿ ನನ್ನ ಅಂಗಿಯನ್ನು ಏಕೆ ಸುಟ್ಟುಹಾಕಿದೆ ?' ಎಂದು ಕೇಳುತ್ತಾನೆ. ಆಕೆ "ಆ ದರಿದ್ರ ಅಂಗಿಯಿಂದಲೇ ನಮಗೆ ಈ ದರಿದ್ರತನ ಬಂದುದು ನೋಡಿ. ಆ ಅಂಗಿ ತೆಗೆದ ಮೇಲೆ ನೀವು ಜನವೇ ಬೇರೆ ಆದಿರಲ್ಲಾ. ಅದಕ್ಕಾಗಿ ಆ ಹಾಳು ಅಂಗಿ ಬೇಡವೆಂದೇ ಒಲೆಗೆ ಹಾಕಿದೆ" ಎನ್ನುತ್ತಾಳೆ. ಅವನಿಗೆ ತುಂಬಾ ಬೇಸರವಾಗುತ್ತದೆ. ಆದರೂ ಏನು ಮಾಡಲೂ ಸಾಧ್ಯವಿಲ್ಲ. ಈ ಹೆಂಗಸರ ವ್ಯವಹಾರವೇ ಇಷ್ಟು ಎಂದು ಗೊಣಗಿಕೊಳ್ಳುತ್ತಾನೆ. ರಾಜಕುಮಾರಿಗೆ ಮಾತ್ರ, 'ತನ್ನ ಗಂಡ ಸಾಮಾನ್ಯನಲ್ಲ, ಭಿಕ್ಷುಕನಲ್ಲ ಎಂದು ತಿಳಿದು ಅತೀವ ಸಂತೋಷವಾಯಿತು. ಕೂಡಲೆ ಅವಳು ತನ್ನ ಗಂಡನೊಂದಿಗೆ 'ನನ್ನ ಅಕ್ಕಂದಿರೆಲ್ಲ ಅರಮನೆಯಲ್ಲಿ ವಾಸಿಸುತ್ತಿದ್ದಾರೆ. ನನಗೂ ಒಂದು ಅರಮನೆ ಬೇಕು.' ಎಂದು ಹಠ ಹಿಡಿಯುತ್ತಾಳೆ. ಅಂತೆಯೇ ಅವಳ ಗಂಡ ರಾತ್ರೋ ರಾತ್ರಿ ಅಂದವಾದ ಒಂದು ಅರಮನೆಯನ್ನು ಸೃಷ್ಟಿಸಿ ಕೊಡುತ್ತಾನೆ.

ರಾತ್ರಿ ಅವಳ ತಾಯಿ ಮಹಾರಾಣಿ ಏನೋ ಶಬ್ದ ಕೇಳಿಸಿತೆಂದು ತನ್ನ ಕೋಣೆಯ ಕಿಟಕಿಯಿಂದ ಹೊರಗೆ ನೋಡುತ್ತಾಳೆ. ತಮ್ಮ ಕಿರಿಯ ಮಗಳ



ಗುಡಿಸಲು ಇದ್ದಲ್ಲಿ ಒಂದು ಚಂದದ ಅರಮನೆ ಕಾಣಿಸುತ್ತದೆ. ಅವಳಿಗೆ ತುಂಬಾ ಆಶ್ಚರ್ಯವಾಗುತ್ತದೆ. ಅವಳು ಹಬ್ಬಕ್ಕೆ ಬಂದಿದ್ದ ತನ್ನ ಮಗಳಂದಿರನ್ನು ಎಬ್ಬಿಸಿ ಈ ವಿಷಯವನ್ನು ತಿಳಿಸುತ್ತಾಳೆ. ಅವರೂ ಎದ್ದು ಹೊರಗೆ ಬಂದು ನೋಡಿ ಆಶ್ಚರ್ಯಪಡುತ್ತಾರೆ. ತೀರಾ ಬಡವರಾಗಿದ್ದ ಕಿರಿಯ ತಂಗಿ ಒಂದು ರಾತ್ರಿಯೊಳಗೆ ಶ್ರೀಮಂತರಾದುದು ಹೇಗೆ? ನಿನ್ನೆವರೆಗೆ ಇಲ್ಲದ ಈ ಅರಮನೆ ರಾತ್ರಿಯೊಳಗೇ ಹೇಗೆ ಸೃಷ್ಟಿಯಾಯಿತು ? ಎಂದು ಅವರು ಚಕಿತರಾದರು. ಈ ಅರಮನೆಯು ತಮ್ಮ ಅರಮನೆಗಳಿಗಿಂತಲೂ ಸೊಗಸಾಗಿರುವುದನ್ನು ಅವರು ಗಮನಿಸಿದರು.

ಆ ರಾತ್ರಿ ಹೇಗೋ ಕಳೆಯಿತು. ಮರುದಿನ ಬೆಳಗ್ಗೆ ಎದ್ದು ಎಲ್ಲರೂ ಈ ಕೊನೆ ತಂಗಿಯ ಮನೆಗೆ ಬಂದು ನೋಡುತ್ತಾರೆ. ಭವ್ಯವಾದ ಅರಮನೆ, ಸಾಕಷ್ಟು ಆಳುಕಾಳುಗಳೂ, ದಾಸ ದಾಸಿಯರೂ ಇದ್ದಾರೆ. ಏನು ವೈಭವ, ಏನು ಸಡಗರ ಅಕ್ಕಂದಿರಿಗೆಲ್ಲಾ ತಡೆಯಲಾರದ ಅಸೂಯೆ ಉಂಟಾಗುತ್ತದೆ. ಅವರೆಲ್ಲರೂ ಸೇರಿಕೊಂಡು 'ಭಾವ, ಭಾವ, ಇಷ್ಟು ಚಂದವಾದ ಅರಮನೆ ಕಟ್ಟಿಸಿದ ಬಳಿಕ ನಮಗೆಲ್ಲ ಸಿಹಿ ಊಟ ಕೊಡಿಸಬೇಡವೇ, ನೀವೊಂದು ಸಮಾರಾಧನೆ ಮಾಡಿಸಬೇಕು' ಎಂದು ಹಠ ಹಿಡಿಯುತ್ತಾರೆ. ಕಿರಿಯ ರಾಜಕುಮಾರಿಯೂ ಅಕ್ಕಂದಿರ ಮಾತಿಗೆ ಒತ್ತುಕೊಟ್ಟು ಗಂಡನನ್ನು ಒತ್ತಾಯಿಸುತ್ತಾಳೆ. ಸರಿ, ಆತನೂ ಒಪ್ಪಿಕೊಂಡ. ಅಕ್ಕಂದಿರೆಲ್ಲಾ ಸೇರಿಕೊಂಡು ಭಾವನಿಗೆ ಮಂಗಳ ಮಜ್ಜನ ಮಾಡಿಸೋಣವೆಂದು ಸಡಗರದಿಂದ ಹೊರಟರು. ಗಾಜಿನ ಬಳೆಯ ಚೂರುಗಳನ್ನು ಅರೆದು ಲೇಪ ಹಚ್ಚಿದರು. ಮೆಣಸಿನ ಕಾಯಿಗಳನ್ನು ಹಿಸುಕಿ ಅದರ 'ಗೊಂಪು' ಮಾಡಿದರು. ಬಿಸಿನೀರಿನಲ್ಲಿ ತುರಿಸುಕಾಯಿಗಳನ್ನು ಸೇರಿಸಿದರು. ತಿಕ್ಕಿ ತಿಕ್ಕಿ ಮೈ ಉಜ್ಜಿ ಮೀಯಿಸಿದರು. ಬಳಿಕ ಸಮಾರಾಧನೆ. ಊಟವಾಯಿತು. ಬಂದವರೆಲ್ಲ ಊಟ ಮಾಡಿ ಹೋದರು. ಅಕ್ಕಂದಿರು ತಮ್ಮ ಪಿತೂರಿ ತಂಗಿಗಾಗಲೀ, ತಂಗಿಯ ಗಂಡನಿಗಾಗಲೀ ತಿಳಿಯದೇ ಹೋದುದಕ್ಕೆ ಸಂತೋಷಪಡುತ್ತಾ ಹೋದರು.

ಮರು ದಿನ ಬೆಳಗ್ಗೆ ಏಳುವಾಗಲೇ ಕಿರಿಯ ಅಳಿಯನ ಮೈಯೆಲ್ಲ ಬಾವು ಎದ್ದಿತ್ತು. ಮೈಯೆಲ್ಲಾ ತುರಿಕೆಯನ್ನು ತಾಳಲಾರದೆ ತುರಿಸಿ ತುರಿಸಿ ಹುಣ್ಣುಗಳಾಗಿದ್ದವು. 'ಇದೆಲ್ಲಾ ಏನು ?' ಎಂದು ಕಿರಿಯ ರಾಜಕುಮಾರಿ ಕೇಳಿದ್ದಕ್ಕೆ 'ನಿನ್ನ ಅಕ್ಕಂದಿರ ಉಪಚಾರದ ಪ್ರಭಾವ' ಎಂದು ಹೇಳಿದನು ಅವಳ ಗಂಡ. ಅವಳಿಗೆ ಏನೊಂದು ತಿಳಿಯಲಿಲ್ಲ. ಕೊನೆಗೆ ವಿಷಯ ತಿಳಿದು ಅಕ್ಕಂದಿರ ಬಗ್ಗೆ ಅವಳಿಗೆ ತಡೆಯಲಾರದ ಕೋಪ ಬಂತು. ಕೂಡಲೇ ವೈದ್ಯರನ್ನು ಕರೆದುತಂದಳು.

ಯಾವ ವೈದ್ಯರಿಗೂ ಬಗ್ಗಲಿಲ್ಲ ಈ ಬಾವು. ಗಾಜಿನ ಚೂರುಗಳು ಹುಣ್ಣಿನಲ್ಲಿ ಸೇರಿಕೊಂಡು ಕೀವು ಉಂಟಾಯಿತು. ದಿನದಿಂದ ದಿನಕ್ಕೆ ಬಾವು ಹೆಚ್ಚಾಗಿ ಮೈಯೆಲ್ಲೆಲ್ಲಾ ಕೀವು ವಿಪರೀತವಾಗಿ ಆತನಿಗೆ ಯಾತನೆ ಅಸಹನೀಯವಾಯಿತು. ಏನು ಮಾಡುವುದೆಂದು ತೋರದೆ ರಾಜಕುಮಾರಿ ಚಡಪಡಿಸಿದಳು. ಊರೂರಿಂದ ವೈದ್ಯರನ್ನು ಕರೆದು ತೋರಿಸಿದಳು. ಏನು ಮಾಡಿದರೂ ಪ್ರಯೋಜನವಿಲ್ಲ. ತಾಳ್ಮೆಯನ್ನು ಕಳೆದುಕೊಂಡ ಕಿರಿಯ ಅಳಿಯನು 'ನಿನ್ನ ತವರಿನವರು ಮಾಡಿದ ಉಪಕಾರ ಸಾಕು. ನಾನಿನ್ನು ನನ್ನ ರಾಜ್ಯಕ್ಕೆ ಹೊಗುತ್ತೇನೆ' ಎಂದು ಹೇಳಿ ಹೊರಟೇ ಬಿಟ್ಟನು. ಅವನು ಹೋದ ಕೂಡಲೇ ಅವನ ಅರಮನೆ, ಸಂಪತ್ತು, ವೈಭವವೆಲ್ಲ ಮಾಯವಾಯಿತು. ಮೊದಲಿದ್ದ ಹರಕು ಗುಡಿಸಲೊಂದೇ ಅಲ್ಲಿತ್ತು. ಒಬ್ಬಂಟಿಗಳಾದ ಕಿರಿಯ ರಾಜಕುಮಾರಿಗೆ ಏನು ಮಾಡುವುದೆಂದು ದಿಕ್ಕೇ ತೋಚಲಿಲ್ಲ. ಕೆಲ ದಿನ ಅಂತೂ ಇಂತೂ ದಿನಗಳನ್ನು ನೂಕಿದಳು. ಕೊನೆಗೆ ಅವಳಿಗೆ ಆ ಮನೆಯಲ್ಲಿ ಇರಲು ಸಾಧ್ಯವೇ ಆಗಲಿಲ್ಲ. ಗಂಡನ ರಾಜ್ಯ ಯಾವುದು ಏನೂ ಅವಳಿಗೆ ತಿಳಿಯದು. ಆದರೂ ಸಹಿಸಲಾಗದೆ ಅವಳು ಮನೆಯನ್ನು ಬಿಟ್ಟು ಗಂಡನನ್ನರಸುತ್ತಾ ಹೊರಟಳು.

ನಡೆಯುತ್ತಾ ನಡೆಯುತ್ತಾ ಒಂದು ದಟ್ಟವಾದ ಕಾಡಿಗೆ ಬರುವಾಗ ರಾತ್ರಿಯಾಯ್ತು. ನಡೆನಡೆದು ಕಾಲುಗಳು ದಣಿದಿದ್ದವು. ಆದ್ದರಿಂದ ಒಂದು ವಿಶಾಲವಾದ ಆಲದ ಮರವನ್ನು ನೋಡಿ, ಅದರ ಅಡಿಯಲ್ಲಿ ಈ



ರಾಜಕುಮಾರಿ ಮಲಗಿದಳು. ಮರದ ಮೇಲೆ ಗಂಡಭೇರುಂಡ ಪಕ್ಷಿ ದಂಪತಿಗಳು ವಾಸಿಸುತ್ತಿದ್ದವು. ಗೂಡಿಗೆ ಆಗತಾನೆ ಬಂದ ಗಂಡುಪಕ್ಷಿಯೊಡನೆ "ಏನು ವಿಶೇಷ" ಎಂದು ಕೇಳಿತು ಹೆಣ್ಣುಪಕ್ಷಿ. ಅದಕ್ಕೆ ಗಂಡು "ನೆರೆಯ ಊರಿನ ರಾಜ ಕೆಲಸಮಯ ಅಜ್ಞಾತವಾಗಿದ್ದು ಈಗ ತಿರುಗಿ ಬಂದಿದ್ದಾನೆ, ಈಗವನಿಗೆ ಕಾಯಿಲೆ ಬಂದಿದೆ. ಯಾವ್ಯಾವ ರಾಜವೈದ್ಯರಿಂದಲೂ ಕಾಯಿಲೆ ಗುಣಮಾಡಲಾಗಲಿಲ್ಲ" ಎಂದಿತು. ಅದಕ್ಕೆ ಹೆಣ್ಣು "ಪಾಪ, ಅವರಿಗೆ ಗುಣವಾಗುತ್ತದೆಯೋ ಇಲ್ಲವೋ" ಎಂದಳು. "ಗಂಡು ಅದಕ್ಕೆ ಸರಿಯಾದ ಔಷಧಿ ಮಾಡಿದರೆ ಖಂಡಿತಾ ಗುಣವಾದೀತು. ಆದರೆ ಔಷಧಿ ಏನೆಂದು ಯಾರಿಗೂ ಗೊತ್ತಿಲ್ಲ. ನೋಡು ನಮ್ಮ ಈ ಮರದ ಕೆಳಗೆ ಇರುವ ಆ ಮೂಲಿಕೆಯ ರಸದಲ್ಲಿ ನಮ್ಮ ಹಿಕ್ಕೆಯನ್ನು ಕಲಸಿ ಪ್ರತಿದಿನವೂ ಲೇಪ ಹಚ್ಚುತ್ತಿದ್ದರೆ ಗುಣವಾದೀತು" ಎಂದಿತು. ಇದನ್ನು ಕೇಳಿದ ರಾಜಕುಮಾರಿ ಮರುದಿನ ಪ್ರಾತಃಕಾಲವೇ ಎದ್ದು ಆ ಮೂಲಿಕೆಯನ್ನೂ ಒಂದಷ್ಟು ಹಿಕ್ಕೆಯನ್ನೂ ತೆಗೆದುಕೊಂಡು ಶೀಘ್ರವಾಗಿ ಅಲ್ಲಿಂದ ಹೊರಟಳು.

ಬಹಳ ಕಾಲ ಪ್ರಯಾಣ ಮಾಡಿ ಅವರಿವರನ್ನು ವಿಚಾರಿಸುತ್ತಾ ಕೊನೆಗೂ ಅರಮನೆಯನ್ನು ಸೇರಿದಳು. ಆದರೆ ಅಲ್ಲಿ ಸುಲಭವಾಗಿ ಅವಳಿಗೆ ಪ್ರವೇಶ ಸಿಕ್ಕಲಿಲ್ಲ. ತಾನೊಬ್ಬ ಊರವೈದ್ಯಳೆಂದು ಹೇಳಿದಳು. ಆದರೆ ಹೀಗೆ ಹೇಳಿಕೊಂಡು ಅನೇಕ ಮಂದಿ ಅನೇಕ ದೇಶಗಳಿಂದ ಈ ಅರಮನೆಗೆ ಬಂದು ವೈದ್ಯ ನಡೆಸಿ ರಾಜನ ಬಾವು ಉಲ್ಬಣಾವಸ್ಥೆಗೆ ತಲುಪಿದುದರಿಂದ ಅವಳಿಗೂ ಪ್ರವೇಶ ಸಿಗಲಿಲ್ಲ. ತನ್ನ ಪತಿಯನ್ನು ಕಾಣುವ ಅತೀವ ಬಯಕೆಯಿಂದ ಅವಳು ತಾನು ಖಂಡಿತಾ ಅರಸನನ್ನು ಗುಣಪಡಿಸುವುದಾಗಿಯೂ ಇದು ತನ್ನಿಂದ ಸಾಧ್ಯವಿಲ್ಲದಿದ್ದರೆ ತನ್ನನ್ನು ಕೊಲ್ಲಿಸಬಹುದೆಂದೂ ಹೇಳಿದಳು. ಹರಕು ಬಟ್ಟೆಯನ್ನುಟ್ಟ ಅವಳ ಮಾತಿನ ಮೇಲೆ ನಂಬಿಕೆ ಯಾರಿಗೂ ಬರಲ್ಲ. ಆದ್ರೂ ಅವಳ ಶರ್ತದ ಮೇಲೆ ಅವಳಿಗೆ ಪ್ರವೇಶ ದೊರೆಯಿತು. ಅರಸನಿಗೆ ಇವಳ ಗುರುತು ಸಿಕ್ಕಿತು. "ಏನು ನಾನಿನ್ನೂ ಸಾಯಲಿಲ್ಲಾಂತ ನಿನ್ನ ಅಕ್ಕಂದಿರು ನಿನ್ನೊಡನೆ ವಿಷವನ್ನು ಕೊಟ್ಟು ಕಳುಹಿಸಿದ್ದಾರೇನೋ" ಎಂದನು ವ್ಯಂಗ್ಯವಾಗಿ. ಆದರೆ ಆಕೆ ತಾನು ನಿಜವಾಗಿಯೂ ಔಷಧಿಯನ್ನು ತಂದಿರು

ವುದಾಗಿ ಹೇಳಿ ಅವನನ್ನು ನಂಬಿಸಿದಳು. ಮೇಲಿಂದ ಮೇಲೆ ಲೇಪವನ್ನು ಹಚ್ಚುತ್ತಿದ್ದಂತೆಯೇ ಬಾವು ಕಡಿಮೆಯಾಗುತ್ತಾ ಬಂತು. ಒಂದೆರಡು ದಿನಗಳಲ್ಲಿಯೇ ಹುಣ್ಣುಗಳೆಲ್ಲಾ ಒಣಗಿದವು. ಕೀವು ನಿಂತುಹೋಯಿತು. ಇದನ್ನು ಕಂಡು ಎಲ್ಲರಿಗೂ ಆಶ್ಚರ್ಯವಾಯಿತು. ರಾಜನು ತನ್ನ ಮಂತ್ರಿಗೂ ಪ್ರಜೆಗಳಿಗೂ ಅವಳ ಪರಿಚಯುವನ್ನು ಮಾಡಿಕೊಟ್ಟನು, ಅವಳ ಅಕ್ಕಂದಿರ ಕುತಂತ್ರವನ್ನು ಹೇಳಿದನು. ಇದನ್ನು ಕೇಳಿದ ಪ್ರಜೆಗಳೆಲ್ಲ ಸಿಟ್ಟಿಗೆದ್ದು ಅವರೆಲ್ಲರ ಮೇಲೆ ಪ್ರತೀಕಾರವನ್ನು ಕೈಗೊಳ್ಳಬೇಕೆಂದು ಕೇಳಿಕೊಂಡರು. ಅರಸನ ಅಪ್ಪಣೆ ಪಡೆದು ಮಂತ್ರಿಯೊಂದಿಗೆ ಸೈನ್ಯವನ್ನು ತೆಗೆದುಕೊಂಡುಹೋಗಿ ಆರೂ ಮಂದಿ ಅಕ್ಕಂದಿರ ರಾಜ್ಯಗಳಿಗೆ ದಾಳಿ ಇಟ್ಟರು. ಅಷ್ಟೇ ಅಲ್ಲ, ಅವರೆಲ್ಲರನ್ನೂ ಗೆದ್ದು ಅಪಾರ ಸಂಪತ್ತಿನೊಡನೆ ಆ ರಾಜರನ್ನೂ ಸೆರೆಹಿಡಿದು ತಂದರು. ರಾಜಕುಮಾರಿ ಸೆರೆಯಾಳಾಗಿ ಬಂದ ತನ್ನ ಅಕ್ಕಂದಿರನ್ನು ಅವರ ಗಂಡಂದಿರನ್ನೂ ಕಂಡಳು. ಅವಳಿಗೆ ಅವರ ಮೇಲೆ ಕನಿಕರ ಉಂಟಾಯಿತು ಅವರನ್ನು ಮನ್ನಿಸುವಂತೆ ತನ್ನ ಗಂಡನೊಡನೆ ಕೇಳಿಕೊಂಡಳು. ಅವನು ಅವರನ್ನೆಲ್ಲ ಕ್ಷಮಿಸಿ ಅವರೆಲ್ಲರ ರಾಜ್ಯವನ್ನು ಅವರಿಗೇ ಕೊಟ್ಟು ತನ್ನ ಸಾಮಂತರಾಗಿ ಅವರನ್ನು ಇರಿಸಿಕೊಂಡನು. ಆ ಬಳಿಕ ತನ್ನ ಮಡದಿಯೊಂದಿಗೆ ಯಾವ ತೊಂದರೆಯೂ ಇಲ್ಲದೆ ವೈಭವದಿಂದ ರಾಜ್ಯವಾಳಿಕೊಂಡು ಸುಖವಾಗಿದ್ದನು.

---

# ಬುಡ್ಡನ ಕಥೆ

ಹೀssಂಗೆ ಒಂದು ಊರಾಗ ಇಬ್ರು ತಾಯಿ ಮಗ ಇದ್ದರಂತ. ಮಗ ಭಾಳ ಬುಡ್ಡ ಇದ್ದ, ಅವ್ನ ಕೈಕಾಲ ಈಟೀಟೇ ಇದ್ದುವು. ಕಿಂವಿ ಮರ ದಟ್ಟು ಅಗಲ ಇದ್ದು, ಅದರಾಗ ಕೋಳಿ ಕೂಡೊಟ್ಟು ಜಾಗಾ ಇತ್ತು. ಅವ್ನ ಗಡ್ಡ ನೆಲಕ ಹತ್ತಿದ್ದು. ಮೂಗ ಬಕ್ಕಳ ಅಡ್ಡಾಲಕ ಇತ್ತು.

ಇವ್ರು ಬಕ್ಕಳ ಬಡುವ್ರು ಇದ್ರು. ಬುಡ್ಡ ರಾಜನ ಮಗಳೀಗಿ ಮದ್ವಿ ಮಾಡ್ಕೋಬೇಕಂತ ಇಚಾರ ಮಾಡ್ದ. ಹಂಗೇ ಹೋಗಿ ಅವ್ರ ಅವ್ವಿಗ್ನೂ ಹೇಳ್ದ. ಅವರ ಅವ್ವ-ಮಗsss ರಾಜನ ಮಗಳೀಗಿ ಮದ್ವಿ ಆಗೂದು ನಮ್ಮಂಥ ಬಡೂರ್ಗಿ ಹ್ಯಾಂಗ ಸಾಧ್ಯ. ಅಂತವರ್ಗಿ ಮಾಡ್ಕೋಬೇಕಾದ್ರ ದುಡ್ಡು' ಬೇಕು, ಅಂತ ಸಮಜಾಸಿ ಹೇಳಿದ್ಳು.

ಬುಡ್ಡಗ ಕುದೀಬಿತ್ರಿ. ಯಾರಗರೆ ಕೇಳ್ಬೇಕಂದ್ರು ಇವ್ನ ಸರಿ ಯಾರೂ ಬರ್ತಿರಲಿಲ್ಲ. ಇವ್ನ ಗೆಳಿತನ ಅಂದ್ರು ಕುರಿ, ಕೋಳಿ ಇಂಥಾದುರ ಸರಿ. ಒಂದಿನ ಕೋಳಿ ಜೋಡಿ ತಿಪ್ಯಾಗ ಇದ್ದಾಗ, ಕೋಳಿ ಕೆದರಿ ಹುಳಾ ತಿಂಬಾಗ ಒಂದು ದುಡ್ಡು ಸಿಗ್ತು. ಬುಡ್ಡ ನೋಡಿ ಮನಸ್ನಾಗ ಖುಸಿಯಾದ. ಇನ್ನ ಮಾತ್ರ ರಾಜನ ಮಗ್ಳು ಸಿಕ್ಕೇ ಬಿಟ್ಳು ಅಂತ ತಿಳ್ಕೊಂಡ. ಮನೀಗಿ ಹೋಗಿ ಅವರವ್ವನ ಮುಂದ ಅವ್ವ, ಅವ್ವ ನನಗೊಂದು ದುಡ್ಡು ಸಿಕ್ಯಾದ ರಾಜನ ಮಗ್ಳೀಗಿ ಮದ್ವಿ ಮಾಡ್ಕೋತಿನಿ ಅಂದ. ಬುಡ್ಡಗ ಅವ್ರವ್ವ ಎಟ್ಟ ಸಮಜಾಸಿ ಹೇಳಿದ್ರು ಹಟಹಿಡ್ದ. ಹಂಗೆ

ಹೊಂಟಬಿಟ್ಟ. ಅಂವ ಹೊರ್ಗ ಬರಾಯಾಳಿ ಬಾಕ್ಲಾಗ ಕೋಳಿ ಕುಂತಿತ್ತು. ಬುಡ್ಡಪ್ಪ, ಬುಡ್ಡಪ್ಪ ಎಲ್ಲಿಗಿ ಹೋಗ್ತೀದಿ ನಾನೂ ಬರ್ತೀನಿ, ಅಂತು. ಏ ನಾ ರಾಜನ ಮಗ್ಳೀಗಿ ಮದ್ವಿ ಮಾಡ್ಕೋಲಾಕ ಹೋಗ್ತೀನಿ. ನಿನಗ್ಯಾರು ಬುಡ್ತಾರಲ್ಲೆ, ಅಂತ ಬುಡ್ಡ ಹೇಳ್ದ. ಆಗ ಕೋಳಿ, ನಾ ನಿನ್ನ ಕಿಂವ್ಯಾಗ ಕೂಡ್ತೀನಿ, ನನಗೂ ಕರ್ಕೊಂಡು ನಡಿ ಅಂಬಾಣಾ, ಯಾಕಾಗಲ್ದು ಕೂಡಂತ ಕೋಳೀಗಿ ಕಿಂವ್ಯಾಗ ಕುಂಡ್ರಿಸ್ಕೊಂಡು ನಡದ. ನಡು ಅಡ್ಯಾಗ ಹೋಗಾ ಮುಂದೆ ಒಂದು ಸಿಂಹ್ಯ ಗಂಟ್ಬಿತ್ತು. ಬುಡ್ಡಪ್ಪ, ಬುಡ್ಡಪ್ಪ ಎಲ್ಲಿಗಿ ನಡದೀದಿ ನಾನೂ ಬರ್ತೀನಿ ಕರ್ಕೊಂಡು ನಡೀ ಅಂತ, ಅಂತು. ಏ ನಾ ರಾಜನ ಮಗ್ಳೀಗಿ ಮದ್ವಿ ಮಾಡ್ಕೋಲಾಕ ನಡ್ದೀನಿ, ಅಲ್ಲಿ ನಿನಗ ಹ್ಯಾಂಗ ಬುಡ್ತಾರ ಬ್ಯಾಡಂದ. ಅವಾಗ ಸಿಂಹ್ಯ ಏನಂತು ನಾ ನಿನ್ನ ಗಡ್ಡದಾಗ ಕುಂತು ಬರ್ತೀನಿ. ಏನರೆ ಪರಸಂಗ ಬಂದ್ರ ಸಾಯಾ ಮಾಡ್ತಿನಿ ಅಂಬಾಣಾ, ಯಾಕಾಗಲ್ದು ಕೂಡು ಅಂದು ಸಿಂಹಕ್ಕ ಗಡ್ಡದಾಗ ಕೂಡ್ಸಗೊಂಡು ಮುಂದ್ಕ ನಡ್ದ.

ಮುಂದ್ಕ ಮುಂದ್ಕ ಹೋಗಾಣಾ ಒಂದ ದೊಡ್ಡ ನದಿ ಸಿಗ್ತು. ಅದು ಹ್ಯಾಂಗ ದಾಟ್ಬೇಕು ಅಂತ, ಬುಡ್ಡಾ ಇಚಾರ ಮಾಡ್ಕೋತ ಕುಂತಿದ್ದ. ಅಟ್ಟರಾಗ ಅಕಾಡ್ದು ಒಂದು ರಾಕ್ಷಸ ಬಂತು. ಬುಡ್ಡಪ್ಪ, ಬುಡ್ಡಪ್ಪ ನಿಂಗ ನುಂಗತೀನಿ ಅಂತು. ಅವಾಗ ಬುಡ್ಡಪ್ಪ, ಏ ಬ್ಯಾಡಪ್ಪಾ ನಾ ರಾಜನ ಮಗಳೀಗಿ ಮದ್ವಿ ಮಾಡ್ಕೋಲಾಕ ನಡದೀನಿ, ಬರಾಮುಂದ ಬೇಕಾರೆ ತಿಂಬಾಕೆ ಅಂತ ಅಂದ್ನು. ಈ ಮಾತಕೇಳಿದ ಕೂಡ್ಲೆ ರಾಕ್ಷಸ ಗಾಬ್ರಿ ಆಯ್ತು. ತನ್ಗೂ ಒಂದು ಛಲೋ ಯಾಳೀ ಸಿಗ್ತು ಅಂದು, ಬುಡ್ಡಪ್ಪನ ನೆರವೀಗಿ ನಿಂತು. ಯಾಕಂದ್ರ ರಾಕ್ಷಸಕ ಮತ್ತ ರಾಜಗ ಇರೋದ್ಧ ಇತ್ತು. ರಾಕ್ಷಸ, ರಾಕ್ಷಸ ಮತ್ತ ನಾ ಈ ನದಿ ಹ್ಯಾಂಗ ದಾಟ್ಲೀ ಇಂತ ಬುಡ್ಡಪ್ಪ ಕೇಳ್ದ. ಆವಾಗ ರಾಕ್ಷಸ ಬುಡ್ಡಪ್ಪಗ ಒಂದು ಮಂತ್ರ ಹೇಳ್ತು. ಈ ಮಂತ್ರ ಅಂದ್ರ ನದಿ ನೀರೆಲ್ಲ ನಿನ್ನ ಮೂಗಿನಾಗ ಬಂದು ಕೂಡತಾವ, ನೀ ಯಾವಾಗ ಮಂತ್ರ ತಿರಗಿ ಹಿಂಬಕ್ಕೆ ಅಂತಿ ಆವಾಗ ನೀರು ನಿನ್ನ ಮೂಗಿನಾನುವು ಹೊರ್ಗ ಬೀಳ್ತಾವ, ಅಂತ ಹೇಳಿ ಮಂತ್ರ ಹೇಳಿಕೊಟ್ತು.



ರಾಕ್ಷಸಪ್ಪನ ಬಲ್ಲಿ ಬುಡ್ಡಪ್ಪ ಮಂತ್ರ ಕಲ್ತ, ನದಿದಂಡಿಮ್ಯಾಲ ನಿಂತು ಮಂತ್ರ ಅಂಬಾದೇ ತಡ, ನದಿ ನೀರೆಲ್ಲ ಬಂದು ಬುಡ್ಡಪ್ಪನ ಮೂಗಿನಾಗ ಸೇರ್ದುವು, ಈಗ ಹಾದಿ ಖುಲ್ಲಾ ಆಯ್ತು. ಮುಂದ ನಡ್ದ. ರಾಜ ದೇವ್ಡೀಗಿ ಹೋಗಿ ಮುಟ್ಟಲಿಲ್ಲ. ಕಾಯ್ಲತ್ಕ ನಿಂತವರು ಇವನ ರೂಪ ನೋಡಿ ಯಾರೋ ಸಾಧು ಇರ್ಬೇಕೆಂದು ಯಾಕಡಿ ನಡ್ದೀರಿ ಅಂತ ಕೇಳಿದ್ರು. ಅವಾಗ ಬುಡ್ಡಪ್ಪ ಹೇಳ್ದಾ, ಇಲ್ಲಾ ನಾ ಹಿಂಗಿಂದ್ಬೀಂಗ ರಾಜನ ಮಗಳೀಗಿ ನೆಂಟಸ್ಥನ ಮಾಡ್ಬೇಕಾಗ್ಯಾದ ಅಂದಾಗ ಅವ್ರು ಬುಡ್ಡಪ್ಪಗ ರಾಜನ ಹತ್ರ ಒಯ್ದ್ರು. ರಾಜ ಯಾರೋ ದೊಡ್ಡ ಸಾಧು ಇರ್ಬೇಕಂದು ತನ್ನ ಆಸನದ ಮ್ಯಾಗ ಒಯ್ದು ಬುಡ್ಡಪ್ಪಗ ಕೂಡ್ಸಿ, ತಾ ಮತ್ತೊಂದು ಆಸನದ ಮ್ಯಾಲ ಕುಂತು, ಏನ್ರೀ ತಾವು ಯಾವ ಕಡಿ ಬಂದಿದ್ದು ? ಅಂತ ಕೇಳ್ದ. ಆವಾಗ ಬುಡ್ಡಪ್ಪ, ಏನಿಲ್ಲ ನಿನ್ನ ಮಗಳ ಲಗ್ನದ ವಿಷಯು, ಅಂದ. ಹಾಗಾದರ "ವರ" ಯಾರು ? ಯಾ ರಾಜ್ಯದ ರಾಜಕುಮಾರ, ಅವರ ಹೆಸ್ರೇನು ? ವಿದ್ಯಾಭ್ಯಾಸ ಎಟ್ಟು, ರಾಜ ಕೇಳಾಕ ಸುರು ಮಾಡ್ದ. ಇವಾಗ ಬುಡ್ಡಪ್ಪ ಹೇಳ್ದ. ಏನಿಲ್ಲ ನಾನೇ ನಿನ್ನ ಮಗಳೀಗಿ ಮಾಡ್ಕೊಂಬಾವಾ. ಬೇಕಾದ್ರ ಒಂದ ದುಡ್ಡು ನನ್ನ ಬಲ್ಲಿ ಅದ. ತಗೋ, ನಿನ್ನ ಮಗಳೀಗಿ ನನ್ನಗೂಡ ಲಗ್ನ ಮಾಡು ಅಂದಾಗ, ರಾಜಗ ಭಾರೀ ಅಂದ್ರ ಭಾರಿ ಸಿಟ್ಟು ಬಂತು. ಮೈಯೆಲ್ಲ ಒಂದ್ಸವ್ನ ಉರ್ಲಿಕ್ಹತ್ತು. ಕಣ್ಣು ಕೆಂಪ್ಗ ಆದಾವು. ಸಿಟ್ಟಿಗೆ ಬಂದು ಈ ಮಗನೀಗಿ ತೇಳಿನ್ (ಚೇಳಿನ) ಖೋಲ್ಯಾಗ ಒಯ್ದು ಹಾಕಿ ತಟ್ಟಿ ಮುಚ್ರಿ, ಅಂತ ಹುಕುಮು ಕೊಟ್ಬುಬಿಟ್ಟ. ಸೇವಕರು ಬಂದು ಬುಡ್ಡಗ ಹೊತ್ಕೊಂಡು ಒಯ್ದು ತೇಳಿನ ಖೋಲ್ಯಾಗ ಹಾಕಿ, ತಟ್ಟಿ ಮುಚ್ಚಿ ಕೀಲಿ ಹಾಕ್ದ್ರು.

ಇವಾಗ ಬುಡ್ಡಗ ಕೋಳಿ ನೆನಪಾತು. ಕಿಂವ್ಯಾಗ ಇದ್ದ ಕೋಳಿ ತಗದ ಬಿಟ್ಟಬಿಟ್ಟ. ಬಂದು ಒಂದ ಆರದ ತಾಸಿನಾಗ ಎಲ್ಲ ತೇಳಿಗೆಲ್ಲ ಕೋಳಿ ಆಯ್ಕೊಂಡು ತಿಂದು ಹವಾರ ಮಾಡ್ತು. ಬುಡ್ಡ ಅಗ್ದಿ ಖುಸಿದಾಗ ನಾನೇ ರಾಜನ ಮಗಳ ಗಂಡ, ಈ ಊರ ಅಳ್ಯಾ ಅಂತ, ಅನ್ಕೋತ ಕುಂತಬಿಟ್ಟ. ಯ್ಯಾಳ್ಯಾ ಆದ್ಮೇಲ ಇನ್ನೇನು ಬುಡ್ಡ ಸತ್ತಿರಬೇಕು ನೋಡ್ಕೊಂಡು ಬರ್ರಿ

ಅಂದು, ರಾಜಾ ಮತ್ತ ಸೇವಕರಿಗಿ ಹೇಳ್ದ. ಸೇವಕರು ಬಂದು ನೋಡ ತಾರ, ಬುಡ್ಡ ಬಡಬಡಸ್ಕೋತ ಕುಂತಾನ. ಮತ್ತ ಹಿಡಕೊಂಡು ಒಯ್ದು ರಾಜನ ಮುಂದೆ ನಿಂದ್ರಿಸಿದ್ರು. ರಾಜಾ ಕಣ್ಣ ಕೆಂಪಗ ಮಾಡಿ 'ಯಾಕ ? ಏನಾಯ್ತು ?' ಅಂತ ಕೇಳ್ದ. ತೇಳ ಎಲ್ಲಾ ಸತ್ತ ಹೋಗ್ಯಾವ, ಇವ ಖುಸಿ ದಾಗ ಹಾಡ್ಕೋತ ಕುಂತಿದ್ದ ಅಂತ ಹೇಳ್ದಾಗ, ರಾಜಗ ಸಿಟ್ಟು ಬಂದು, 'ಈ ಮಗ ಸತ್ತ ಹೋಗ್ಲಿ, ಆನಿ ದೊಡ್ಯಾಗ ಹಾಕ್ರಿ ಅಂತ ಅಂದ. ಸೇವಕ್ರು ಮತ್ತ ಹಿಡ್ಕೊಂಡು ಒಯ್ದು ಆನಿ ದೊಡ್ಡ್ಯಾಗ ಹಾಕಿ ಹೊರ ಬಂದ್ರು. ಬುಡ್ಡ್ಗ ಸಿಂಹ್ಯದ ನೆನಪಾಯ್ತು. ಗಡ್ಡದಾನ ಸಿಂಹ್ಯಕ್ಕ ಹೊರಗಬಿಟ್ಟ. ಅದು ಎಲ್ಲ ಆನಿಗಿ ಕೊಲ್ಲಿ, ಒಂದು ಮರಿ ಉಳಿಸಿತ್ತು. ಮತ್ತ ಸಿಂಹ್ಯಕ್ಕ ತನ್ನ ಗಡ್ಡದಾಗ ಇಟಗೊಂಡು, ಆನಿಮರಿ ಮ್ಯಾಲ ಕುಂತು, ಮತ್ತ ನಾನೇ ರಾಜನ ಅಳ್ಯಾ, ರಾಜನ ಮಗಳ ಗಂಡ ಅಂತ, ಅನ್ಕೋತ ಕುಂತ. ಮತ್ತ ಸೇವಕರು ಬುಡ್ಡ ಸತ್ತಿರ್ಬೇಕ್ರಿ ಅಂತ ತಿಳಿದುರಿ. ಸೇವಕರು ಬಂದರಿ ನೋಡ್ತಾರ, ಮತ್ತ ಹಾಡ್ಕೋತಾನೆ ಹನ. ಹಿಡ್ಕೊಂಡು ಒಯ್ದು ಮತ್ತ ರಾಜನ ಮುಂದ ನಿಂದ್ರಸ್ದ್ರು. 'ಏನಾಯ್ತು ?' ಅಂತ ರಾಜ ಭಾರಿ ಸಿಟ್ಟಿಗೆ ಬಂದು ಕೇಳ್ದ, ಆನಿ ಎಲ್ಲಾ ಸತ್ತಾವ, ಇಂವ ಆರಾಮದಾಗ ಹಾಡ್ಕೋತ ಇದ್ದ. ಅಂದಾಗ ರಾಜಾಗ ಭಯಂಕರ ಸಿಟ್ಟು ಬಂದು, ಈ ಮಗನೀಗಿ 'ಕುಳ ಬಾನದಾಗ ಹಾಕಿ ಉರಿಹಚ್ಚಿ ಸುಟ್ಯಬಿಡ್ರಿ' ಅಂತ ಹೇಳಿಬಿಟ್ಟ. ಅದೇ ಪರಕಾರ ಸೇವಕರು ಬುಡ್ಡಗ ಹಿಡಕೊಂಡು ತಂದು ಕುಳಬಾನದಾಗ ಹಾಕಿ ಮ್ಯಾಲ ಘಾಸ್ಲೇಟ ಎಣ್ಣಿ ಹಾಕಿ ಉರಿಹಚ್ಚಿದ್ರು. ಬುಡ್ಡಗ ಮಂತ್ರದ ನೆನಪ ಬಂದು ಮಂತ್ರ ತಿರ್ಗಿ ಅಂದ. ನೀರೆಲ್ಲಾ ಮುಗ್ಯಾಂದು ಹೊರ್ಗ ಬಂದು ಬೆಂಕಿ ಎಲ್ಲಾ ಆರಿ, ರಾಜದೇವಡಿ ಎಲ್ಲಾ ನೀರಾಗ ಮುಣಗಾ ಪರಸಂಗ ಬಂತು. ರಾಜ ಮಾಳ್ಗೀ ಮ್ಯಾಲಿಂದೆ ಕೈಮುಗ್ದು 'ನನ್ನ ಮಗಳೀಗಿ ಕುಡತೀ ಸಿಪ್ಪೋ ತಪ್ಪಾಯ್ತು, ನೀರ ಹಿಂದ್ಕತಕೋ' ಅಂತ ಅಂದಾಗ, ಬುಡ್ಡ ಮತ್ತ ಮಂತ್ರ ಅಂದು ನೀರೆಲ್ಲ ಮಾಗಿನ್ಯಾಗ ಸೇರ್ಸಗೊಂಡ.

ರಾಜಾ ಊರಿಗಿ ಊಟಾಹಾಕಿ, ಬೀದಿಗಿ ಛಳಿ ಹೊಡ್ದು ಮನಿಮುಂದ ಹಂದ್ರಹಾಕಿ ಬುಡ್ಡನ ಮದ್ವೀಗಿ ತಯ್ಯಾರ ಮಾಡ್ದ, ಬುಡ್ಡ ನಮ್ಮವ್ವಗ



ಕರಿಬೇಕಂತಾ ಅಂದಾಗ, ಬಾಜಿ ಬಜೆಂತ್ರಿ ಹಚ್ಚಿ ಅವರವ್ವಗ ಕರ್ಕೊಂಡು ಬುಡ್ಡನ ಮದ್ವಿ ತನ್ನ ಮಗಳಗೂಡ ಮಾಡ್ದ. ಬುಡ್ಡಗ ರಾಜಾ ತನ್ನ ಅರ್ಧ ರಾಜ್ಕಿಕೊಟ್ಟ, ಹೀಂಗ ಬುಡ್ಡನ ಸಂಸಾರ ಸರಿಯಾಗಿ ನಡೀತು, ನಾ ಹೇಳ್ದೆ, ನೀ ಕೇಳ್ದೆ.

---

# ಅಪ್ಪಗ ತಕ್ಕ ಮಗ

ಒಂದು ಊರಾಗ ಇಬ್ರು ಅಪ್ಪ ಮಕ್ಳು ಇದ್ರು. ಮಗ ಅಪ್ಪ ಹೇಳಿದ್ದು ಇಸ್ವಾಸಲಿಂದ ಕೇಳ್ತಿದ್ದ. ಸಾಯಂಕಾಲ್ಕ ಮಗನೀಗಿ ಮೂರ ಮಾತ ಹೇಳಿ ಸತ್ತ ಹೋದ. ಏನಂದ್ರು-ಪೈಲೆದ್ದು ದೊಡ್ಡವರ ಮನಿ ಬಾಗ್ಲಾಕಾಯಿ, ಎರಡನೇದಾಗಿ-ಕೆಟ್ಟದ ನೋಡಿ ಮುಚ್ಚು, ಮೂರನೇದು ಸಭಾನೆರದಲ್ಲಿ ಹೋಗು.

ಅಪ್ಪ ಸತ್ತಮ್ಯಾಗ ಮಗ ಈ ಮಾತ ನಡ್ಸಕೊಡಬೇಕಂತ ಆ ಊರ ರಾಜರ ಮನಿ ಬಾಗಿಲಕ ಹೋಗಿ ಕುಂತ. ಯಾಕಂದ್ರು ಅವರಪ್ಪ ದೊಡ್ಡವರ ಮನಿ ಬಾಗ್ಲಾ ಕಾಯಂತ ಹೇಳಿದ್ದ. ದಿನಾ ಹೋಗೋದು, ಹಗಲಾ ರಾತ್ರಿ ಅನಲಾರ್ದೆ ಬಾಗಿಲಿಗಿ ಕುಂತು ಕಾಯ್ತಿದ್ದ. ಊಟಕ್ಕಷ್ಟೆ ಮನೀಗೆ ಹೋಗ್ತಿದ್ದ.

ಹೀಽಽಂಗ ರೋಜಿ ಬಾಗಲಾಗ ಕೂಡಾದು ರಾಜಾ ನೋಡ್ದ. ಒಂದಿನ ಹೊಯ್ತು. ಎಡ್ಡ ದಿನ ಹೊಯ್ತು, ಹತ್ತ ಹದಿನೈದು ದಿನ ಆದ ಮ್ಯಾಲ ರಾಜಾ ಇವನಿಗಿ ಕರ್ದು ಕೇಳ್ದ. ನೀ ಯಾರು ? ಇಲ್ಲ್ಯಾಕ ಕೂಡ್ತಿ ಅಂತ. ಆ ಹುಡುಗ ಹೇಳ್ದ. ನಮ್ಮಪ್ಪ ಸಾಯಾಕಾಲ್ಕ ದೊಡ್ಡವರ ಮನಿ ಬಾಗಿಲ ಕಾಯಿ, ಕೆಟ್ಟದ್ದ ನೋಡಿ ಮುಚ್ಗೊ. ಮತ್ತ ಸಭಾನೆರ್ದಲ್ಲಿ ಹೋಗು ಅಂತ ಹೇಳಿ ಸತ್ತ. ಅದ್ಕಾಗಿ ನಾ ನಿಮ್ಮ ಮನಿ ಬಾಗ್ಲಾ ಕಾಯ್ಲಿಕತ್ತೀನಿ. ಅಂತ ಹೇಳ್ದ.

ಈ ಮಾತು ರಾಜಾ ಕೇಳಿ ಖುಸಿಯಾದ. ತಮ್ಮಂಬಲ್ಲೆ ಊಟಕ್ಕ ಹಾಕಲಕ್ಹತ್ತ. ಹಿಂಗಾಗಿ ಇಬ್ಬರ ನಡೂವ ಇಸ್ವಾಸನೂ ಬೆಳೀತು.



ಒಂದಾನೊಂದಿನ ರಾಜಗ ಯುದ್ಧಕ ಹೋಗುದು ಬಂತು. ಪರಧಾನಿಗ ಎಲ್ಲ ತಯಾರ ಮಾಡ್ಲಕ ಹೇಳ್ದ. ಆವಗ ರಾಣೀಗಿ ಕುದೀಬಿತ್ತು. ರಾಣಿ ಪರಧಾನಿ ಮ್ಯಾಲ ಮನಸ ಮಾಡಿದ್ಲ. ಅವರಿಬ್ರು ರಾಜಾ ಇಲ್ದಾಗ ಈಗ ಹ್ಯಾಂಗ ಮಾಡ್ಬೇಕಂತ ಇಚಾರ ಮಾಡ್ದ್ರು. ರಾಣಿ ಒಂದ ಯೋಚನಾ ತಗದ್ಲು. ಏನಪ್ಪಾ ಅಂದ್ರು ನೀವು ನನಗ ಕಣ್ಣ ಬ್ಯಾನಿ ಮಾಡ್ಯಾವಂತ ಪಟ್ಟಿ ಕಟ್ಗೊಂಡು ಕೂಡ್ರಿ. ಅಂದ್ರು ನಿಮ್ಗ ಬಿಟ್ಟು ಹೋಗ್ತಾರ. ಅವ್ರು ಹ್ವಾದ ಮ್ಯಾಲ ನಮ್ಗ ಯಾಳಾ ಸಾದಸ್ತಾದಂತ. ಪರಧಾನಿ ಅದ್ರಂಗ ಮರದಿನ ಕಣ್ಣ ಬ್ಯಾನಿ ಆಗ್ಯಾವಂತ ಹೇಳ್ದ. ಆವಾಗ ರಾಜಾ ಹಾಂಗಾದ್ರು ಪರಧಾನಿ ಮನಿಕಡಿ ಜ್ವಾಕಿ ನೋಡ್ಲಿ. ನಾವು ಹೋಗಿ ಬರಾರಿ ಅಂದು ಬಾಗಿಲ ಕಾಯಾ ಹುಡುಗೂಗ್ಕ ಸಂಗಾಟ ಕರ್ಕೊಂಡು, ಎಲ್ಲಾ ತಯ್ಯಾರಾಗಿ ನಡ್ದ. ಸ್ವಲ್ಪ ದೂರ ಹ್ವಾದಮ್ಯಾಲ ರಾಜಾಗ ಎಲಿಅಡ್ಕಿ ಚಟ ಆಯ್ತು. ಚಂಚೀಗ ಕೈ ಹಾಕ್ದ, ಚಂಚಿ ಇರ್ಲಿಲ್ಲ. ಅದಕ್ಕಾಗಿ ಬಾಗ್ಲಾ ಕಾಯಾಂವ್ಗ ನೀನ ಹೋಗಿ, ನಾ ಮಂಚ ದ್ಮ್ಯಾಲ 'ಚಂಚಿ' ಇಟ್ಟೇನಿ ತಗೊಂಡು ಬಾ ಅಂತ ಕಳಸ್ದ. ರಾಜಾನ ಅಪ್ಪಣಿ ಪ್ರಕಾರ ಇಂವ ರಾಜ ದೇವಡಿಗ ಬಂದು ರಾಜಾ ಇರು ಖೋಲ್ಲಿಗೆ ಹೋಗಿ ನೋಡ್ತಾನ; ಒಂದೇ ಹಾಸ್ಗಿಮ್ಯಾಲ ಪರಧಾನಿ ಮತ್ತ ರಾಣಿ ಮಲ್ಕೊಂಡಿದ್ರು. ಅವರ ಅರಬಿ ಎಲ್ಲ ಎಕಾಡ್ದಕ್ಡೆ ಆಗಿದ್ವು. ಇದು ನೋಡಿ ತಂದಿ ಮಾತ ನೆನಪಿಗೆ ಬಂತು. ಏನಂದ್ರು "ಕೆಟ್ಟದ್ದ ನೋಡಿ ಮುಚ್ಚು ಅಂತ" ತನ್ನ ಸೆಲ್ಲ್ಯಾ ತಗೊಂಡು ಇಬ್ಬರ ಮ್ಯಾಲ ಹೊಚ್ಚದ. ರಾಜಾನ ಚಂಚಿ ತಗೊಂಡು ತಿರುಗಿ ಬಂದ. ಈ ಮಾತ ರಾಜನ ಮುಂದೆ ಹೇಳಲಿಲ್ಲ.

ಇಕಾಡಿ ಮುಂಜಾನಿ ರಾಣಿ-ಪರಧಾನಿ ಎಚ್ಚರ್ಕಿ ಆದಮ್ಯಾಲ ನೋಡ್ತಾರ, ಯಾರೋ ಹೊಚ್ಚಿ ಹೋಗ್ಯಾರ. ಸೆಲ್ಯಾದ ಮ್ಯಾಲ - ಬಾಗ್ಲ ಕಾಯಾಂವ ಬಂದು ಹೋಗ್ಯಾನ, ಈಗ ರಾಜಗ ಹೋಗಿ ಹೇಳಿದ್ರು, ರಾಜಾ ನಮ್ಮಂಗ ಇಡಾಲಂತ ಇಬ್ಬರಿಗುನೂ ಕುದಿಬಿತ್ತು. ಈಗ ಹ್ಯಾಂಗ್ಮಾಡ್ಬೇಕು ಅಂತ ಯೋಚ್ನಾ ಮಾಡ್ಲಾಕ ಸುರುಮಾಡ್ದ್ರು.

ಇಕಾಡಿ ರಾಜಾ ಯುದ್ಧ ಮುಗಿಸ್ಕೊಂಡು ತನ್ನ ಅರಮನಿಗಿ ತಿರುಗಿ ಬಂದ. ಬಂದ ಮ್ಯಾಲ ರಾಣಿ ಹೇಳ್ದಳು. ನೀವೇನು 'ಚಂಚಿ ತರ್ಲಾಕ'

ಬಾಗಲಕಾಯಶಾವನೀಗಿ ಕಳಿಸಿದ್ರಿ. ಅಂವ ಬಂದಿದ್ದ-ಮತ್ತ ನಾ ಒಬ್ಬಾಕಿ-ಇರಾದ್ನೋಡಿ ನನ್ನ ಮ್ಯಾಲ ಹಮ್ಲಾ ಮಾಡ್ದ. ಜೋಲಿ, ಝಪಾಟಿ ಮಾಡ್ದ. ಅಂತ ಹೇಳಿ ಕುಬ್ಸು ಅದು ಹರ್ಕೊಂಡಪ್ಲೆ ಮಾಡಿ ಅತ್ತು ಹೊಡ್ಕೊಂಡು, ಬಡ್ಕೊಂಡು ಹೇಳದ್ಲು.

ರಾಜಾ ಯೋಚ್ನಾ ಮಾಡ್ದ. ಬಾಗಲ ಕಾಯಶಾ ಹುಡುಗರೆ ಹಂತವ ಅಲ್ಲ. ಈ ಮಾತ ಏನಾಗಿರ್ಬೇಕು? ಅಂತ ಯೋಚ್ನಾ ಮಾಡ್ದ. ಕಡೀಗ ಏನಿದ್ದುದ್ದು ಆಗ್ಲಂತ ಧೈರ್ಯಮಾಡಿ ತ್ವಾಟಾ ಕಾಯುವರೀಗ ಹೇಳ್ದ. ಮುಂಜಾನಿ ಎದ್ದು ಇಲ್ಲಿಗೆ ಯಾರು ಪೈಲೆ ಬರ್ತಾರ ಅವ್ರಿಗಿ ಸುಡುಸುಡು ಎಣ್ಣ್ಯಾಗ ಹಾಕಿ ಕೊಲ್ಲಿ ಬಿಡ್ರಿ. ಎಣ್ಣಿ ಕಾಸ್ಲಾಕ ಇಡ್ರಿ. ಅಂತ ಹೇಳಿ ರಾಣಿ ಮುಂದ, ಪರಧಾನಿ ಮುಂದ ಹೀಂಗ್ಹೀಂದ್ಹೀಂಗ ನಾಳಿಗೆ ಮಾಡ್ರೆಂತ ಹೇಳಿ ಬಂದೀನಿ. ಅಂವ ಸತ್ತ ಹೋಗ್ತಾನಂತ ಹೇಳ್ದ. ಈ ಮಾತ ಕೇಳಿ ರಾಣಿಗಿ, ಪರಧಾನಿಗಿ ಖುಸಿ ಆಯ್ತು.

ಬಾಗಲ ಕಾಯಶಾಂವ ಮುಂಜಾನೆ ಹ್ಯಾಂಗ ಏಳದ್ಯದ ಹಾಂಗ ಎದ್ದು ಜಳಕ ಮಾಡಿ ಹೂವ್ವ ತರಲಕ್ಕಂತ ತ್ವಾಟ್ದಕಡಿ ನಡ್ದ. ನಡು ಹಾದ್ಯಾಗ ಬಂದು ಗುಡಿ ಮುಂದ ಜನ ನೆರದಿದ್ದ ಕಂಡ ಮತ್ತ ಅಪ್ಪನ ಮಾತ ನೆನಪಿಗಿ ಬಂತು. ಸಭಾನೆರ್ದಲ್ಲಿ ಹೋಗ್ಬೇಕು, ಅಂತ ಹೇಳಿ ಆ ಕಡಿ ನಡ್ದ, ಹೋಗಿ ನೋಡ್ತಾನ, ಯಾರ್ದ್ರೋ ಮದಿ ನಡ್ದಿತ್ತು. ಅಲ್ಲೆ ಜರ ಕೆಲಸ ಮಾಡ್ದಂಗ ಮಾಡಿ, ಊಟಗೀಟ ಮುಗಸ್ಗೊಂಡು ಹೂವ್ವ ತರ್ಲಕ ಹೋಗಾದು ಜರಾ ತಡಾನೇ ಆಯ್ತು.

ಇಕಾಡಿ ರಾಣಿಗ ಮತ್ತ ಪರಧಾನಿಗ ಎಲ್ಲ ತಡಿಲಾರ್ದಂಗ ಆಯ್ತು. ಇಷ್ಟೊತ್ತಿಗೆ ಅಂವ ಹೋಗಿರ್ಬೇಕು. ಎಣ್ಯಾಗ ಹಾಕಿ ಕೊಲ್ಲಿರ್ಬೇಕು, ಹಿನ ಏನೂ ಸುದ್ದೀನೇ ಬರ್ಲಿಲ್ಲ. ನಾ ಹೋಗಿ ಬರ್ತೀನಿ ಅಂದು ಪರಧಾನಿ ತ್ವಾಟದ ಕಡಿ ಹೊಂಟ. ಹಿನಾ ಅವಾಗ ಬಾಗ್ಲಾ ಕಾಯಶಾಂವ ಹೂವ್ವ ತರ್ಲಕ್ಕ ಹೋಗಿದ್ದಿಲ್ಲ. ಮದಿ ನೋಡ್ತಾನೆ ಇಕಡೆ ಉಳಿದಿದ್ದ. ರಾಜನ ಹುಕುಂ ಮ



ಪೈಲೆ ಬಂದವ್ರಿಗಿ ಎಣ್ಯಾಗ ಹಾಕಿ ಕೊಲ್ರಿ ಅಂತ, ಪರಧಾನಿ ಬಂದೀದು ನೋಡಿ ಎತ್ತಿ ಒಯ್ದು ಸುಡಾ ಸುಡಾ ಕುದ್ಯಾ ಎಣ್ಯಾಗ ಒಯ್ದು ಹಾಕಿ ಕೊಲ್ದ್ರು.

ಇಂವ ಮದ್ವಿ ಮುಗ್ಸಿ ಹೂವ್ವ ತರ್ಲಾಕ ಯಾಳಿ ಆಯ್ತಂತ ಗಡ್ಬಡಿಸಿ ಹೋಗಿ, ಹೂವ ಕಡ್ಕೊಂಡು ತಂದು ರಾಜಗ ಕೊಟ್ಟ, ರಾಜಾ ನೋಡಿ ಗಾಬ್ರಿ ಆದ. ಇವನಿಗ ಕೊಲ್ಲಿಲ್ಲೇನು ? ಅಂತ ಇಚಾರ್ಸಿ, ಏ ಹೂವ್ವ ತರ್ಲಾಕ ಇಷ್ಟ್ಯಾಕ ಯಾಳಿ ಅಂತ ಕೇಳ್ದ. ಅವಾಗ ನಾ ಹೀಂಗೀಂದ್ಹೀಂಗ ಮದಿ ಮಾಡ್ಕೋತ ಕುಂತ. ಜರಾ ಯಾಳಿ ಆಯ್ತು ಅಂತ ಹೇಳ್ದ. ಹಾಂಗಾದ್ರ ಯಾರಿಗಿ ಕೊಲ್ದ್ರು ಅಂತ ರಾಜಾ ನೋಡ್ತಾನ, ಪರಧಾನಿ ಸತ್ತಾನ ಈಗ ರಾಜಾಗ ದಂಗ ಬಡ್ದಂಗಾಯ್ತು.

ಆವಾಗ ರಾಜಾ ಮತ್ತ ಬಾಗ್ಲಾ ಕಾಯಶಾವ್ನೀಗಿ ಕರ್ದು ಏ ಖರೇ ಹೇಳು. ನೀ ಎಲ್ಲಿಗ ಹೋಗಿದ್ದ್ಯಾ ಅಂತ ಕೇಳ್ದಾಗ ಇಲ್ಲ, ನಮ್ಮಪ್ಪ ಮೂರು ಮಾತು ಹೇಳ್ಯಾನಂತ ನಿಮ್ಮುಂದ ಹೇಳಿಸಲ್ಲ. ಅದರ ಪರಕಾರ - ಸಭಾ ನೆರ್ದಲ್ಲಿ ಹೋಗು ಅಂತ ಹೇಳಿದ್ದ. ಅದಕಾಗಿ ನಾ ಹೋಗಿದ್ದೆ ಅಂದ. ಹಾಂಗಾದ್ರ ನಿ ಕೆಟ್ಟದು ಏನರೆ ನೋಡಿದ್ದೇನು ? ಅಂತ ರಾಜಾ ಕೇಳ್ದ. ಆವಾಗ ಅವ್ನೀಗಿ ಹೇಳಾ ಪರಸಂಗ ಬಂತು.

ಹೊಂಯ್ದು ಅವತ ನೀವು ಚಂಚಿ ತರ್ಲಕ ಖಳಸ್ದಯಾಳಿಗಿ ರಾಣಿ ಮತ್ತ ಪರಧಾನಿ ಒಂದೇ ಮಂಚದ್ಮ್ಯಾಗ ಹಂಗೆ ಮಕ್ಕೊಂಡಿದ್ರು. ಅವ್ರು ಬತ್ಲ್ಯಾ ಇರಾದು ನೋಡಿ ಅವ್ರಮ್ಯಾಲ ಶೆಲ್ಲ್ಯಾದ್ಲೆ ಮುಚ್ಚಿ ಹೋಗಿದ್ದೆ. ಅಂತ ಹೇಳಿದ್ದ ಕೇಳಿ, ರಾಜಾ ರಾಣೀಗಿ ಕರ್ಸಿ, ತೆಲಿಬೋಳ್ಸಿ ಕತ್ತಿಮ್ಯಾಲ ಕೂಡ್ಸಿ ಊರಹೊರ್ಗ ಕಳ್ಸಿದ್ನಂತ. ಈ ಹುಡುಗಗ ಪರಧಾನಿ ಮಾಡಿ ಮಾನ್ಯ ಮಾಡ್ದಂತ.

ಹೀಂಗ ನಾ ಹೇಳ್ದೆ, ನಿ ಕೇಳ್ದಿ.

## ಮೈಗಳ್ಳ ಮೋಸಗಾರರು

ಒಂದೂರಾಗ ಒಬಾಂವ ಹಾರವ ಮತ್ತು ತಂರುಕೂರಂವ ಇಬ್ರು ದೋಸ್ತ್ರು ಇದ್ರುಂತ. ಅವ್ರಿಬ್ರು ಭಾರೀ ಮೈಗಳ್ಳರಿದ್ರುಂತ್ರ. ಇರಾನಾ ದಿನಾ ಇಬ್ರು ತಮ್ಮ ಹೆಂಡ್ರು ಕೈಲಿ ಬೇಸ್ತೊ್ಕೀತೀದ್ರುಂತ. ಹೆಂಡ್ರು ಕಾಟಾ ಅವ್ರೀಗಿ ಸಾಕಾಗಿ ಹೋಯ್ತು. ಇಬ್ರೂಕೂಡಿ ಒಂದಿನ ಮೀಟಿಂಗ ಮಾಡೂರು. ಏನಂತಂದ್ರ ಎಲ್ಲರ ಇಬ್ರು ಹೋಗಿ ಘಳಿಸ್ಗೊಂಡು ಬಂದ ಹೆಂಗ್ಸರ ಸರಿ ಮಾತಾಡೂನು ನಡಿ ಅಂದು. ಆವಾಗಿಂದಾವಾಗ ಹಂಗೆ ಊರ್ಬಿಟ್ಟು ಹ್ವಾದ್ರು. ಹಿಂಗೆ ದೂರ ಬಂದು ಕಲ್ಬುರ್ಗಿ ಹಂತಲ್ಲ ದೊಡ್ಡ ಬಸ್ತಿದಾಗ ಇಳದ್ರು.

ಇನ್ನ ಹಸುವೊಂದು ತಾಳ್ಬೇಕಲ್ಲ. ಹ್ಯಾಂಗ ಮಾಡ್ಬೇಕು, ತಂರು ಕೂಗಂತು ಏನೂ ಬರ್ತಿದ್ದಿಲ್ಲ. ಹಾರುವ ಅಂದ ನೀ ಇಲ್ಲೇ ಕೂಡು ನಾ ಹೋಗಿ ಬಾಜಾರ್ದಾಗ ಭಿಕ್ಷಾ ಹೊಡ್ದು ಅಕ್ಕಿ ಅರೇ ತರ್ತೀನಂದು, ಅಲ್ಲೇ ಒಂದಗಿಡದ ಬುಡಕ ಊರ ಹೊರಗ ಕೂಡ್ಸಿ ಊರಾಗ ಬಂದು, ಬಾಜಾರದಾಗ ದುಕಾನ, ದುಕಾನ ತಿರ್ಗಿ ಅಕ್ಕಿ ಜಮಾಸ್ದ. ಜಮಾಸಿ ತಿರುಗಿ ತುರ್ಕ ಇದ್ದಲ್ಲಿ ಬಂದು ಅಕ್ಕಿಗಿಟ್ರು. ಉಪ್ಪಿನ ನೆನಪ ಬಂತು. ಹ್ಯಾಂಗ ಮಾಡ್ಬೇಕು, ಹಾರೂರಂವ ಹೇಳ್ದ ನೀ ಇಲ್ಲೇ ಅನ್ನ ನೋಡ್ಕೊಕೀತ ಕೂಡು, ನಾಯಿ ಆದು ಏನರೆ ಬಂದು ತಿಂದಾವು ಅಂತ ಹೇಳಿ ಉಪ ತರ್ಲಕ್ಕ ಹ್ವಾದ.

ಅಂವಾ ಅಕಾಡಿ ಹ್ವಾದ ಗಳಿಗೀಲೆ ತುರ್ಕರವ ಸುಮ್ನ ಕೂಡ್ಲಿಲ್ಲ. ಅಲ್ಲೇ ಮುಂದ್ಕ ತಿರಗಾಡ್ಕೊಕೀತ ಹೋಗುದ್ರಾಗ ಸೂಳೇರ ಗಲ್ಲಿ ಇತ್ತು. ಒಂದ



ಮನೀಗಿ ಹೋಗಿ ಕೇಳ್ದ, ಏನ ನಿನ್ನ ಕಿಮ್ಮತ್ತು? ಏಟು? ಅಂತ. ಆಕೆ ಪಾನ್ಸೆ ರೂಪಾಯಿ ಅಂದ್ಲು. ಹೇ ಪಾನ್ಸೆ ಗೀನ್ಸೆ ಬ್ಯಾಡ, ಸಾವೀರ ಗೀವೀರ ಇದ್ರ ಹೇಳಂದ. ಮುಂದ್ಕ ಹೋದ. ಹೋಗಿ ಮತ್ತೊಂದು ಮನ್ಯಾಗ ಕೇಳ್ದ. ಅಲ್ಲಿ ದೋನ ಹಜಾರ ಅಂದ್ರು. ಹೇ ಹಜಾರಾ ದೋ ಹಜಾರಾ ಬ್ಯಾಡ, ಧಾ ಹಜಾರ ಮ್ಯಾಲ ಇದ್ರ ಮಾತಾಡು ಅಂದಾ. ಮತ್ತ ಮುಂದ್ಕ ಹೋಗಾದ್ರಾಗ ಒಂದು ದೊಡ್ಡಮನಿ ಕಾಣಿಸ್ತು. ಅಲ್ಲೇ ಮಗ್ಗ ಲಾಗೊಂದು ಅರಬಿ ದುಕಾನ ಇತ್ತು. ಅಲ್ಲಿ ಹೋಗಿ ಇಚಾರ ಮಾಡ್ದ. ಇಕಿ ಭಾಳ ಕಿಮ್ಮತ್ತಿನಕಿ ಲಾಕ ದೋನಲಾಕ. ಮನಸ್ಯಾರ್ದ್ಗ ನಡೀತಾದ ರಾಜ ಮಹಾರಾಜರು ಮಾತ್ರ ಇಲ್ಲಿ ಹೋತಾರಂದ್ರು.

ಹಂಗಾರ ನೋಡಾರಿ ಅಂದು ಅಲ್ಲೆ ಮಗ್ಗಲಾಗ ಒಂದು ದುಕಾನ ಇತ್ತು. ಅಲ್ಲಿ ರಾಜಾರ ಪೋಷಾಕ ಸಿಕ್ತಿದ್ದುವು. ಕಿರಾಯಿ ಒಂದಿನಕ ಏಟು ಅಂತ ಕೇಳ್ದ. ಒಂದು ಪೋಷಾಕಿಗಿ ಒಂದು ದಿನಕ ಒಂದ ಸಾವೀರಂತ ಹೇಳೂರು. ಹಾಗಾಂದ್ರ ಒಂದು ಪೋಷಾಕು ಕೊಡು, ನಾ ಇಲ್ಲೇ ಮ್ಯಾಲ ಹೋಗಿ ಬರಾ ಮುಂದ ರೊಕ್ಕ ಕೊಡ್ತೀನಂದ. ಅವ್ರಂದ್ರು, ನೀವ್ಯಾರೋ? ಏನ್ಸದ್ದೊ್ಯೀ ? ಹಾಂಗಲ್ಲ ಕುಡ್ಲೊ್ಕ ಬರಾಲಂದ್ರು. ಅಂಬಾಣಾ ಯಾಕ ಅಲ್ಲ್ದ ಇಸ್ವಾಸ ಇಲ್ದಿದ್ರ, ಒಂದ ಮನಸ್ಯಾಗ ಇಲ್ಲೇ ಬಾಗ್ಲ್ಯಾಗ ಕೂಡ್ಸರಿ, ನಾ ಅವುಂದು ಕಿರಾಯಿ ಸಹಿತ ಕುಡ್ತೀನಿ ಅಂದ.

ಯಾಕಾಗಲ್ದ ಅಂದು ಪೋಷಾಕು ಕೊಟ್ರು. ಅಲ್ಲೆ ಹಾಕೊಂಡು ಮ್ಯಾರೇರಿ ಸೂಳೀ ಮನೀಗಿ ಹ್ವಾದ. ಯಾರೋ ರಾಜಾರು ಬಂದಾರೆಂದು ಅವ್ರು ಆರತಿ ಹಿಡ್ದು ಕರ್ಕೊಂಡು ಹ್ವಾದ್ರು. ಅಂವ ಅಲ್ಲೇ ಸೂಳೀ ಮನ್ಯಾಗ ಉಳ್ದ. ಸೂಳಿಗಿ ತೌಹಿಂತ ರಾಜಾಂದು ರಾಜಕುಮಾರ. ನನ್ನ ಮಂದ್ವಿ ಇನ್ನಾ ಆಗಿಲ್ಲ. ಅದ್ಕ ನೋಡಾರಿ, ಆದ್ರ ನಿನಗ ಮಾಡ್ಕೊಕೀತೀನಿ, ನಿನ್ನ ರೂಪಿಗಿ ನಾ ಮೆಂಚ್ಚೀನಿ ಅಂದು ಗೋಲಿ ಹೊಡ್ದ. ಅಕಿ ಹುಚ್ಚಿ ಯಾಕಾ ಗಲ್ದ ಅಂದ್ಲು.

ಇಕಾಡಿ ಹಾರುವ ಭಿಕ್ಷಾ ಬೇಡಿ ಉಪ್ಪ ತರತಾನ ಬಾನದ ಬೋಗಾಣ್ಯಾಗ ನಾಯಿ ಮೋತಿ ಹಾಕಿ ತಿಂದು, ಬೋಗಾಣಿ ಎಲ್ಲಾ ನೆಕ್ಕೊಕೀತ ನಿಂತಿತ್ತು.

*

ಅಟ್ಟರಾಗೆ ಹಾರುವ ಬಂದು ನೋಡ್ತಾನೆ, ತುರ್ಕ ಇಲ್ಲ. ಎಲ್ಲಿ ಹ್ವಾದ ಅಂತ ಮುಂದಕ ಹುಡುಕ್ಯಾಡ್ಲಕ ನಡ್ದ.

ಹಂಗೆ ಹುಡಕೋತ ಅಲ್ಲಿ ಹಿಂತಾ ಮನಸಾ ಹೋಯ್ತೇನ್ರಿ, ಅಂತ ತುರ್ಕನ ಖೂನ ಹೇಳ್ಕೋತ ಹೋಗಾರ್ದಾಗ ಒಬ್ಬಾಂವ ಪೋಷಾಕ ಕಿರಾಯಿ ಹಾಯ್ಕೊಂಡು ವ್ಯಾಗ ಹೋಗ್ಯಾನ ಅಂದದ್ದು ಸುದ್ದಿ ಹತ್ತಿ ಅವ್ನ ಇಚಾರ ಮಾಡ್ದ. ನಾ ಪರಧಾನಿ ವೇಷ ಹಾಯ್ಕೊಂಡು ಹೋಗಾರಿ ಅಂದು ಅದೇ ದುಕಾನದಾಗ ಹೋಗಿ ಕೇಳ್ದ. ಏನ್ರಿ ನಾನೂ ಜರಾ ವ್ಯಾಲ್ಬೋಗಿ ಬರಾ ಮುಂದ ಕಿರಾಯಿ ಕೊಡ್ತೀನಿ, ಮೊದಲ ಹೋದವ್ರು ಮನ್ಯಾಗನೆ, ಮತ್ತ ಅವ್ರುಸರಿ ನಾನೂ ಕೊಡ್ತೀನಿ ಕೊಡ್ರಿ ಅಂದ. ಯಾಕಾಗಲ್ದು ಅಂತ ಕೊಟ್ರು ಇಂವ ಪರಧಾನಿ ಡ್ರೇಸ ಹಾಕೊಂಡು ವ್ಯಾಲಹೋಗಿ, ನಿಮ್ಮ ರಾಜರ ಪರ ಧಾನಿ ಬಂದಾರ. ಜರಾ ರಾಜರ ಭೇಟಿ ಆಗಾದದ ಅದ್ಕ ಜರಾ ಹೊರ್ಗ ಬಾ ಅನ್ರಿ ಅಂತ ಹೇಳಿ ಕಳಿಸ್ದ. ಇಂವ ತುರ್ಕ ಮಜಾಸಿರಿ ಹೆಂಗಸರ್ದಾಗ ಕುಂತಿದ್ದ. ಹೀಂಗೀಂದ ಹೀಂಗ ನಿಮ್ಮ ಪರಧಾನಿ ಬಂದಾರಂತ ಅಂದ ಗಳಿಗೀಲೆ ಇವ್ನ ಟಾಕೀನೆ ಢೀಲಾ ಆದುವು. ಯಾರ ಬಂದಾರಂದು ಜೇಂವಾ ಕೈಯಾಗ ಹಿಡ್ಕೊಂಡು ಹೊರ್ಗ ಬಂದು ನೋಡ್ತಾನ, ಹಾರುವ ಇಂವ ತುರ್ಕ್ಯಗ. ನೋಡ್ದಗಳೀಗೀಲೆ-ಅರೆರರೇ ರಾಜರೇ ನೀವು ಇಲ್ಲಿ ಬಂದು ಕುಂತ್ರಿ. ಅಕಡಿ ನಾ "ಉಪಪ" ರಾಜಗ ತರ್ಲಕ ಹೋಗಿ ಬರಾಟ್ಗಿನೇ ಬಾನಪ್ಪ ರಾಜರ ವ್ಯಾಲ ನಾಯುಪರಾಜಾ ದಾಳಿ ಮಾಡ್ಯಾನ. ನೀವು ಜಲ್ದಿ ಬರ್ಬೇಕು. ಇಲ್ದರ ದೋನ ಲಾಕ ರೂಪಾಯಿ ಕೊಟ್ಟು ಖಳಸು ಅಂದ್ರು ಅಂತ ಅಂದ. ಅಂವ ತುರ್ಕ ಅರರೇ ಹಿಂಗಾಯ್ತೇನು ? ನಾ ಸಂಗಾಟ ರೊಕ್ಕಾನೇ ತರ್ಲಿಲ್ಲ ಅಂದು ಜರಾ ಇಚಾರ ಮಾಡ್ದಿಪ್ಲೆಮಾಡಿ ಸೂಳೀಗಿ, ಏ ನಿನಕಡಿ ಏನ ಲಾಕ-ದೋನ ಲಾಕ ರೂಪಾಯಿ ಇಟ್ಟಿ ಏನು ? ಇಲ್ದರ ನಾನೇ ಹೋಗ್ಬೇಕಾಗತ್ತಾದ. ನಾ ಹೋಗಾತಾನರೇ ಅಲ್ಲಿ ಖರ್ಚಿಗೆ ಬೇಕಂತ. ನಾಮತ್ತ ನಿನ್ನ ತರ್ಸಿ ಕುಂತ್ತೀನಿ. ಇದ್ದರ ಕೊಡು ಅಂದ. ಹೆಂಗ್ಸೀಗಿ ಇಂವ ಮೊದ್ಲೇ ಗೋಲಿ ಹೊಡ್ದಿದ್ದ. ಯಾಕಾಗಲ್ದು ಅನಾ ತಗೋರಿ ಅಂದು ದೋನ ಲಾಕ ರೂಪಾಯಿ ಕೊಟ್ಟು. ಹಾರ್ವನ



ಕೈಯ್ಯಾಗ ಕೊಟ್ಟು ನೀ ನಡ್ಯಾ ನಡಿ: ನಾನೂ ಬರ್ತೀನಿ, ಎಲ್ಲಾ ಛಲೊ ನೋಡ್ಕೊರಿ ಅಂತ ಹೇಳಿ ಕೊಟ್ಟ ಕಳಿಸ್ದ.

ಇಂವ ರೂಪಾಯಿ ತಗೊಂಡು ತೆಳಗ ಬಂದು ಡ್ರೆಸ ಅದರ ಕಿರಾಯಿ ಕೊಟ್ಟು ಮತ್ತ ಮುದಲೀನ ಜಾಗಾಕ ಬಂದು ಕುಂತ.

ಇಂವ ಹ್ವಾದ ಗಳಿಗೀಲೆ ತುರ್ಕಗ ಇಲ್ಲಿ ಹೊಟ್ಟ್ಯಾಗ ಹೊಗಿ ಎತ್ರಿ. ಇನ್ನ ನಾನೂ ಇರೋದು ಛಲೋ ಅಲ್ಲ ಅಂದ. ಮತ್ತ ಸೂಳೀಗಿ ಏs ಯುದ್ಧ ನಡದಾದಂತ ನಾನೂ ಹೊಗ್ಬೇಕು; ಹೀನಾ ಒಂದೀಸ ರೊಕ್ಕ ಇದ್ರ ಕೊಡು ಅಂದ. ಸೂಳಿ ನಾನೂ ನಿಮ್ಮ ಸರಿ ಬರ್ತೀನಿ ಅಂತ ಹಟ ಹಿಡದ್ಳು. ಇಲ್ಲಿ ಅಲ್ಲಿ ಈ ಸದ್ಯ ಯುದ್ಧ ನಡದಾದ ಹ್ಯಾಂಗ ಬರ್ತಿ. ಎಲ್ಲಾ ಜಗಳ ನಿಂತು ಶಾಂತ ಆದ್ಮೇಲೆ ನಾನೇ ಬಂದು ಕರ್ಕೊಂಡು ಹೋಗ್ತೀನಿ; ಈಗ ಸದ್ಯ ಹೀನಾ ದೋನಾಲಾಕ ಇದ್ರ ಕೊಡು ಅಂದ. ಖರೇ ಖರೇ ಅಂದು ಹೆಂಗ್ಸು ರೂಪಾಯಿ ಕೊಡ್ತು. ಇನ್ನ ಮಾತ್ರ ನಾ ದಕ್ಕ ಅಂದು ತಿಳ್ದು ತೆಳಗ ಬಂದ. ಮನ್ಸ್ಯಾಂದು ಡ್ರೆಸ್ಸಿಂದೂ ಎಲ್ಲಾ ರೊಕ್ಕ ಕೊಟ್ಟು ಮೊದಲಿನ ಜಾಗಾಕ ಬರ್ತಾನ. ಹಾರೂವ ಅಲ್ಲೇ ಇದ್ದ. ಇಬ್ರೂ ಕೂಡಿ ಊರಿಗೆ ಬಂದು ಅಗ್ದಿ ಮಜಾದಾಗ ಇದ್ರುಂತ.

ಇಕಾಡಿ ಸೂಳಿ ತಿಂಗ್ಳ ನೋಡೋಳು, ಎಡ್ಡ ತಿಂಗ್ಳ ನೋಡೋಳು, ಕಡೀಗಿ ಯರಾರೂ ರಾಜರು ಬರ್ಲಿಲಲ್ಲಂತ ತಾನೇ ತುರ್ಕ ಹೇಳಿದ ರಾಜಧಾನೀಗೆ ಹೋಗಿ ರಾಜಗ ಗಂಟುಬಿದ್ಳು. ಹೀಂಗ ನಿಮ್ಮ ಮಗ ನನಗ ಮುದ್ವೀ ಮಾಡ್ಕೋ ತೀನಂತ ಹೇಳ್ಯಾರ ಎಲ್ಲಿ ಹರಾ ಅಂದ್ರುಣಾ ಅಂಬಾ ಅಂದ ಯಾರು ? ಏನ್ಸುದ್ದಿ ? ನನಗ ಮಗಾನೇ ಇಲ್ಲ. ಮಂತ್ಯಾರೇರ ಇರ್ಬೇಕು. ಅಂತ ಹೇಳಣಾ, ಮಾರಿ ಒಣಗಿಸ್ಕೊಂಡು ಬಂತಂತ,

---

ಹೀಂಗ ವ್ಯೆಗಳ್ರ ಕೆಲ್ಸಾನೇ ಇವು;

# ಪಂಚಲೋಹದ ಕುದುರೆ

ಒಬ್ಬ ರಾಜಗೆ ಮಕ್ಕಳಿದ್ದಿಲ್ಲ. ಮಕ್ಕಳಿಲ್ಲ ಮಕ್ಕಳಿಲ್ಲ ಮಕ್ಕಳಿಲ್ಲ ಅಂತೇಳಿ ಅವನ ಹೇಣ್ತಿ "ನಾವು ಸತ್ತರೆ ಮನಿಯಾಗೆ ದೀಪ ಹಚ್ಚೋರಿಲ್ಲ. ಬಾಯಾಗೆ ನೀರು ಬಿಡೋರಿಲ್ಲ." ಅಂತೇಳಿ ಚಿಂತೆ ಮಾಡಕೆಂತ ಮನಗಿಕೆಂಡಿದ್ದಲು. ರಾಜ ಬಂದ "ಯಾಕೆ ಮನಗಿದಿಯು" ಅಂದ. "ಅಯ್ಯೊ ನಿಮಗ್ಯಾತರ ಚಿಂತೆ" ಅಂದ್ಲು. "ಏನು ಚಿಂತೆದೆ" ಅಂದ. "ಮನೆತಾನಕೆ ಮಕ್ಕಳಿಲ್ಲ, ಸತ್ತರೆ ಬಾಯಾಗೆ ನೀರು ಬಿಡೋರಿಲ್ಲ, ಮಂತ್ಯಾನಕೆ ದೀಪ ಹಚ್ಚೋರಿಲ್ಲ" ಅಂತೇಳಂದಲು. "ಊರಾಗಳ ಪ್ರಜೆನೆ ಮಕ್ಕಳಲ್ಲವೇನೆ ಹುಚ್ಚಿ" ಅಂದ. ಇಕೆ "ಇನ್ನೊಂದರೆ ಮದುವ್ಯಾಗ್ರಿ" ಅಂದಲು. "ಬ್ಯಾಡೆ ನಿನ್ನೊಂದಿವಸ ಬಂದೀತು" ಅಂದ. "ಇಲ್ಲ ನೀವು ಮದುವ್ಯಾಗ್ರಿ ನಾ ಬೇಕಾಧಂಗಿಟಕಂಡು, ಅಕಿ ಹೊಟ್ಯಾಗೆ ಮಕ್ಕಳು ಹುಟ್ಟಿದರೆ ಮನೆತಾನಕೆ ದೀಪ ಹಚ್ಚುತಾರೆ, ಬಾಯಾಗೆ ನೀರು ಬಿಟ್ಟಾರು, ರಾಜರ ಮನೆತನ ಅನ್ನದು ಆದೀತು, ಪುಗಸಟ್ಟೆ ಊರನೆಲ್ಲ ಒಬ್ಬರ ತೆಲಿಗೆ, ಒಬ್ಬರ ಕೈಯಾಗೆ ಮಾಡಬಕ ? ನಾನೂ ಮಗ, ನಾನೂ ಮಗ ಅಂತೇಳಿ ಒಬ್ಬರಿಗೊಬ್ಬರು ಗುದ್ದಾಡಿ ಬಿಟ್ಟಾರು, ಬ್ಯಾಡ ಸಾಮಿ,[1] ನಾನೇ ಹೆಣ್ಣು ನೋಡ್ಕೆಂಬರ್ತಿನಿ" ಅಂತೇಳಿ ಪ್ರಜೆಗೆ ಕರಕಂಡು ಹೆಣ್ಣಿಗೋದಲು. ಹೋಗ್ತ ಹೋಗ್ತ ಎಲ್ಲ ಕಡಿಗು ರಾಜರು ಎಲ್ಲೆಲ್ಲಿ ಆದರೆ ಅಲ್ಲೆಲ್ಲ ಕೇಳಿಕೆಂತ ಹೋದಲು.

1 ಸಾಮಿ : ಸ್ವಾಮಿ



ಬೇಕಾಧಂಗೆ ರಾಜ್ಯ ಐತೆ, ಕಪ್ಪ ಕಾಣಿಕೆ ತಗಂತೀವಿ, ಮತ್ತೆ ನಮಿಗೆ ಮಕ್ಕಳಿಲ್ಲ, ಅದಕೆ ಇನ್ನೊಂದು ಹೆಣ್ಣು ಮಾಡಬಕು ಅಂತ ಐದೇನಿ ಅಂತ ಕೇಳಕ್ಕೆ. ಹೆಣ್ಣಿನ ಮ್ಯಾಲೆ ಹೆಣ್ಣು ಕೊಡೋದಿಲ್ಲ ಅಂತ ರಾಜರು ಅಂದೇ ಅಂದ್ರು.

ಒಬ್ಬಗೆ, ಒಬ್ಬಮಗ, ನಾಕು ಮಂದಿ ಹೆಣ್ಣು ಮಕ್ಕಳು ಇದ್ದರು. ಅವನು "ಏ ಅಷ್ಟು ಪ್ರೀತಿಂದ, ಮಕ್ಕಳಿಲ್ಲ ಅಂತ ಮದುವೆ ಮಾಡ್ಕೆಂಡು ಹೋಗಕೆ ಬಂದುವಳೆ, ರಾಜಗೆ ಬೇಕಾಧಂಗೆ ಕಪ್ಪಕಾಣಿಕೆ ಬರ್ತತಂತೆ, ಅಂತವ್ನಿಗೆ ಕೊಡದೆ ಮತ್ತಿನ್ನೆಂತನಿಗೆ ಕೊಡಬಕೆ, ಒಬ್ಬಕ್ಕಿ ಮಗಳುನ್ನ ನಾ ಕೊಡ್ತಿನಿ" ಅಂತಂದ. ಇವನ ಹೇಣ್ತಿ "ಸವತಿಯಾಗಿ ಕೊಡದು ಬ್ಯಾಡ, ಸವತಿ ಮಚ್ಚರ ಅನ್ನೋದು ಇರತ್ತಿ" ಅಂತು. "ಏಯ್ ನಾ ಕೊಡ್ತೀನಿ" ಅಂತೇಳಿ ಕೊಟ್ಟು ಬಿಟ್ಟ. ತಿಂಗಳಿಗ ಮದುವೆ ಮಾಡ್ಕೆಂಡು ಬಂದರು. ಬಂದು ಆರು ತಿಂಗಳಾಗ್ತ ಬಂತು. ಅಕೆನ ಬೇಕಾಧಂಗೆ ತೂಗುಮಂಚದ ಮ್ಯಾಲಿಟ್ಟು ತೂಗಕೆ ಹಿಡುದ್ದರೆ. ಅಕ್ಕ, ಕರಕ್ಕೊಂಡು ಮೈತೊಳಿತಾಳೆ, ಊಟಕ್ಕೆ ಕರಕೊಂಡು ಉಣತಾಳೆ. ಗೌಡೇರಿಗೆ ತೂಗಕೆ ಹಚ್ಚಿದಾಳೆ, "ಹೋಗವ ನಿನ್ನ ಗಂಡನ ಕುಟೆ ಯಲಡಿಕೆ ಹಾಕ್ಕೊ ಹೋಗು" ಅಂತೇಳಂತಾಳೆ ಕಳುಸ್ತಾಳೆ.

ಅತ್ಲಗೆ ಅವರ ತಾಯಿ ನನ್ನ ಮಗಳು ಹೋಗಿ ಆರುತಿಂಗಳ ದಿನ ಅತು. ಹೆಂಗವಳೊ ಏನೊ ಸವತಿ ಮಚ್ಚರ ಅನ್ನೋದಿರತತಿ, ಬ್ಯಾಡ ಅಂದರೂ ಕೊಟ್ಟಿದಾರೆ ಅಂತೇಳಿ ನೋಡಕೆ ಬಂದಲು. ನೋಡಿದಲು ಎಲ್ಲ ಸೇರಿಕೆಂಡೆ ಇದ್ದಲು. ಆರು ತಿಂಗಳಾದರು ನನ್ನ ಮಗಳು ಬಸುರಾಗಲುಲ್ಲ, ಏನು ಮಾಡಬಕಾತು, ಅಕಿಗೆ ಮನಿಬಿಟ್ಟು ಓಡಿಸಿದರೆ ಇಕಿಗೆ ಮಕ್ಳಾಕವೆ. "ತಾಯಿ, ಅಕಿದ್ದರೆ ಅಕಿ ಕುಟೇ ಪ್ರೀತಿಂದ ಇರತಾನೆ. ಇಕಿ ಕುಡೇ ಮಾತಾಡತಾನೆ, ನಿನಗೆಲ್ಲಿ ಮಕ್ಕಳಾಕವೇ, ಇಕಿಗೆ ಮನೆಬಿಟ್ಟು ಓಡಿಸಿದರೆ ನಿನಗೆ ಮಕ್ಕಳಾಕವೆ, ಇಲ್ಲಂದ್ದರೆ ಇಲ್ಲ" ಅಂತೇಳಂದಲು. ಅವನಿಗೆ ಹೇಳಕಿಡದಲು "ಅಯ್ಯೋ ಅಕಿ ಕುಟೆ ಪ್ರೀತಿಂದ ಇರುತ್ತೀರಿ, ಮನಿ ಬಿಟ್ಟು ಬೇರೆ ಮನಿಯಾಗೆ ಇಟ್ಟರೆ ನನಗೆ ಮಕ್ಕಳಾಕವೆ, ಇಲ್ಲಿದ್ರೆ ಹೆಂಗೆ ಮಕ್ಕಳಾಕವೆ" ಅಂತೇಳಿ ಗಂಡನ

ಕಂಟೆ ಸಿಟ್ಟು ಸೆಡವು ಮಾಡಕೆ ಹಿಡುದಲು. ಅವನು ಮನಸಿಗೇ ತೊಗಂಡಿಲ್ಲ. ಮತ್ತೆ ಆರು ತಿಂಗಳಾದರೂ ಮನಸಿಗೇ ತಗಂಡಿಲ್ಲ, ಹಿಂಗೇ ಇರತ ಇರತ ಗಂಡ ಮಾತು ಕೇಳಲಿಲ್ಲ ಅಂತ ಮುನಿಸುಂಗುಟ್ಟಿ ಮಕ್ಕಂಬಿಟ್ಟಲು.[2] ಆಕೆ "ಯಾಕವ ತಂಗಿ ಉಣ್ಣಕೇಳವ" ಅಂತ ಎಬ್ಬಿಸಕೇ ನೋಡಿದಲು. "ಏನುಣ್ಣದು ಬಿಡು" ಅಂದಲು. "ಯಾಕವ, ಏನದು, ರಾಜರು ಏನರ ಅಂದ್ರು? ಏನರೆ ಮಾತು ಕೇಳಲಿಲ್ಲವ ?," "ಏನಂತರೆ, ಇವರಿಗೆ ಮುಣುಗುನೀರು[3] ತರತೀನಿ ನೋಡರೆ ನೋಡು" ಅಂದ್ಲು. "ಏಸವ ಅದು ಅವರು ಕೇಳಲಿದ್ರೆ ಅಷ್ಟೇ ಹೋತು, ನಾ ಕೇಳತೀನಿ, ನನಿಗೆ ಹೇಳವ, ಬೇಕಾದ್ದೆ ನಾ ಮಾಡಿತೀನಿ, ನಾ ತರಿಸಿ ಕೊಡತೀನಿ" ಅಂತದ್ಲು. "ಹಂಗಾರೆ ನನ್ನ ಮಾತು ಕೇಳ್ತೀಯು ?" "ಹೂ ಕೇಳ್ತನವ" ಕೈ ಮ್ಯಾಲೆ ಕೈ ಭಾಷಿ ತಗಂಡಲು "ನೀನು ಮನಿ ಬಿಟ್ಟು ಹೋಗಬಕು, ಊರ ಮುಂದೆ ಮೂರು ಕಲ್ಲಿನ ಗುಡಿಸಿಲಿನ್ಯಾಗಿರಬಕು. ಏಳೊರ್ಷದ ರಾಗಿ, ನಾಕೊರ್ಷದ ಮೆಣಸಿನ ಕಾಯಿ, ಮೂರೊರ್ಷದ ಹುಣಸೇ ಹಣ್ಣು, ಅಷ್ಟು ತಗಂಡು ನೀ ಅಲ್ಲೇ ಇರಬಕು, ಅವಾಗ ನನಿಗೆ ಮಕ್ಕಳಾಕವೆ, ಇಲ್ಲಿದ್ರೆ ಹೆಂಗೆ ಮಕ್ಕಳಾಕ್ಕವೆ ?" ಅಂತಂದ್ಲು. "ಆಗಲವ್ವ", ಕೈ ಮೇಲೆ ಕೈಭಾಷಿ ತಗಂಡಿದಳೆ ಅಂತ ಗಡ ಗಡ ಆಳು ಮನುಶರಿಗೆ ಹೇಳಿದಲು—ಮೂರು ಕಲ್ಲಿನ ಗುಡಿಸಲು ಮಾಡಕೆ, ದವಸ ಧಾನ್ಯ ಎಲ್ಲ ಒಯ್ದು ಹಾಕಿಸಿದಲು, ಹಾಕಿಸಿ "ನಾ ಹೋಗ್ತಿನವ್ವ, ನಾ ಹೋದರು ಚಿಂತಿಯಿಲ್ಲ, ನಿನಿಗೆ ಮಕ್ಕಳಾದರೆ ಸಾಕು" ಅಂತೇಳಂದಲು ಹೋಗಿ ಊರ ಹೊರಗಿದ್ದಲು. ಗಂಡ "ಕೇಳಲುಲ್ಲ ಮಾಡಲುಲ್ಲ ಬ್ಯಾಡಾಂತಂದರು ಮಾಡ್ಕಂಡು ಬಂದಿದಳೆ, ಹೋಗಿದಳೆ" ಅಂತ ಅವನು ಪಶ್ಚಾತ್ತಾಪ ಪಡ್ತನೆ. ಇದ ಇಲ್ಲಿಗೆ ಬಿಡ್ತನಿ.

ಇನ್ನೊಂದೂರಗೆ ಒಬ್ಬ ರಾಜನ ಮಗ. ತಂದಿ ತಾಯಿ ಸತ್ತಿದ್ರು. ಆ ಹುಡುಗ ಅಲ್ಲಿ ಇಲ್ಲಿ ತಿರಕಂಡು ತಿಂದು ಸಾಕಾಗಿ ಇನ್ನೊಂದೂರಿಗರೆ ಹೋಗನ

2 ಮಲಗಿ ಬಿಟ್ಟಳು.

3 ಜೀವಕ್ಕೆ ಅಪಾಯ ಕಟ್ಟಿದ್ದನ್ನು ಬಯಸು,



ಅಂತೇಳಿ ರಸ್ತೆ ಹಿಡಕಂಡು ಬರತಿತ್ತು. ಒಂದು ಮಾಯಿನ[4] ಮರ ಇತ್ತು. ಅದಕೆ ಎಷ್ಟು ವರ್ಷ ಆಗಿತ್ತೊ ಏನೊ ಅದರಗೆ ಒಂದು ಹಣ್ಣಿತ್ತು. ಅದು ಕೊಳತಿದ್ದಿಲ್ಲ, ಬಿದ್ದಿದ್ದಿಲ್ಲ, ಒಬ್ಬರ ಕೈಗೆ ಸಿಕ್ಕಿದ್ದಿಲ್ಲ. ಒಬ್ಬ ರುಶಿ ಆ ಹಣ್ಣು ಬಿದ್ದಕೂಡ್ಲೇನೆ ನಾ ತಿನ್ನಬಕು ಅಂತೇಳಿ ಹತ್ತು ವರ್ಷದ ತಂಕಲು ಕಾವಲೇಯಿದ್ದ. ಅವನಿಗೊಂದೇಟು ನಿದ್ದೆ ಬಂದಿತ್ತು. ಈ ಹುಡುಗ ನಡಕೋಂತ ಹೋಗಿ ಬಿಸಿಲಾಗೆ ಸಾಕಾತು ಅಂತೇಳಿ ಹಂಗೆ ಮರದಡೀಲಿ ಮಕ್ಕಂಡಿದ್ದ. ಹುಡುಗುಂತಾಕೆ ಆ ಮಾವಿನಣ್ಣು ಬಿತ್ತು, " ಏ ತಮ್ಮಾ, ಈ ಹಣ್ಣು ತಿನ್ನೇಳೊ, ನನಿಗೆ ತಿನ್ನೇಳೊ " ಅಂತ ಎಬ್ಬರಸತು ಹಣ್ಣು. ಅಲಲ ಮಾವಿ ನಣ್ಣೆ ತಿನ್ನು ಅಂತತಿ ಅಂದ ತಿಂದ. ಹ್ಯಾಟೆನು ನುಂಗಿಬಿಡು ಅಂತು. ನುಂಗಿದ. ಆ ಮ್ಯಾಲೆ ಅಲ್ಲೆ ಕುಂತುದ್ದ. ಈ ಸನ್ಯಾಸಿ ಎದ್ದು ಮ್ಯಾಲೆ ನೋಡ್ತನೆ, ಹಣ್ಣಿದ್ದಿಲ್ಲ. "ಏ ಹಣ್ಣು ತಕ್ಕೊಂಡು ತಿಂದೆನೊ," "ಇಲ್ಲ ಹೊಗ ಅಂದ". "ಏ ತಿಂದೆನೊ, ತಿಂದ್ಯಲೊ" ಅಂತಂದ. "ಅದಾಗಿ ತಿನ್ನು ಅಂತು ತಿಂದೆನೊ" ಅಂದ. "ಹ್ವಾರ್ಟೆ ತನ್ನು ಅಂತು ತಿಂದೆನೊ" ಅಂದ "ಕಕ್ಕೊ" ಅಂದ. "ಹೋಗೊ ಅದ್ಯಾಕೆ ಕಕ್ಕಲಿ" ಅಂತೇಳಂದ. ರುಶಿ ಶಾಪ ಕೊಟ್ಟುಬಿಟ್ಟ—" ದೇವಲೋಕದಗೆ ಹನ್ನೆಲ್ಡು ವರ್ಷ ಪಂಚಲೋಹದ ಕುದುರ್‍ಯಾಗಿ ಹೋಗು." ಆ ಹುಡುಗ ಪಂಚಲೋಹದ ಕುದುರೆಯಾಗಿ ದೇವಲೋಕಕ್ಕೆ ಹೋತು. ಏನು ತಿನ್ನಬಕು ದೇವಲೋಕದಗೆ. ಹಂಗೆ ಬೂಲೋಕಕ್ಕೆ ಬರೋದು ಯಾರು ಕಡ್ಲಿ ಬಿತ್ತುತರೆ ಅಲ್ಲೆರಡು ಕಡ್ಲಿ ತಿನ್ನೋದು, ಹೋಗೋದು. ಹಿಂಗೆ ಮಾಡತ್ತಾ ಇತ್ತು.

ಇತ್ಲಗೆ ಇಕೆ ಊರ ಮುಂದಲ ಗುಡುಸಲಿನ್ಯಾಗೆ ಒಬ್ಬಕೆ ಇದ್ದಲಲ, ಮ್ಯಾಲೇಳತಿದ್ದಿಲ್ಲ ಮಾಡಿಕೆಂದು ತಿಂತಿದ್ದಿಲ್ಲ. ಒಂದು ಬಿಸೆಕಲ್ಲಿಲ್ಲ, ಒಂದು ಮೊರ ಇಲ್ಲ, ದುಂಡ್ಯಗೆ ರಾಗಿ ತಿರುವ್ಕೊಂದು ಏನು ಮಾಡ್ಕೊಂದು ತಿನ್ನಕೆ ಬರ್ತ್ತತೆ. ನೆಲಕ್ಕೆ ನೆಲಾಗಿ ಬಿದ್ದುತ್ತು. ದಿಸಕ್ಕೊಮ್ಮೆ ಚರಿಗಿ ಸೈತ ತಗಂದು

4 ಮಾವಿನ ಮರ

ಹೊಕ್ಕಿದ್ದಿಲ್ಲ. ರಾಜ "ಅಕಿಗೆ ಅಡಿಗೆ ಮಾಡಕೆ ಬರದಿಲ್ಲ, ಹೋಗೆ ಗೌಡಿ ಮಾಡು" ಅಂತೇಳಿ ಒಬ್ಬ ಗೌಡಿನ ಕಳಿಸಿದ. ಅಕೆ ಊರಗೆ ಹೋಗಕಿ ರಾಗಿ ಬೀಸಿಕೆಂಡು ಬರಕಿ, ಮುದ್ದೆನೊ ರೊಟ್ಟಿನೊ ಮಾಡಿ ನೀಡಕಿ, ಚರಿಗಿ ತಗಂಡು ಹೋಗ ಬಕಾತಲ. ಊರ ಮುಂದೆ ಕಡ್ಲಿ ಹೊಲಯಿತ್ತು, ಅಲ್ಲಿಗೆ ಹೋಗಿ ಕುಂತು ಬರತಿದ್ದಲುಂ. ಪಂಚಲೋಹದ ಕುದುರೆ ಮೇಯುಕೆ ಬರತಿತ್ತಲ್ಲ, ಅಕೆ ನೀರು ಮುಟ್ಟಿ ಮ್ಯಾಲೇಳಪ್ಪತ್ತಿಗೆ "ನಾನು ಬರ್ತೆ, ನಾನು ಬರ್ತೆ, ನಾನುಂ ಬರ್ತೇನಿ" ಅನ್ನಕಿಡಿತುಂ. ಯಾಲ್ಡು[5] ದಿವಸದತಂಕ ಹೆದರಿ ಮಾತಾಡ ಲೇಯಿಲ್ಲ. "ಗೌಡಿ ನಾ ನೀರು ಮುಟ್ಟಿ ಮ್ಯಾಲೆದ್ದುಕುಟನೆ ನಾನುಂ ಬರ್ತಿನಿ, ನಾನು ಬರ್ತೀನಿ, ನಾನು ಬರ್ತೀನಿ ಅಂತತೆ. ಏನೈತೊ ಏನೊ ಹೆದರ್ಕೆಯಾ ಕತ್ತೆ ಬಾರೆ" ಅಂತೇಳಿ ಗೌಡಿಗೆ ಕರಕಂಡುಂ ಹೋದಲು. ಅಲ್ಲೆ ಹೊಲದಗೆ ಕುಂತಗಂಡು ನೀರು ಮುಟ್ಟಿ ಬರತಿದ್ದಲು "ನಾನು ಬರ್ತೀನಿ, ನಾನು ಬರ್ತೀನಿ ನಾ ಬರ್ತೀನಿ" ಅಂತುಂ. "ನೋಡೆ ಹೆಂಗಂತತಿ" ಅಂದ್ಲು. "ಬಾ ಅನ್ನು" ಅಂತ ಹೇಳಿಕೊಟ್ಟಲು. "ಬಾ" ಅಂತುಂದಲು. ಆ ಕುದರಿಯೇನುಂ ಮಾಡ್ತು ಬಂತು. ಅಕೆ ಕುಡಗೆ ಹೇಳ್ತತೆ "ನನ್ನ ಒಂದು ಕ್ವಾಣ್ಯಾಗ[6] ಇಡು, ಮತ್ತೆ ದಿನಾ ಎಲ್ಡು ಸೇರು ಕಡ್ಲಿ ತಂದು ಹಾಕು ನನ್ನ ಹಿಕ್ಕೆ ಬಾಚಕೆ ಬ್ಯಾರೆರನ ಹಚ್ಚಬ್ಯಾಡ, ನೀನೆ ಬಾಚು" ಅಂತುಂ. ಆಗಲಿ ಅಂತೇಳಂದಲು ರಾಗಿ ಕೊಟ್ಟು ಕಡ್ಲಿ ತರಿಸಿದಲು, ದಿನಾ ಎಲ್ಡು ಸೇರುಂ ಕಡ್ಲಿ ಇಡಕ್ಕಿ, ಅದುಂ ಒಂದು ಸೇರು ವಜ್ರ, ಒಂದು ಸೇರು ಮುತ್ತು ಹಿಕ್ಕೆ ಹಾಕೊದುಂ. ಏಳು ವರ್ಷದ ರಾಗಿ ಇದ್ವಲ ಹಿಂಗೇ ದಿನಾ ಒಂದ್ಕು ಎಲ್ಡು ಎಲ್ಡು ಸೇರು ರಾಗಿ ಕೊಟ್ಟು ಕಡ್ಲಿ ತರಿಸಿ ಹಾಕಕಿ, ಹಿಕ್ಕೆ ಹಾಕಿದ ವಜ್ರ ಮುತ್ತನ ಸ್ವಾರಿ, ಸೊಪ್ಪಿ[7] ಎಲ್ಲ ತುಂಬಿ ದಲುಂ. ಚೀಲ ಎಲ್ಲ ತುಂಬಿದುವು, ರಾಗಿನು ತೀರತಾ ಬಂದವು. ಕುದುರಿ "ಒಂದು ವಜ್ರದ ಹಳ್ಳು ಕೊಟ್ಟು ಕಡ್ಲಿ ತರಸು, ಜ್ವಾಳ ತರಸು, ಅಕ್ಕಿ ತರಸು

---

5 ಎರಡು

6 ಕೋಣೆ

7 ಮಣ್ಣಿನ ಮಡಕೆ



ಅಂತೇಳಂತುಂ, ಹಂಗಂತ ಬೇಕಾದ್ದೆ ತರಸಕಿಡದಲುಂ. ದಿನಾ ಎಲ್ಡು ಸೇರು ಅಳತಿಂದ ಕಡ್ಲಿ ಇಡೋಳುಂ ಬೆಳಕರತ್ತಿಗೆ ವಜ್ರ, ಮುತ್ತಿನ ಹಿಕ್ಕೆ ಹಾಕೊದು. ಚೀಲ ಚೀಲ ತುಂಬಿಬಿಡ್ತು. ಕುದುರೇನಂತು "ಒಂದೇ ರಾತ್ರಿಗೆ ಒಂಬತ್ತು ಬಾಗಿಲು, ಒಂಬತ್ತು ಕಿಡಕಿ ಇರೊ ಅಂತಹ ಮನಿ ಕಟ್ಟಿಸು, ಒಂದುಂ ಚೀಲ ವಜ್ರ ಕೊಡುಂ" ಅಂತು. ತರಗಾರ್ರೂನಿಗೆ ಕರಸಿದಲು. "ಏನ್ರಪ ಒಂದು ಚೀಲ ವಜ್ರದ ಹಳ್ಳುಕಲ್ಲು ಕೊಡ್ತಿನಿ. ಒಂದೇ ರಾತ್ರಿಗೆ ಒಂಬತ್ತು ಬಾಗಲುಂ, ಒಂಬತ್ತು ಕಿಡಕಿ, ಸೀಮೆಂಟುಂ ಗ್ವಾಡಿ ಎಲ್ಲ ಆಗಿಹೋಗಿಬಿಡಬಕುಂ ಬೆಳಕರಿಯುತ್ತಿಗೆ ಹಂಗೆ ಮಾಡಿ ಕೊಡ್ತಿಯು" ಅಂದಲುಂ. ಮೂರು ತಿಂಗಳುಂ ವಾಯಿದಿ ಕೊಡಮ್ಮ ಅಂದ್ರು. ಮತ್ತೆ ಕಿಡಕಿ, ಬಾಗಲುಂ ಎಲ್ಲ ತಯಾರು ಮಾಡಬೇಕಾತಲ್ಲ, ಸೀಮೆಂಟು, ಗಾರಿ, ಇಟಗಿ ಎಲ್ಲ ತರಬಕಾತಲ. ಮೂರುಂ ತಿಂಗಳುಂ ವಾಯಿಂದಿ ಮಾಡಕೆಂದು ಸಾವಿರಾರು ಮಂದಿಗೆ ಜೋಡಿಸ್ಕೆಂದ, ಎಲ್ಲ ಒಯ್ದು ಹಕ್ಕೆಂದ, ಒಂದೇ ರಾತ್ರಿಗೆ ಅಷ್ಟು ಮನೀನು ತಯಾರಾಗಿ ಹೋತುಂ. ಕುದುರೆ "ಸುತ್ಲು ರಾಜರಿಗೆ ಕರೆ ಕಳುಸುಂ, ಹೊಸ ಮನಿಗೆ ಹೋಗಕೆ" ಅಂತುಂ. ಅಕೇನು ಮಾಡಿ ದಲುಂ, ಸುತ್ತಲ ರಾಜರಿಗು, ಗಂಡಗು ಕಾಗದ ಬರದಲು. ಎಲ್ಲ ಕಡೆ ರಾಜರು ಬಂದರುಂ, ಬೇಕಾದ್ದೆ ಅಡಗಿ ಮಾಡಿಸಿದ್ದಲು, ಉಂಡುಂಡು ಹೋಗಕಿಡದರು. ರಾಜ "ಆಹಾ, ಇಂತಾ ಮನಿ ಕಟ್ಟುಸಬಕರೆ ಅಕಿ ಯಾವನಿಗೆ ಮಾಡಿಕೆಂಡು ದಳೊ, ಅವನಿಗುಂ ಅಕಿಗುಂ ಕೂಡೆ ಕಡದುಂ ಹಾಕಬಕು" ಅಂತೇಳಂದ್ಕಂತಾನೆ. ಇಕೇನು ಮಾಡಿಲು ಗಂಡ ಬಂದುಲ್ಲ, ಎಲ್ಲರೂ ಉಂಡು ಹೋದರು, ಗಂಡನ ಪಾದಪೂಜೆ ಮಾಡಿ ನಾನೂ ಉಣ್ತಿದ್ದೆನಲ ಅಂತಂದ್ಕಂತದಳೆ. ಅವನು ಬಂದು ಒಂದು ಕ್ವಾಣ್ಯಾಗೆ ಮಲಗಿದನೆ, ಇವಳನ ಕಡಿದೇಬಿಡಬೇಕು ಅಂತೇಳಿ. ಆ ಕ್ವಾಣ್ಯಾಗೇ ಕುದುರೆ ಐತೆ, ಇವನುಂ ಮಲಗಿದನೆ. "ಅವ್ವಾ, ಅಪ್ಪ ಬಂದು ಮನಗಿದನೆ, ನೀನು ಮೈತೊಕಂಡು, ಅಪ್ಪಗು ಮೈತೊಳಿಯಾಕೆ ನೀರು ಕೊಟ್ಟು ಉಣ್ಣು ಹೋಗ್ರುವ" ಅಂತೇಳಿ ಕುದುರೆ ಅಂತು. ಆ ಮಾತುಂ ಇವನುಂ ಕೇಳಿದ, "ಆಹಾ ಅಪ್ಪ ಬಂದಿದನೆ ಅಂತರಲ್ಲ" ಅಂತೇಳಿ ಗೌಡಿಗೆ ಕೇಳಿದ. "ಕುದುರಿ ಮಾತಾಡ್ತತೆ, ಯಾರ ಕಣ್ಣಿಗೂ ಕಾಣದಿಲ್ಲ" ಅಂತೇಳಂದಲುಂ, ಅಕೆ ಬಂದು ನೋಡಿದಲುಂ, ಗಂಡ ಮಲಗಿದ್ದ. "ಅಪ್ಪ ಅಂತಲ ಇದುಂ ಏನುಂ" ಅಂತ

ಕೇಳಿದ." "ಅಯ್ಯೊ ಪಂಚಲೋಹದಕುದುರಿ, ಹಿಂಗಿಂಗೆ" ಅಂತ ಎಲ್ಲ ಹೇಳಿದಲು. ಅವಾಗ ಸಂತೋಷದಿಂದ ಗಡಗಡ ಮೈತೊಕ್ಕಂಡ, ಪಾದ ಪೂಜಿ ಮಾಡಿದಲು, ತಾನೂ ಮೈ ತೊಕ್ಕಂಡಲು, ಊಟ ಮಾಡಿದರು. "ನಾನೆಲ್ಲೆಲ್ಲಿ ಇಡಲಿ, ಮನೆಯೆಲ್ಲ ತುಂಬಿ ಹೋಗೇತಿ, ಕುದುರಿಗೆ ಕರಕಂಡು ಹೋಗ್ರಿ" ಅಂದ್ಲು. "ನನ್ನ ಮನಿಗೆ ಬರ್ತತೆನೆ ಅದು" ಅಂದ, "ಚಿಕ್ಕ ಹೇಣ್ತಿ ಬಸುರದಳೆ, ದಿನಾಗಿ ದವೆ ಉಳಕಣುಂಗಿಲ್ಲ, ಹೋಗ್ತಿನಿ" ಅಂದ. "ಬಸುರ್ಯೆದಾಳ" ಅಂದ್ಲು. "ಹೂನೆ ಬಸುರದಾಳೆ." "ಏನರೆ ಆಗಲಿ ನಾ ಮನಿ ಬಿಟ್ಬುದ್ದಕು, ಆಕಿ ಬಸುರಾಗಿದ್ದೊಕು ಭಾಳ ಸುಕ ಆತ್ರಿ" ಅಂತೇಳಿ ಬಾಳ ಸಂತಸಪಟ್ಟಲು. "ಈ ಕುದುರಿಗೆ ಕರಕಂಡು ಹೋಗ್ರಿ" ಅಂದು "ಹೋಗು ನಿಮ್ಮ, ತಂದೇವರು ಕರಿತಾರೆ ಹೋಗಪ್ಪ, ನನಿಗೆ ಇಷ್ಟು ಸಾಕು. ಹೋಗಪ್ಪ" ಅಂದಲು. ಆ ಕುದುರೆ ಅವನ ಜೊತಿಗೋತು. ಅವನಿಗೆ "ಮತ್ತೆ ದಿನಾ ನೀನೇ ಹಿಕ್ಕೆ ಬಾಚಬಕು." ಅಂತು, ರಾಜ ಏನು ಹಿಕ್ಕೆ ಬಾಚೋದು ಅಂತ ಒಬ್ಬ ಹುಡುಗುಗಿಟ್ಟ. ಹುಡುಗುಗೆ "ದಿನಾ ಎಲ್ಡು ಸೇರು ಕಡ್ಲಿ ಹಾಕು, ಬೆಳಿಗ್ಗ ಮುತ್ತು ರತ್ನ ಹಿಕ್ಕೆ ಹಾಕತತೆ, ಅದರಗೇನರೆ ಹಳ್ಳು ಕಲ್ಲು ತಕ್ಕಂಡ್ರೆ ನಿನಿಗೆ ಸೂಲ್ಕೆ[8] ಹಾಕ್ತಿನಿ" ಅಂತಂದ. ದಿನಾ ಒಂದ್ ಸೇರು ಮುತ್ತು ಒಂದ್ ಸೇರು ವಜ್ರ–ಅ ಹುಡುಗ ಕಡ್ಲಿ ತಂದು ಹಾಕಕಿಡಿದ–ಬೇಕಾಧಂಗಾತು.

ಚಿಕ್ಕ ಹೇಣ್ತಿ ಬಸುರಿದ್ದಲು, ಹಿಣ್ಣು ಹುಡುಗಿ ಹಡದಲು. ಆ ಹುಡುಗಿ ದೊಡ್ಡಕಾಗ್ತಾ ಬಂತು. ಬುದ್ಧಿ ಕಲಿತು, ಆಗಲೇ ಹತ್ತು ಹನ್ನೆಲ್ಡು ವರ್ಷದ ಹುಡುಗಿ ಆಗತಾ ಬಂತು, ಆ ಹುಡುಗಿ ಮ್ಯಾಲೆ ಕಣ್ಣಿಟ್ಟು ಬಿಟ್ಟೇತಿದು ಕುದುರೆ. ಎರಡು ಮೂರು ದಿವಸದ ತಂಕನು ಕಡ್ಲಿನು ತಿಂದುಲ್ಲ. ಹಿಕ್ಕಿನು ಹಾಕಿಲ್ಲ. ಹಂಗೆ ತತಕ್ಷ[9] ನಿಂತು ಬಿಟ್ಟೇತಿ. ಅವಾಗ ಯಾಕೊ ಕುದುರಿ

---

8 ಶೂಲಕ್ಕೆ

9 ನಿಂತ ನಿಂತ ಹಾಗೇ ಇರುವುದು,



ಕಡ್ಲಿನು ತಿಂದುಲ್ಲ ಹಿಕ್ಕಿನು ಹಾಕಿಲ್ಲ ಅಂತೇಳಿ ಕೇಳಿಸಿ ನೋಡಿದ. "ಅಪ್ಪಾ ಇದ್ದ ಮಾತು ಇದ್ದಂಗೆ ಹೇಳಲೊ, ಹಿಂಗೆ ಹೇಳಲಿ" ಅಂದ. "ಅಪ್ಪಾ ಇದ್ದುದ ಇದ್ದಂಗೆ ಹೇಳಪ್ಪ" ಅಂದ. "ನಿನ್ನ ಮಗಳ ಮ್ಯಾಲೆ ಕಣ್ಣಿಟ್ಟತಪ, ನಿನ್ನ ಮಗಳು ಕೊಟ್ಟು ಮದುವಿ ಮಾಡಿದರೆ ಅದು ತಿಂತತೆ ಇಲ್ಲಿದ್ರೆ ತಿನ್ನದಿಲ್ಲಪ್ಪ" ಅಂತೇಳಿದ. "ಅಯ್ಯಯ್ಯೊ ಕುದುರಿಗೆಂಗೆ ಕೊಟ್ಟು ಮದುವೆ ಮಾಡಲಪ್ಪ" ಅಂತೇಳಿದ. ಅಂತೇಳಿ ಜಗಲೂರಂತ ಪಟ್ಟಣಕ್ಕೆ ಹೋದ, ಅಲ್ಲಿ ಕೇಳಿಸಿ ನೋಡಿದ. ಅವರೂ ಹಂಗೇ ಅಂದುಬಿಟ್ಟರು. ಅಯ್ಯೋ ದೇವರೆ ಅಂತಂದ ಬಂದ. "ಇರಕಿ ಒಬ್ಬಕ್ಕಿ ಮಗಳು ಕುದುರಿಗೆ ಹಿಂಗೆ ಕೊಡಬೇಕಪ" ಅಂತೇಳಿ ಭಾಳ ಚಿಂತೆಯಿಂದ ಮನಗಿದ್ದ, ಊಟಕ್ಕೆ ಎದ್ದಿಲ್ಲ. ತಾಯಿ ಏನಂದಲು "ಅವ್ವ ಮಗಳೆ, ನಿಮ್ಮ ತಂದೆ ಊಟಕ್ಕೆದ್ದಿಲ್ಲ. ಮುಕ್ಕಂಡಿದರೆ ಯಾಕೊ ಏನೊ ಚಿಂತೆಯಿಂದ ಮನಗಿದರೆ ಕೇಳೋಗು" ಅಂದಲು. "ಅಪ್ಪಾ ಉಂಡಿಲ್ಲಂತಲ್ಲಪ ಯಾಕಪ ಬಾರಪ್ಪ ಉಣ್ಣು" ಅಂತ ಕರದಲು. "ಏನುಣ್ತಿ ಬಿಡವ" ಅಂದ. "ಏನಪ ಅದು, ಏನು ಚಿಂತಿ" ಅದಲು. "ಕುದುರಿ ಕಡ್ಲಿನು ತಿನವಲ್ಲದು, ಹಿಕ್ಕಿನು ಹಾಕವಲ್ಲದು" ಅಂದ. "ಏನಂತೆ ?" "ನಿನ್ನ ಮ್ಯಾಲೆ ಕಣ್ಣಿಟ್ಟುಂತಂತವ" ಅಂದ. "ಅಯ್ಯೊ ಹಂಗಾದ ಮ್ಯಾಲೆ ಆಗಲಪ್ಪ ನಾನು ಮಾಲಿ ಹಾಕತೀನಿ. ಮನಿ ಮುಂದೆ ಹಂದರ ಹಾಕಬ್ಯಾಡ, ಮಗ್ಗಲಿಗೆ ಹಾಕು. ನಾಕು ಮಂದಿ ಕರದು ಅಕ್ಕಿ ಕಾಳು ಹಾಕಿ ಬಿಡ್ರಿ" ಅಂತೇಳಿ ಮಗಳಂದಲು ಅಂತೇಳಿ ಕುದುರಿತಾವ ಹೋಗಿ ಹೀಳಿ ಕಡ್ಲಿ ಇಟ್ಟ ತಿಂತು. ಗಡಗಡ ಎಂಟು ದಿನದಗೆ ಬ್ರಾಮುರಿಗೆ ಕರದ, ಎಲ್ಡು ಹೂಮಾಲೆ ತರಿಸಿದ, ಮೂರು ನಾಕು ಮಂದಿ ಕೂಡಿದರು, ಹೂವಿನ ಮಾಲೆ ಆಕಿ ಕೈಯಾಗೊಂದ್ ಕೊಟ್ಟ, ಅಲ್ಲೊಂದು ಇಟ್ಟ. ಆ ಕುದುರಿ ಹಿಂಗೆ ಹಾಕ್ತತಿ-ಅಂತ ಅಲ್ಲಿಟ್ಟ. ಆ ಕುದುರಿ ಆ ಹೂವಿನ ಮಾಲಿ ಬಾಯಿಂದ ತಗಂತು ಹುಡುಗಿಗೆ ಹಾಕತು. ನಾಕು ಮಂದಿ ಅಕ್ಕಿ ಕಾಳು ಹಾಕಿದರು, ಮದುವಿ ಮಾಡಿಧಂಗೆ ಮಾಡಿದರು.

ಹಿಂಗೇ ಇರತ ಇರತ ಹುಡುಗಿ ರುತುವಾತು. ಹದಿನೈದು ದಿಸಕೆ ಕಾರ್ಯ ಮಾಡಲಿ ಅಂತೇಳಿ ಮತ್ತೂ ಎರಡು ದಿವಸ ಕಡ್ಲಿನು ತಿಂದುಲ್ಲ. ಹಿಕ್ಕೆನು ಹಾಕಿಲ್ಲ, ಮತ್ತೂ ನಿಂತಗುಂಬಿಡ್ತು. ಮದುವಿ ಮಾಡು ಅಂತು,

ಮಾಡಿದೆ. ಈಗ ಕಾರ್ಯವು ಮಾಡಬಕೇನೊ ಅಂತೇಳಿ ಮತ್ತೂ ಕೇಳಿಸಿದ". "ಹೌದು ಕಾರ್ಯವು ಮಾಡಿದರೆ ಅದು ಕಡ್ಲಿ ತಿಂತಂತೆ. ಇಲ್ಲದಿದ್ದರೆ ಇಲ್ಲ. ಅಂತೇಳಿ ಪುರೋಯಿಂತರು ಹೇಳಿದರು. "ಅಯ್ಯೋ ದೇವರೆ, ನನ್ನ ಮಗಳಿಗೆ ಕುದುರಿ ತಾವಕೆ ಹೆಂಗೆ ಕಳಿಸಬೇಕು"ಅಂತೇಳಿ ಭಾಳ ಚಿಂತಿಂದ ಮನಿಕಂಡಿದ್ದ. "ಏನಪ್ಪ ಅದು ಯಾಕೆ ಮಕ್ಕಂಡಿದಿ, ಉಣ್ಣೇಳಪ್ಪ" ಅಂದಲು. "ಹಿಂಗವ, ಕುದುರಿ ಕಡ್ಲಿನು ತಿಂದುಲ್ಲ, ಹಿಕ್ಕಿನು ಹಾಕಿಲ್ಲ" ಅಂದ. "ಏನಂತಪ್ಪ ಮತ್ತೆ" ಅಂದಲು "ಕಾರ್ಯೇವುಮಾಡಬಕಂತೆ, "ಆಗಲಿ ನನ್ನ ಹಣೆ ಬರದಗೆ ಇದ್ದಂಗಕತೆ, ನಾ ಒಬ್ಬಕಿ ಇದ್ದರೇನು, ಸತ್ತರೇನು" ಅಂದಲು, ಗಡಗಡ ಎಲ್ಲ ತಿಂಡಿ ಸಾಮಾನು ಮಾಡೋ ಅಂತೆ ಮಾಡಿದರು. ಎಲ್ಲ ಇಟ್ಟರು, ಅಲ್ಲೊಂದು ಮಂಚ ಹಾಸಿದರು, ಆ ಕುದುರಿ ಪೊಯ್ದು ಕ್ವಾಣ್ಯಾಗೆ ಬಿಟ್ಟರು. ಆ ಕುದುರಿ ನಿಂತುದ್ದು ನಿಂತಂಗೆ ನಿಂತಂತಿ, ಇಕಿ ಮಕ್ಕಂಡಿದಳೆ ಮಂಚದ ಮ್ಯಾಲೆ. ಆಕಿಗೆ ನಿದ್ದೆ ಹತ್ತೊ ತಂಕ ಸುಮ್ಮನೆ ಮಕ ಅತ್ತ ಇತ್ತ ಮಾಡಿಲ್ಲ, ಸುಮ್ಮನೇ ನಿಂತಿತ್ತು. ಅಕಿಗೆ ನಿದ್ದೆ ಹತ್ತಿದ ಮ್ಯಾಲೆ ಆ ತಿಂಡಿಯೆಲ್ಲ ತಿಂತು, ಅಕಿಗೊಂದೀಟು ಬಿಡ್ತು ಮತ್ತೆ ಯಲಡಿಕೆ ಹಕ್ಕಿಂತು, ಕ್ವಾಣೆ ತುಂಬ ಉಗದು, ಆಕಿ ಮೈತುಂಬ ಉಗದು ಮತ್ತೆ ಕುದುರಿ ಹೊಟ್ಟಿಂದ ಬಂದೊನು ಹೊಟ್ಯಾಗೆ ಹೊಕ್ಕಂಡ. ಕುದುರಿ ನಿಂತಂಗೆ ನಿಂತತೆ, ಮೈತುಂಬ ಉಗುಳು ಐತೆ, ತಿಂಡಿ ಸಾಮಾನು ತೀರೇತೆ, ಇದೇನಿದು ಅಂತೇಳಿ ಬೆಳಕರದು ಎದ್ದು ಹೋಗತಳೆ "ಇದೇನವ್ವ ಮೈತುಂಬ ಉಗಳು" ಅಂತ ತಾಯಿ ಕೇಳತಳೆ. "ಅಮ್ಮ ನನಗಂತು ಗುರತಿಲ್ಲ, ಕುದುರಿ ನಿಂತಿದ್ದು ನಿಂತಂಗೆ ನಿಂತಿತ್ತು." ಅಂತೇಳಂದಲು, "ಇವತ್ತು ಯಾರು ಬರತರೆ ಅನ್ನದ ನೋಡು" ಅಂತೇಳಿ ಅಂದಲು, ಅವತ್ತು ಹನ್ನೆರಡು ಗಂಟೆ ತನನು ಎಚ್ಚರಿದ್ದಲು, ಮತ್ತು ಆಕಿಗೆ ನಿದ್ದೆ ಬಂದುಬಿಡ್ತು. ಅಕಿಗೆ ನಿದ್ದೆ ಬರೊದ್ಕು, ಇವನು ಹೊಟ್ಟೆಯಾಗಿಂದ ಹೊರಕಬಂದು ತಿಂಡಿತಿಂದು, ಯಲಡಿಕೆ ಹಕ್ಕಿಂದು ಮತ್ತೂ ಮೈತುಂಬ ಉಗುಳಿ ಹೋಗಿ ಹೊಕ್ಕಂಬಿಟ್ಟ. "ಇವತ್ತೂ ಹಿಂಗೇ ಆಗಿ ಹೋತಲೆ ತಾಯಿ" ಅಂದುದ್ಕೆ "ಹನ್ನೆಲ್ಡು ಗಂಟೆ ತನಕ ಎಚ್ಚರಿತ್ತವ, ಆವ್ಯಾಲೆ ನಿದ್ದೆ ಬಂದು ಬಿಡ್ತು," "ಇವತ್ತಾರೆ ಯಾರು ಬರತಾರೆ ಅಂತ ನೋಡು, ತಿಂಡಿನು ತಿಂತರೆ, ಯಲಡಿಕೆ ಹಕ್ಕಿಂದು ಮೈತುಂಬ ಉಗುಳಿಯು



ಹೊಕ್ಕರೆ, ನಿನಿಗೆಚ್ಚರಿರದಿಲ್ಲೆನೆ" ಅಂತೇಳಿ ಚೂಜಿ ತಗಂಡು ಕೈಗೆ ಬರಿ[10] ಬಿಟ್ಟಲು. "ತಟ ತಟ ಅಂತತಿ ಎಚ್ಚರಿರತದಿ, ಮತ್ತ ನೋಡು ಯಾರು ಬರತರೆ ಅನ್ನೋದ" ಅಂದಲು. ಅದೇನಾತು ಕೈಯಿ ತಟ ತಟ ಅಂತಿತ್ತಲ, ಇಕಿ ನಿದ್ದೆ ಹತ್ತಿ ಮಕ್ಕಂಡಂಗೆ ತೆಲಿಗಿಂಬಿಗೆ ಕೈಯಿಟಗಂಡ್ಲು ಮನಿಕೆಂಡಲು. ಕುದುರಿ ಬಂದು ನಿಂತಗಂತು, ಅಕಿಗೆ ನಿದ್ದೆ ಹತ್ತತೆ ಅಂತ ಹೊಟ್ಯಾಗಿಂದ ಬಂದು ಎಲ್ಲ ತಿಂಡಿ ತಿಂದುಕೋಂತ ಕುಂತಿದ್ದ ರಾಜನ ಮಗ. ಬೇಕಾದಂಥ ಬಟ್ಟೆ ಬರಿ ಹಾಕ್ಕಂಡಿದಾನೆ, ಒಳ್ಳೆ ಇಪ್ಪತ್ತು ವರ್ಷದ ಮಗ. ಇಕೇನು ಮಾಡಿದಲು ಹಂಗೆ ಮೆಲ್ಲಕೆ ಕಣ್ಣುಬಿಟ್ಟು ನೋಡಿದಲು, ತಿಂಡಿ ತಿಂದಕಂತ ಕುಂತಿದ್ದ ಗಡ ಗಡ ಕುದುರಿ ಚೀಲಯಿತ್ತಲ್ಲ ತಗದು ಮ್ಯಾಲೆ ಒಗಾಸಿಬಿಟ್ಟಲು. "ಅಹಾ ನೀವು ಕುದುರಿ ಹೊಟ್ಯಾಗಿದ್ದು, ಕುದುರಿ ಮದುವ್ಯಾದಲು ಅಂತ ನೆರೆಹೊರ್ಕೆಲ್ಲ ಅನ್ನಕೆ ಇಂತ ಕೆಲಸ ಮಾಡತಿರಿ ಹೌದ ?" ಅಯ್ಯೊ ಇನ್ನು ಮುಂದೆ ಏನಾಗತ್ತಿತ್ತೊ, ನೋಡಬಹುದಿತ್ತು, ನೀನು ನನ್ನಂಗಿ ಯಾಕೆ ಒಗದೇ" ಅಂತಂದ. ಬೆಳಕರಿತು ಈಕೆ ಸಂತೋಷದಿಂದ ಎದ್ದು ಅವನಿನ್ನು ಮಲಗಿದ್ದ ಬಾಗಲಕ್ಕೆಂದು ಹೋದಲು. ಅವರವ್ವ "ಯಾರು ಬಂದಿದ್ದರೆ ತಾಯಿ" ಅಂದಲು "ಬಿಡೆ ನಮ್ಮವ್ವ, ಯಾರು ಬರತಾರೆ, ಆ ಕುದುರಿ ಹೊಟ್ಯಾಗೇ ಅದಾರೆ ರಾಜರು, ಅದಕಾಗಿ ಅಷ್ಟೆಲ್ಲ ಇದುಮಾಡಿದರು" ಅಂತೇಳಂದಲು, ಅವಾಗ "ನೋಡತಿವಿ ಎಬ್ಬಿಸಿ ಬಾ ಹೋಗೆ," "ನಿದ್ದೆ ಹತ್ತೇತಿ" ಅಂದಲು. 'ಇರಲಿ ಹೋಗವ್ವ" ಅಂತ ಅಂದಕಂತ ಬಂದರು, ಅವನು ಎದ್ದು ಕುಂತಿದ್ದ. ಬಾಗಲು ತಗದು ನೋಡಿದರು. ಬಂದ, ತಂದಿಗು ತಾಡಿಸಿದ, ತಾಯಿಗು ನಮಸ್ಕಾರ ಮಾಡಿದ "ಮುಂಚೆ ತಂದೆ ತಾಯಿ ಆಗಿದ್ದಿರಿ. ಈಗ ಅತ್ತೆ ಮಾವ ಆಗಿದ್ದಿರಿ" ಅಂದ. "ಮದುವಿ ಮಾಡ್ತಿನಪ್ಪ" ಅಂತೇಳಂದ. "ನಮ್ಮವ್ವಗೆ ಕರಕಬಂದರೇ ನಾ ಮದುವಿ ಆಕಿನಿ ಇಲ್ಲಿದರೆ ನಾ ಮದುವ್ಯಾಗದಿಲ್ಲ" ಅಂತೇಳಂದ. ಅಕಿಗೋಗಿ ಇಕೇ ಕರಕಂಬರಬಕು. ಮನೆ ಬಿಟ್ಟು ಓಡಿಸಿದ್ದಲಲ ಆಕೇ ಕರಕ ಬಂದರೆ ಸೈ ನಾ ಮದುವ್ಯಾಗದು" ಅಂತ ಕುಂತಗಂದ. ಬೇಕಾಧಂಗೆ ಪಲ್ಲಕ್ಕಿ

---

10 ಗೆಬರು - ಗಾಯಮಾಡು

ತಗಂಡು ಬೇಕಾದ್ದೆ ದಂಡು ದರ್ಬಾರು ತಗಂಡು ಆಕಿ ಮನಿಗೋಗಿ "ಅಕ್ಕ ಬಾರಕ್ಕ" ಅಂತೇಳಿ ಕರಕಂಡು ಬಂದರು. ಎಲ್ಲ ರಾಜರಿಗು ಕಾಗದ ಪತ್ರ ಹಾಕಿ ಮದುವಿಗೆ ಕರೆಕಳಿಸಿ ಬೇಕಾಥಂಗೆ ಮದುವಿ ಮಾಡಿದರಂತಪ, ಗಂಡ ಹೇಣ್ತಿ ಸುಖದಿಂದ ಇದ್ದರಂತೆ.

---

# ದೇವರು ಇದ್ದಾನ

ಹಿಂದಕ ಒಂದಾನೊಂದು ಊರಾಗ, ಭಾಳಾ ಬಡತನದ್ದು ಒಂದು ಮನ್ಯಾಗ, ಗಂಡಾ-ಹೆಂಡತಿ ಅವರಿಗೊಂದು ಮಗಾ ಹಿಂಗ ಇದ್ರು. ಬಡವರಾದ್ರೂ ದೇವರು ದಿಂಡ್ರು ದಾನ–ಧರ್ಮಾ ಅಂತ ಒಳ್ಳೇರೀತಿಂದ ಇರ್ತಿದ್ರು. ಅವರ ಮಗನು ಸಹ ಅವರಂಥಾ ಸ್ವಭಾವದವನಾಗೆ ಬೆಳೀತಿದ್ದಾ. ಅವರ ಮನಿ ಮಗ್ಗಲ್ದಾಗ ಅವನ ಚಿಕ್ಕಪ್ಪ-ಚಿಕ್ಕವ್ವ ಅವರ ಮಕ್ಕಳು ಇರ್ತಿದ್ರು. ಅವ್ರು ಬಡತಾಸ್ದಾಗ ಇದ್ರೂ ಭಾಗಾದಿತನ ಸಾಧಸ್ತಿದ್ರು.

ಇದನಾವ್ದೂ ತಿಳದ ಈ ಹುಡುಗಾ ಅವರ ಮನೀಗೆ ಹೊಗೋದು ಬರೋದು ಮಾಡ್ತಿದ್ದ. ಒಂದಿನ ಅವ್ರ ಮನ್ಯಾಗ ಜಾತ್ರ್ಯಾಗ ಚಂದ ಚಂದ ಸಾಮಾನು ಹುಡುಗರಿಗೆ ಖರೀದಿ ಮಾಡ್ಕೊಂಡು ತಂದಿದ್ರು, ಈ ಹುಡ್ಗಾ ಆ ಸಾಮಾನೆಲ್ಲ ಆಶ್ಚರ್ಯದಿಂದ ಸಂತೋಷದಿಂದ ಕೈಯಾಗ ಹಿಡಕೊಂಡು ನೋಡ್ತಿದ್ದಾ. ಆಗ ಅವ್ರ ಚಿಕ್ಕವ್ಮಾ ಆ ಮಕ್ಕಳೂ ಕೂಡೆ, ಏ ಹೋಗೋ ದರಿದ್ರಾ, ನೀನೂ ನಿಮ್ಮಪ್ಪನ ಕೂಡೆ ತರ್ಸ್ಗೊ ಹೋಗು, ಅಂತ ಕವಕ್ಕನ ಹರಕೊಂಡ್ರು. ಅಷ್ಟೊತ್ತಿಗೆ ಅವನ ಚಿಕ್ಕಪ್ಪನೂ ಬಂದು, ಅವರಪ್ಪಾ ಅವಗ ತಂದಕೊಟ್ಟಾ, ಇವ ಕಂಡಾ, ಅವಕ್ಕ ಒಂದ್ಹೊತ್ತಿಗೆ ಇದ್ರ ಇನ್ನೊಂದ್ಹೊತ್ತಿಗೆ ಇಲ್ಲ ಅಂತ ಹೀಗಳೆದು ನಗಾಡಿದರು. ಅದಕ್ಕ ಆ ಚಿಕ್ಕಮ್ಮ ಅದ್ಯಾಕ್ ಅವ್ರವ್ವ ಯಾವಾಗ ನೋಡಿದ್ರೂ ದೇವ್ರಿದ್ದಾನ ದೇವ್ರಿದ್ದಾನ ಅಂತಿರ್ತಾಳಲ್ಲ ಒಳ್ಳೇ ಶರಣೆಹಂಗ, ಆ ದೇವ್ರನ್ನ ಕಂಡು ಕೇಳಿ ತರ್ಸಿಗೊ ಹೋಗು ಬೇಕಾರ ಅಂದಳು.

ಅವ್ರು ಆಡೋಮಾತು ಕೇಳಿ ಆ ಮಗ್ಗ ಭಾಳ ದುಃಖ ಆತು. ಮತ್ತ ಒಂದು ವಿಚಾರಾನು ಬಂತು ಅಲ್ಲಾ ? ಇವ್ರ್ಹೇಳೋದು ಖರೇನ ನಮ್ಮವ್ವ ಯಾವಾಗೂ ಎಲ್ಲದ್ಕೂ ದೇವ್ರಿದ್ದಾನ ಅಂತ್ಮನ ಅತ್ತಿರ್ತಾಳಲ್ಲಾ ಸರಿ ಹಂಗಾರ ನಾನು ಅವ್ವನ ಕೇಳಿ ದೇವ್ರ ಹತ್ರ ಬೇಕ ಬೇಕಾದ್ದು ಸಾಮಾನು ಪಡಿಬಹುದಲ್ಲಾ ಎಂದು ಚಟ್ನಂತ ಎದ್ದು ಮನೀಗೆ ಬಂದಾ ಅಷ್ಟೊತ್ತಿಗೆ ಅವ್ನವ್ವ ಊಟಕ್ಕ ಎಲಿ ಹಾಕಿ ಕೂತಿದ್ಲು, ಬಾರಪ್ಪಾ ಊಟಕ್ಕ ಇಷ್ಟೊತ್ತನಾ ಎಲ್ಲಿ ಹೋಗಿದ್ದಿ ಅಂತ ಕೇಳಿದ್ಲು ಆಗ ತಾನು ಚಿಕ್ಕಪ್ಪನ ಮನೀಗೆ ಹೋಗಿದ್ದು ಅಲ್ಲಿ ಅವ್ರು ಆಡಿದ್ದು ಎಲ್ಲಾ ಹೇಳಿ ಅವ್ವಾ ಹಂಗಾರ ದೇವ್ರು ಎಲ್ಲಿದ್ದಾನವ್ವ ನನ್ಗ ತೋರ್ಸು ಅವಾ ಬೇಡಿದ್ದೆಲ್ಲಾ ಕೊಡತಾನ ಅಂತೀದಿ. ನಾನು ಏನ ಬೇಕ ಅದ್ನ ಕೇಳಿ ಇಸ್ಗೋತೇನಿ" ಅಂದ. ಹುಚ್ಚಪ್ಪ ಅವ್ನ ಕೇಳೋರು ನಾವೊಬ್ರು ಅಲ್ಲ. ಆ ದೇವ್ರು ಎಲ್ಲಾರದು ಸುಖ ದುಃಖ ನೋಡ ಬೇಕಾಗ್ತದ. ಅದ್ಕ ಧೂರ ಅಡವ್ಯಾಗ ಪರ್ವತದ ಮ್ಯಾಲ ಕೂತಿರ್ತಾನ, ದಿನಾ ನಾವು ಅವನ ಧ್ಯಾನಾ ಮಾಡ್ಕೋತ ಇದ್ರ ನಮಗ ಕಂಡಕಾಣ್ತಾನ ಬೇಡಿದ್ದ ಕೊಟ್ಟ ಕೊಡ್ತಾನ ಬಿಡು ಈಗ ನಡಿ ಮುದ್ಲ ಊಟಮಾಡು ಅಂದ್ಲು.

ಅವ್ವಾ ಹಂಗಾರ ನಾನು ದೂರ ಅಡವ್ಯಾನ ಪರ್ವತಕ್ಕ ಹೋಗಿ ದೇವ್ರನ್ನ ನೋಡಿಕೊಂಡ ಬರೋನಿ ಅಂದಾಗ ಘಾಬರಿ ಆಗಿ ಅವ್ರವ್ವ ಛೇಹುಚ್ಚಪ್ಪಾ ನೀ ಇನ್ನೂ ಸಣ್ಣವ ಇದ್ದೀ ಅಲ್ಲೆ ಹುಲಿ ಕರಡೀ ಇರ್ತಾವ. ಹಂಗೆಲ್ಲಾ ಹೋಗ್ಬಾರ್ದು" ಅಂತ ಎಷ್ಟು ಹೇಳಿದ್ರೂ "ನಾ ಹೋಗೇ ತೀರ್ತೇನಿ" ಅಂತ ಹಟಾ ಹಿಡಿದ. ಆಗ ತಾಯಿ ಉಪಾಯ ಇಲ್ದ ಮಗನಿಗೆ ಊಟಕ್ಕ ಹಾಕಿ ದಾರಿಲಿ ಇರ್ಲಿ ಅಂತ ರೊಟ್ಟಿ ಬುತ್ತಿ ಗಂಟಕಟ್ಟಿಕೊಟ್ಲು.

ತಂದಿ– ತಾಯಿ ಪಾದಕ್ಕೆರಗಿ ದೇವರಧ್ಯಾನಾ ಮಾಡ್ಕೋತಹೊಂಟಾ. ಎರಡ್ಮೂರು ಹರದಾರಿ ನಡೆಹೊತ್ಗೆ ಅಲ್ಲೆ ಒಂದು ಕೆಸರ ಹೊಂಡದಾಗ ಒಂದು ಆಕಳಾ ಅದರ ಕರಾ ಹುದ್ಲಾಗ ಸಿಕ್ಕೊಂಡು ಅಂಬಾ ಅಂಬಾ ಅಂತ ದೈನಾಸದಿಂದ ಒದರ್ಲಿಕೆ ಹತ್ತಿದ್ವು. ಈ ಹುಡ್ಗಾ ನಿಂತ ನೋಡ್ತಾ, ಅಯ್ಯೊ ! ಪಾಪ ಎಷ್ಟು ಕಷ್ಟಪಡ್ತಾವಲ್ಲಾ ಎಂದು ಅಲ್ಲಿ ಇಲ್ಲಿ ಹುಡುಕಿ ಬಳ್ಳಿ ಕಿತ್ತಿ ಹಗ್ಗಾ ಮಾಡಿ ಆ ಆಕಳಾ ಕರೂಗೆ ಕಟ್ಟಿ ತನ್ನ ಶಕ್ತಿ ಮೀರಿ ಎಳದಾ. ಆಕಳೂ



ಸಹ ಸಾಧ್ಯವಿದ್ದಷ್ಟು ಶ್ರಮಪಟ್ಟು ಕೆಸರಾಗಿಂದ ಕಾಲಕಿತ್ಗೊಂಡು ಮ್ಯಾಲ ಬಂದ್ವು. ಆಗ ಆ ಆಕಳು ಅಂತು, ಯಾವ ಪುಣ್ಯಾತ್ಮನಪ್ಪಾ ನೀನು, ದೇವ್ರು ಬಂದ್ಹಂಗ ಬಂದಿ. ನಿನ್ನ ಉಪಕಾರಾ ನಾ ಹ್ಯಾಂಗ ತೀರಸ್ಲಿ. ಇವತ್ನಿಂದ ನಾನು ನಿಮ್ಮನಿಗೆ ಬಂದು ನನ್ನ ಹಾಲೆಲ್ಲ ನಿನಗs ಕೊಡ್ತೇನಿ. ನಿನ್ನ ಜೊತೆ ನನ್ನೂ ಕರಕೊಂಡು ಹೋಗು ಅಂತು. ಅದ್ಕ ಆ ಹುಡ್ಗಾ "ಇಲ್ಲ ಗೋಪಮ್ಮಾ ನಾನೀಗ ದೇವ್ರನ್ನ ಕಾಣ್ಲಿಕ್ಕೆ ಹೊಂಟೇನಿ" ಅಂದಾ. "ಹಂಗ ಆಗ್ಲಿ ನೀ ಬರೋತನ್ಕ ನಾನಿಲ್ಲೆ ಕಾಯ್ತಿರ್ತೇನೀ ನೀ ಹೋಗಿ ಬಾ" ಎಂತ ಹೇಳ್ತು.

ಅಲ್ಲಿಂದ ಹಂಗ ಮುಂದ ಮುಂದ ನಡದ. ಭಾಳ ಧೂರ ಹೋಗ್ತಾ ಹೋಗ್ತಾ ಅಲ್ಲೊಂದು ಮಾವಿನ ಮರಾ ಕಾಣ್ತು. ಅದರ ತುಂಬ ದೊಡ್ಡ ದೊಡ್ಡ ಮಾವಿನ್ಹಣ್ಣು ಗೊಂಪೆಗೊಂಪ್ಯಾಗಿ ಝೀಕರ್ಸಿತಿದ್ವು. ಇವಗೂ ಅಷ್ಟೊತ್ತಿಗೆ ಭಾರೀ ಹಸಿವಿ ಆಗ್ಲಿಕ್ಕೆ ಹತ್ತಿತ್ತು. ಒಂದ ಹಣ್ಣ ಹರಕೊಂಡು ತಿನ್ನೋಣ ಅಂತ ಸಿಪ್ಪೀ ತಗೀತಾನ, ಒಳಗೆಲ್ಲಾ ಹುಳಾ ಬುಕು ಬುಕು ಅಂತಿದ್ವು. ಮತ್ತೊಂದು ಮತ್ತೊಂದು, ಅಂತಾ ನೋಡೇ ನೋಡ್ದಾ ಎಲ್ಲಾದ್ರಾಗೂ ಹುಳಾ ಥೂತ್ ! ಎಂದು ಹಣ್ಣ ಬಿಸಾಕಿ ಎದ್ದಾ. ಅಷ್ಟೊತ್ತಿಗೆ ಮಾವಿನ ಮರಾ ಮಾತಾಡ್ತು "ಅಪ್ಪಾ ಮಗನೆ, ಈ ಇಡೀ ಮಾವಿನ ಮರದಾನ ಹಣ್ಣೆಲ್ಲ ಹೀಂಗ ಅವ ನೋಡು. ಒಂದ್ಹಕ್ಕಿ ಪಕ್ಷಿ ಕೂಡ ಕೊಕ್ಕೀಲೆ ಕುಕ್ಕಿ ರುಚಿ ನೋಡಾಂಗಿಲ್ಲ. ನಾನು ಏನು ಪಾಪಾ ಮಾಡೇನೊ ಏನೋ ಬಿಡು. ಅದು ಸರಿ ಇಂಥಾ ಅಡವ್ಯಾಗ ಈ ಬಿಸಲಾಗ ನೀನೆಲ್ಲಿಗೆ ಹೊಂಟೀದಿ" ಅಂತ ಕೇಳ್ತು. "ಎಲ್ಲೀ ಬಿಸಲು, ಎಲ್ಲೀ ಮಳೆ ನಾನೀಗ ದೇವ್ರನ್ನಕಾಣ್ಲಿಕ್ಕೆ ಹೊಂಟೇನಿ" ಅಂದ. ಆಗ ಆ ಮರಾ ಆತಪ್ಪ ಆ ದೇವ್ರು ನಿಂಗ ಕಂಡರ ನನ್ನ ಪಾಪದ ಕಥೀನೂ ಕೇಳಕೊಂಡು ಬಾ ಅಂತು. "ಹುಂ ಆಗಲಿ" ಅಂತ ಬೀಸಗಾಲ ಹಕ್ಕೋತ ನಡದ. ಮೈಯೆಲ್ಲ ಬೆವರ ಸ್ನಾನಾ ಆಗಿತ್ತು. ನೆತ್ತಿ ಸುಡೋ ಬಿಸಿಲು. ಆ ಪರಿ ದಾರಿ ನಡಿಬೇಕಾರ ಹಾದಿ ಮಗ್ಗಲದಾಗ ದೊಡ್ಡದೊಂದು ಮುಂದಿ ಸರ್ಪ. ಜಡ್ಡಿನಿಂದ ನೆಳ್ಳಕೋತ ಲಗೂನ ನನಗ ಸಾವರ ಬರವಲ್ದಲ್ಲಾ ಅಂತ ಹಲಿಬ್ಕೋತ ಬಿಸಿಲಿನ ತಾಪಕ್ಕ ವಿಲಿವಿಲಿ ಒದ್ದಾಡಕೋತ ಮಲಗಿದ ಹಾವನ್ನ ಕಂಡ. ಇದನ್ನ ಇನ್ನ ಹ್ಯಾಂಗ ದಾಟಿ ಹೋಗೋದು ಅಂತ ಯೋಚ್ನಿ

ಮಾಡಿಕೋತ ನಿಂತ. ಆ ಹಾವು ಈ ಹುಡುಗನ್ನ ನೋಡಿ "ಏ ತಮ್ಮಾ, ನನಗ ದಾರಿಬಿಟ್ಟು ಹೋಗೋಷ್ಟು ತ್ರಾಣ ಸಹ ಇಲ್ಲ. ಒಂದು ಕೋಲು ತೊಗೊಂಡು ಅತ್ಲಾಗ ದೂಡಪ್ಪಾ. ನಾನೀಗ ಏನೂ ಮಾಡೋದಿಲ್ಲ" ಅಂದು "ಈಗ ನೀನೆಲ್ಲಿ ಹೋಗ್ತಿದಿ" ಅಂತ ಕೇಳ್ತು. ಕೋಲಿನಿಂದ ಹಾವನ್ನು ಅತ್ಲಾಗ ಸರಿಸುತ್ತಾ "ನಾ ದೇವರನ ಕಾಣ್ಲಿಕ್ಕೆ ಹೊಂಟೇನಿ ನಾಗಣ್ಣಾ" ಅಂದ. "ಹಂಗಾರ ದೇವ್ರು ಗೀವ್ರು ನಿನಗ ಕಂಡ್ರು ನನಗ ಯಾವಾಗ ಸಾವು ಬರ್ತದ ಅಂತ ಕೇಳಿಕೊಂಡು ಬಾ ಹಂಗಾರ"ಅಂತು. 'ಹುಂ ಆಗಲಿ' ಅಂತ ಹೇಳಿ ಮುಂದ ಮುಂದ ದಾರಿ ನಡೆದಾ. ಇಳೀ ಹೊತ್ತಾತು ಬಿಸಲಾಗ ನಡ್ದದ್ದಕ್ಕ ಬಾಯಾರಿಕಿ ಜಾಸ್ತಿ ಆಗಿತ್ತು. ನೀರಿಗಾಗಿ ಅತ್ತ-ಇತ್ತ ಸುತ್ತಾಡ್ದಾಗ ಅಲ್ಲಿ ಒಂದು ನೀರಿನ ಕೊಳಾ ಕಾಣಿಸ್ತು.

ಸಂತೋಷದಿಂದ ಕೊಳ್ದಾಗಿಳ್ದು ಹೊಟ್ಟಿ ತುಂಬಾ ನೀರಕುಡ್ದಾ. ದಾಹ ಎಲ್ಲಾ ತಣ್ದು ಹೊಟ್ಟಿ ತುಂಪಾತು. ಆಹಾ ಎಂಥಾ ಸಿಹಿ ನೀರವ. ತೆಂಗಿನ ಹಾಲ ಆಗ್ಯಾವ. ಯಾವ ಪುಣ್ಯವಂತರು ಕಟ್ಸಿದ್ದಾರು ಅಂತ ಉದ್ಗಾರ ತಗದ. ಅಷ್ಟರಾಗ ಆ ಕೊಳಾ ಮಾತಾಡ್ತು "ಅಪ್ಪಾ ಹುಡುಗಾ ನೀನೆಲ್ಲ ಆನಂದ ಪಟಿ ಖರೆ ಆದ್ರು ನನ್ನ ಹಣೇಬರಾ ಕೇಳು. ಇಷ್ಟು ಜಳಾ ಜಳಾ ತುಳುಕಾಡೊ ನೀರು ರಾತ್ರಿ ಆಗೋಣ ತಳಾ ಕಂಡು ಒಂದು ತೊಟ್ಟು ನೀರಿಲ್ದಂಗ ಒಣಗಿ ಗಾರ ಆಗ್ತದ ನನ್ನಹೊಟ್ಟಿ ಅದು ಏನು ನನ್ನದುರ್ದೈವನೊ ಏನೊ, ನಿನಗ ಏನಾರ ದೇವ್ರು ಕಂಡ್ರು ಕೇಳಿಕೊಂಡು ಬಾ" ಅಂತು. "ಆತ ಗಂಗಮ್ಮಾ ನಾನೆಲ್ಲ ಕೇಳಿಕೊಂಡು ಬರ್ತೇನಿ" ಅಂತ ಹೇಳಿ ಮತ್ತ ದಾರಿ ತುಳಿಲಿಕ್ಕೆ ಹತ್ದಾ, ಹೋಗ್ತಾ ಹೋಗ್ತಾ ಆಲ್ಲೊಂದು ಹೊಲಾ.

ಅಷ್ಟಕ್ಕಷ್ಟ ಬೆಳಿ ಕಾಣ್ತಿತ್ತು ಇಂಥಾ ಅಡವ್ಯಾಗ ಹೊಲಾನು ಬ್ಯಾರೆ ಅದ ಅಲ್ಲ ಅಂತ ಯೋಚ್ನಿ ಮಾಡ್ತಾ ಹೊಲದ್ದಾರಿ ಹಿಡದ. ಅಲ್ಲಿ ಒಂದು ಗುಡಸಲಾ. ಅದರಾಗ ಒಂದು ಮುದುಕಾ ಮುದುಕಿ ವಾಸ ಇದ್ರು. ಈ ಹುಡುಗನ್ನ ನೋಡಿ ಮುದುಕಾ ಬಾ ಒಳಗಾ ಅಂತ ಕರದ. 'ನಮುಗಂಟಗಾ ಸಾಲ್ದುವಂತ್ತಿವ ನಾಕ ಕರಿತೀರಿ ಅಂತ ಮುದುಕಿ ಒದರಾಡ್ತು 'ಕಾಲು ತೊಳ್ಯಾಕ ನೀರು ಕೊಡು' ಎಂದ ಮುದುಕಾ. ಮುದುಕಿ 'ಉಹೂಂ' ಎಂತು. ಅಲ್ಲಿ ಎಲ್ಲಿ ಹುಡ್ಕಿದ್ರು ನೀರ



ಇಲ್ಲ. ಅಂಥಾದ್ರಾಗನ ಆ ಮುದಿಕಿ ಎಲ್ಲೊ ಆಲೆದು ಮೂರ ತಂಬಿಗಿ ಬ್ಗರ ತರ್ತಿತ್ತು. ಎರಡ ತಂಬ್ಗಿ ಇಬ್ಬರಿಗೂ ಕುಡೀಲಿಕ್ಕೆ, ಒಂದ ತಂಬಿಗ್ಯಾಗ ಇಬ್ರೂ ಕೈ ಕಾಲ ಮುಖಾ ತೊಳೀಲಿಕ್ಕೆ. ಪಾಪ ಆ ಮುದಕಾ ತನ್ನ ಪಾಲಿನ್ನೀರ ಆ ಹುಡುಗ್ಗ ಅರ್ಧಾ ಕೊಟ್ಟಾ. 'ರೊಟ್ಟೀ ಕೊಡು ಈ ಮಗಗ' ಅಂದ ಆದ್ರೂ 'ಉಹುಂ' ಅಂದ್ಲು ಎಣಿಸಿ ನಾಕ ಭಕ್ರಿ ಮಾಡ್ತಿದ್ಲು. ಎರಡು ತನಗ, ಎರಡು ಮುದ್ಕಗ. ಆತಾ ತನ್ನ ಪಾಲಿನ ಭಕ್ರ್ಯಾಗ ಒಂದು ಕೊಟ್ಟಾ ಅಷ್ಟೊತ್ತಿಗೆ ಕತ್ಲಾತು ಆದ್ಕ ಆ ಮುದ್ಕಾ ಇನ್ನ ನೀ ಹೋಗ ಬ್ಯಾಡಪ್ಪಾ ದಾರ್‍ಯಾಗ ಹುಲಿ ಕಿರುಬಾಯಿರ್ತಾವ ಅಂತ ಉಳಿಸ್ಕೊಂಡಾ ಆದ್ರು ಆ ಗುಡಸಲ್ದಾಗ ಇಬ್ರು ಮಲಗಷ್ಟು ಜಾಗಾಯಿತ್ತು. ಅದನ್ನ ಯೋಚ್ನಿ ಮಾಡಿ ಮುದ್ಕಾ ಹೇಳ್ತ ಮಗಾ ನೀನು ಒಳಗ ಮಲ್ಕೊ ನಾ ಗುಡಸಲ್ದ ಹೊರಗ ಮಲ್ಕೋತೇನಿ ಅಂದ ಆ ಹುಡುಗ ಇಲ್ಲಜ್ಜಾ ನಾನು ಇಷ್ಟು ದಿನಾ ಹಗಲು ರಾತ್ರಿ ಸುದ್ದಿಲ್ದ ನಡ್ದೇನಿ. ನನಗೇನು ಆಗಾದಿಲ್ಲ ನೀನ ಒಳೀಗೆ ಮಲ್ಕೊ ಎಂದ. ಎಲ್ಲಾದ್ರೂ ಉಂಟೆ ಅಪ್ಪಾ ಹುಲಿಗಿಲಿ ಎಳ್ದರ ನಾ ಕಣ್ಣಿಂದ ನೋಡ್ಲಾರೆ ನಾನು ಮುದುಕಾ ನಂದೇನೈತೆ ಎಂದು ತಾನು ಹೊರಗ ಗುಡಿಸಿಲದ ಕಟ್ಟೀ ಮ್ಯಾಲ ಮಲಗಿದಾ ಈಗೂ ಮುದಿಕಿ ಭಾರಿ ಒದರಾಡ್ತು. ಬೆಳಕ್ಹರದು ಹೊರಗ ನೋಡೋದ್ರಾಗ ಮುದ್ಕ ಇಲ್ಲ. ಆ ರಾತ್ರೀನ ಹುಲೀನೊ ಕಿರುಬನೊ ತಿಂದ್ಹಾಕಿ ಬಿಟ್ಟಿತ್ತು. ಮುದ್ಕಿ ಗೋಳೊ ಎಂದು ಅತ್ಲು. ದೂರೆಲ್ಲೊ ಕಾಡ್ಗಿಚ್ಚು ಉರಿತಿತ್ತು. ಹೋಗಿ ಅದ್ರಾಗ ಹಾರಿಕೊಂಡು ಪ್ರಾಣಾ ಬಿಟ್ಲು. ಇದ್ನೆಲ್ಲ ನೋಡಿ ಹುಡುಗ ರಂಗಾಲಾದ ನಾನ್ಯಾಕಾರು ಇಲ್ಲಿಗೆ ಬಂದಿದ್ದೇನು ನನ್ನಿಂದ ಇವ್ರಿಗೆ ಈ ಗತಿಯಾಯ್ತು ಎಂದು ತನ್ನನ್ನೆ ತಾನು ಬೈಕೊಂಡ. ಆತು ಇನ್ಹಂಗ ಮಾಡೋದು ನಾನಾದ್ರೂ ದೇವ್ರನ್ನ ಕಾಣ್ಲಿಕ್ಕೆ ಹೋಗ್ಬೇಕು ಈ ಮುದ್ಕ್ಯಾನ ಹೊಲಾ ಈ ಗುಡಸಲಾ ಯಾರಿಗೆ ಹೇಳಿ ಹೋಗಬೇಕಾತು ಅಂತ ಯೋಚ್ನಿ ಮಾಡ್ತಿದ್ಹಂಗ ಅಲ್ಲಿಗೆ ಒಬ್ಬ ಸನ್ಯಾಸಪ್ಪ ನಡದ ಬರ್ತಿದ್ದಾ. ಇವಗ ಭಾಳ ಸಂತೋಷ ಆತು. ಆಗ ಆ ಸನ್ಯಾಸಪ್ಪನ್ನ ಕರ್ದು ಆದ ಸುದ್ದಿ ಎಲ್ಲಾ ಹೇಳಿ "ನೀನಿಲ್ಲೆ ಇದ್ನೆಲ್ಲಾ ನೋಡಿಕೋತ ಇದ್ದಬಿಡು ನಾನು ದೇವರನ್ನ ಕಾಣ್ಲಿಕ್ಕೆ ಹೋಗಬೇಕಾಗೇದ" ಅಂದ.

ಅದ್ಕ ಆ ಸನ್ಯಾಸಿ, ಅವ್ನಕಂಡು "ನೀ ಏನ ಕೇಳಾವ, ಅವ ನಿಂಗ ಕಾಣ್ತಾನ ? ನೀನಿನ್ನೂ ಎಲ್ಲೀ ತನ್ಕಾ ಹೋಗಾಂವ" ಅಂತ ಕೇಳ್ದಾ. ಹೌದು

ನಮ್ಮವ್ವ ಹೇಳ್ತಾಳ. ದೇವ್ರಿದ್ದಾನ ಅಂವ ಕಾಣಸ್ತಾನ. ಕೇಳಿದ್ದ ಕೊಡ್ತಾನ ಅಂತ. ಅಂವಾ ಕಾಣೋತನಕಾ ನಾ ಹೋಗ್ತೇನಿ. ನಮ್ಮಪ್ಪ-ಅವ್ವ ಭಾಳ ಕಷ್ಟ ಬಡ್ತಾರ ಅವರ ಕಷ್ಟಕಳಿಯಪ್ಪಾ ಅಂತ ಬೇಡಿಕೋತೇನಿ" ಅಂದ.

ಆ ಸನ್ಯಾಸಿಗೆ ಸಂತೋಷವಾಗಿ "ನೀನಿಷ್ಟು ಸಣ್ಣಾವಿದ್ರೂ ಇಷ್ಟು ಕಷ್ಟ ಆದ್ರೂ ದೇವ್ರನ್ನ ಕಾಣಬೇಕು ಅನ್ನೋ ನಿನ್ನ ಗುರಿ ನೀಬಿಡಾವಲ್ಲಾ. ದೇವರು ಆದವ ನಾನು ಆಕಾಶದಿಂದ ಇಳದು ನಿನ್ನತ್ರ ಬಂದೇನಿ ನೋಡು. ನಿನ್ನ ಭಕ್ತಿ ನಿನ್ನ ಒಳ್ಳೇತನದಾಗ ದೇವ್ರಿದ್ದಾನಪ್ಪಾ. ಅದ್ನ ಬಿಟ್ಟ ನಾಯೆಲ್ಲಿ ಹೋಗ್ಲಿ ಎಂದು ಶಿವಜೋಗಿ ರೂಪಾ ಧರಿಸಿ ನಿಂತುಬಿಡ್ತಾನ.

ಹುಡುಗ ಆನಂದದಿಂದ ಪಾದದ ಮ್ಯಾಲಬಿದ್ದು ಮೈಮರೀತಾ ಇದ್ದಾಗ ಎರಡೂ ಕೈಲೆ ಹುಡುಗನ್ನೆತ್ತಿ ಎಲ್ಲಾ ನಿನಗ ಒಳ್ಳೇದು ಆಗ್ತದ, ಒಳ್ಳೇದು ಆದಾಗ ನೀನು ಎಂದೂ ಕೆಟ್ಟದು ಮಾಡ್ಲಿಕ್ಕೆ ಹೋಗ್ಬ್ಯಾಡಾ ನಡಿ ನೀನಿನ್ನ ಮನೀಗೆ ಹೋಗು ಎಂದ ಆದ್ರ ಆ ಹುಡುಗ ತನಗೆ ಹಾದ್ಯಾಗ ಬೇಟ್ಟಿಯಾಗಿ ಹೇಳಿದ ಕಷ್ಟದ ಕಥಿ ಅರಿಕಿ ಮಾಡಿಕೊಂಡಾ ಅವರಿಗೆಲ್ಲಾ ಮುಕ್ತಿ ಹೆಂಗ ಅಂತ.

ಅದ್ಕ ಶಿವಜೋಗಿ ಹೇಳ್ದಾ ಆ ಕೊಳದ ನೀರಿನ ವಿಷಯಾ ಹೇಳಬೇಕಂದ್ರ ಆ ಕೊಳಾ ಕಟ್ಟಿಸಿದ ರಾಜನ ಮಗಳು ಒಬ್ಬಾಕಿ ಇದ್ದಾಳ. ಮದುವಿ ವಯಸ್ಸು ಬಂದ್ರೂ ಆ ರಾಜ ಮದುವಿ ಯೋಚ್ನೆ ಅನ್ನೋದ ಮಾಡಿಲ್ಲ. ಆ ಹುಡ್ಗಿ ರಾತ್ರಿಯೆಲ್ಲ ಉಸುರ ಅನಕೋತ ಮಲಕೋತಾಳ. ಆ ಬಿಸಿಯುಸಿರಿಗೆ ಆ ನೀರೆಲ್ಲ ಬತ್ತಿ ಹೋಗ್ತಾವ. ಆಕಿ ಮದುವಿ ಮಾಡಿಕೊಟ್ರ ಆ ಕೊಳಾ ನೀರಿನಿಂದ ಯಾವಾಗ್ಲೂ ತುಂಬಿಕೊಂಡ ಇರ್ತದ.

ಇನ್ನ ಆ ಹಾವು ಬಂಗಾರ ಹಣ ಅಂತ ಯಾರಿಗೂ ಕೊಡ್ದಂಗ ಕೂಡಿಟ್ಟು ಸತ್ತಮನಷ್ಯಾ ಆಗಿದ್ದ ಹಿಂದಿನ ಜನ್ಮದಾಗ ಆದ್ರವ್ಯಾನ ಈಗ್ಲೂ ಕಾಯ್ಕೋತನ ಇರ್ಬೇಕಾಗೇದ. ಈಗ ಅದ್ಕ ಮಕ್ಕಳು ಮರಿಯಂತ ಸಂತಾನನ ಇಲ್ಲ,



ಇದ್ದಿದ್ರ ಅವರ್ಯಾದ್ರೂ ಒಪ್ಪಿಸಿ ಸಾಯ್ಲಿಕ್ಕೆ ಬರ್ತಿತ್ತು. ಈಗಾದ್ರೂ ಆ ಸಂಪತ್ತೆಲ್ಲ ಯಾರಿಗಾದ್ರೂ ಒಳ್ಳೇರಿಗೆ ಕೊಟ್ಟಬಿಟ್ರ ಅದ್ಕ ಜೀವನ್ಮುಕ್ತಿ ಆಗ್ತದ. ಮತ್ತೇನಪ್ಪಾ ಅಂದ್ರ, ಆ ಮಾವಿನ ಮರಾ ಅದ ನೋಡು. ಅದೂ ಹಿಂದಿನ ಜನ್ಮದಾಗ ಒಬ್ಬ ಮನುಷಾನ ದೊಡ್ಡ ಪಂಡಿತಾಯಿದ್ದಾ, ಭಾರೀ ವಿದ್ಯಾವಂತನೂ ಇದ್ದಾ, ಆದ್ರ ಯಾರಿಗೂ ಯೋಗ್ಯ ರೀತಿಯಿಂದ ವಿದ್ಯಾದಾನ ಮಾಡ್ಲಿಲ್ಲ ಒಂದೊಂದು ಶಬ್ದ ಹೇಳ್ಳಿಕ್ಕೂ ಒಂದೊಂದು ನಾಣ್ಯ ಕೇಳಿದ್ದ. ಅದ್ಕೇ ಅವನ ವಿದ್ಯಾ ಅವನೊಳ್ಗ ಹುಳೀತು. ಅವನು ಈಗ ಹುಳ್ಕ ಮಾವಿನ ಮರಾ ಆಗಿ ಹುಟ್ಯಾನ. ಈಗ್ಲಾದ್ರೂ ತನ್ನ ವಿದ್ಯಾನ ಯಾರಗ್ಯಾದ್ರೂ ಹೇಳಿದ್ರ ಹುಳಾ ಎಲ್ಲಾ ಬಿಟ್ಟ ಹೋಗ್ತಾವ. ಆವಾಗ್ಯಾಲ ಆ ಹಣ್ಣು ಎಲ್ಲಾರೂ ತಿಂತಾರ ನೋಡು. ಆತಲ್ಲಾ. ಈಗ ನೀ ಹೋಗ್ತಾ ಮೊದ್ಲು ಇತ್ಲಾಗ ದಕ್ಷಿಣ ದಿಕ್ಕಿಗೆ ಒಂದು ರಾಜಧಾನಿ ಅದ. ಅಲ್ಲಿಗೆ ಹೋಗು. ಆ ರಾಜಗ ಭಾಳ ದಿವ್ಸಕ್ಕ ಪುತ್ರೋತ್ಸವ ಆಗೇದ ಭರ್ಜರಿ ಹಬ್ಬಾ ಆಚರ್ಸಲಿಕ್ಕೆ ಹತ್ಯಾರ. ಆದ್ರ ಆ ಗಂಡು ಕೂಸು ಹುಟ್ಟಿದ್ದು ಯಾರಂತ ಮಾಡಿ ಈ ಜೋಳದ ಹೊಲದಾಗ ನಿನಗ ನೀರು ರೊಟ್ಟಿ ಕೊಟ್ಟು ನಿನಗೆ ಮಲಕ್ಕೊಳಿಕ್ಕೆ ಜಾಗಾ ಕೊಟ್ಟು ತಾ ಸತ್ನಲ್ಲ ಆ ಧರ್ಮಾತ್ಮ ಮುದಕನ ಪುನರ್ಜನ್ಮ ಆಗೇದ ರಾಜನ ಮಗಾ ಆಗಿ ಹುಟ್ಯಾನ ಆ ಮುದಕಿ ಯಾರಿಗೂ ಕೈಯೆತ್ತಿ ಒಬ್ಬರಿಗೂ ಅನ್ನಾ ಕೊಡ್ತಿದ್ದಿಲ್ಲಾ ಇವತ್ತು ಆಕಿ ಹೊಲಸು ತಿಂದು ಬದುಕೊ ಹಂದಿ ಹೊಟ್ಯಾಗ ಜನ್ಮ ತಾಳೇದ.

"ನೋಡು ಪಾಪ ಪುಣ್ಯದ ಫಲ ಹೆಂಗದ ಅಂಬೋದು ನಿನಗ ಈಗಿಂದೀಗ ತಿಳೀತದ ದುಡ್ಡು ದ್ರವ್ಯ ಮುಂತಾದ್ದೆಲ್ಲ ಯಾರಿಗೂ ಕೊಡ್ದಂಗ ವಂಚನಿ ಮಾಡಿ ಸಾಯೋದು, ತಾನು ಮಾಡೊ ಕರ್ತವ್ಯಾನ ಮರ್ತು ಇರಬಾರದು ರಾಜನ್ನಂಗ, ಆತ ಯಾವ ಕೆಲಸಾ ಮಾಡಿದ್ರೂ ಸಾರ್ಥಕಾ ಮುಟ್ಟೊದಿಲ್ಲ. ತಾವು ಕಲಿತ ವಿದ್ಯಾನ ಎರಡನೆಯವರಿಗೆ ದಾನ ಮಾಡಬೇಕು. ಅದನ್ನ ತನ್ನೊಳಗ ಇಟಗೊಂಡು ಸತ್ರ ಸದ್ಗತಿ ಆಗೋದೇ ಇಲ್ಲ. ಇದ್ನೆಲ್ಲ ನೀನೂ ತಿಳಕೊಂಡು ಜೀವಿಸಿಕೊಂಡಿರು" ಎಂದು ಆ ಶಿವಜೋಗಿ ಇದ್ದಕಿದ್ದಂಗ ಮಾಯವಾಗ್ಬಿಟ್ಟ, ಆ ಹುಡುಗ್ಗ ಇದೇನು ಕನಸೊ ಅಥವಾ ನಿಜಾನೊ ಏನಾದ್ರೂ

ಆಗ್ಲಿ ದೇವ್ರನ್ನ ಕಂಡ್ನೆಲ್ಲ. ಇದ್ಕಿಂತ ಹೆಚ್ಚಿಂದ ಏನಬೇಕು, ಎಂದು ಸಂತೋಷದಿಂದ ಹೊರಟು ರಾಜಪುತ್ರನನ್ನು ನೋಡಿ ಬಂದು ಕೊಳದ ರಾಜನಲ್ಲಿಗೆ ಹೋದಾ. ಎಲ್ಲ ವಿಷಯ ತಿಳಿದ ರಾಜ ಆ ರಾಜಕುಮಾರಿಯನ್ನು ಈತನಿಗೆ ಕೊಟ್ಟು ಮದುವೆ ಮಾಡಿ ಅರ್ಧ ರಾಜ್ಯವನ್ನೂ ಕೊಟ್ಟು ಕಳಿಸಿದಾ. ಹಾದಿಯಲ್ಲಿ ಮಾವಿನ ಮರಕ್ಕೆ ದೇವರ ಅಪ್ಪಣೆ ಹೇಳಿದಾಗ ಅದು ಸಂತೋಷದಿಂದ ತನ್ನೆಲ್ಲ ವಿದ್ಯೆಗಳನ್ನು ಈತನಿಗೆ ಬೋಧಿಸಿತು ಮುಂದೆ ಆ ಹಾವು ಸಹಿತ ಇವನಿಗೇ ಆ ಎಲ್ಲ ಧನಕನಕಗಳನ್ನು ಕೊಟ್ಟು ಮುಕ್ತಿ ಹೊಂದಿತು.

ಊರ ಸಮೀಪ ಹಾದ್ಯಾಗ ಗೋಪಮ್ಮ ಕಾಯ್ಕೋತ ನಿಂತಿದ್ಲು ಆ ಆಕಳು ಕರುವನ್ನು ಸಹ ಜೊತೆಗೆ ಕರೆದುಕೊಂಡು ಮನೆಬಾಗಿಲ ಎದುರಿಗೆ ಬಂದು ನಿಂತಾಗ ಎರಡು ಮೂರು ವರುಷಗಳವರ್ಗೆ ಹಾದಿ ಕಾದೂ ಕಾದೂ ತಪತಗೀತಿದ್ದ ತಂದಿ-ತಾಯಿ ಧಾವಿಸಿ ಹೊರಗ ಬಂದು ನೋಡ್ತಾರ, ಅಬಾಬಾ ಏನ್ ವೈಭವ ಮಗಂದು ವಿದ್ಯಾಲಕ್ಷ್ಮಿ. ಭಾಗ್ಯಲಕ್ಷ್ಮಿದು ಮುಖದ ಮ್ಯಾಲಕಳಾ ವುಕ್ಕರೀತದ ಒಂದ ಕಡೆ ಕಾಮಧೇನಂಥಾ ಆಕಳಾಕರು, ಒಂದು ಕಡೆ ಗೃಹಲಕ್ಷ್ಮೀ ಅಂಥಾ ರಾಜಕುಮಾರಿ ಒಂಟೀ ಕುದುರೆ ಮಾಲ್ಯ ದುಡ್ಡು ದ್ರವ್ಯ. ಬಿಟ್ಟ ಕಣ್ಣು ಬಿಟ್ಟ ಬಾಯಿಂದ ಕಣ್ಣಾಗ ಒರಸ್ಗೋತ ನಿಂತಬಿಟ್ರು. ಅಡವಿ ಅರಣ್ಯಾ ತಿರಿಗಿ ಜೀವ ಸಹಿತ ಮಗಾ ಇಷ್ಟೆಲ್ಲಾ ತೊಂಗಾಡ ಬಂದಾನಲ್ಲಾ ! ಅವರ ನಿಂತಲ್ಲೆ ಓಡಿ ಬಂದು ಮಗಾ ತಂದಿ-ತಾಯಿ ಪಾದಕ್ಕ ಬಿದ್ದು ಅವ್ವಾSS ದೇವ್ರನ್ನ ಕಂಡ ಬಂದೆ ಅಪ್ಪಾ ದೇವ್ರನ್ನ ಕಂಡ ಬಂದೆ. ಇದೆಲ್ಲ ದೇವ್ರದಯಾ ನಿಮಿಂಗಿನ್ನ ಕಷ್ಟಯಿಲ್ಲ. ಒಂದೇ ಉಸ್ರಗೆ ಹೇಳೋ ಮಗನ್ನ ಬಾಚಿ ಎತ್ತಿ ನಮನ್ನ ಧನ್ನ ಮಾಡ್ದೆಪ್ಪಾ ಮಗನ ದೇವ್ರನ್ನ ಒಲಿಸಿಗೊಂಡಾ ಮಗಾ ನೀನು" ಎಂದು ಮನದುಂಬಿ ಹರಸಿದ್ರು.

ಆ ಮ್ಯಾಲ ಹಾದಿಗೆ ಹಂದ್ರಾ ಹಾಕಿ ಬೀದಿಗೆ ಥಳಿ ಕೊಟ್ಟು ಊರ ಮಂದ್ಗೆ ಊಟ ಹಾಕ್ಸಿ ಮಗನಿಗೆ ಭರ್ಜರಿಯಾಗಿ ಮದುವಿ ಮಾಡಿ ಸಂತೋಷವಾಗಿದ್ರಂತು ಅವ್ರು ಆಗ. ನಾವೀಗ ಕಥಿ ಹೇಳ್ತಾ ನಾವೂ ಕೇಳ್ತಾ ಯಾವ ರೀತಿ ಇರ್ಬೇಕು ಅಂತ ನಾವಿಲ್ಲಿ ಇದ್ದೆವಂತ.

# ನಾಗರತ್ನ

ಭಾಳ ಹಿಂದ್ಕಿನ ಮಾತು. ಆಗ ಒಂದಾನೊಂದು ಊರಾಗ, ಕಮತಾ ಕಟ್ಟಿದು ಒಂದು ದೊಡ್ಡ ಮನೆತನಾ ಯಿತ್ತು. ಆ ಮನ್ಯಾಗ ನಾಲ್ಕು ಮಂದಿ ಅಣ್ಣತಮ್ಮಗೋಳ ಇದ್ರು. ಅವರಾಗ ಮೂರ ಮಂದಿ ಮದುವಿ ಆಗಿ ಸೊಸ್ತಿರು ನಡಿ ನುಡೀಲಿಕ್ಕೆ ಬಂದಿದ್ರು. ಚಿಕ್ಕವಂದೊಂದು ಮದುವಿ ಆಗಬೇಕಾಗಿತ್ತು. ಅತ್ಲಾಗ ಇತ್ಲಾಗ ಗೊತ್ತಬಲ್ಲ ಮನಿ ಹುಡ್ಗಿ ತರೋಣಾಂತ, ನೋಡ್ಲಿಕ್ಕೆ ಹತ್ತಿದ್ರು. ಆದ್ರ ಆ ತಮ್ಮ ಅಂಬೋನು ಹೊಲಕ್ಕ ಹೋಗ್ತಾ ಬರ್ತಾ ಅಲ್ಲೊಂದು ಹುಡುಗಿನ ದಿನಾ ನೋಡ್ತನ ಇದ್ದ. ಆಕಿ ಭಾಳ ರೂಪುಳ್ಳಾಕಿ ಮತ್ತ ಭಾಳ ಸಂಭಾಯಿತ್ನೂ ಇದ್ಲು. ಒಂದಿನ ತನ್ನ ಅಣ್ಣಗೋಳದ್ರಿಗೆ ನಾನು ಆಕಿನ್ನ ಮದುವಿ ಆಗ್ತೇನಿ ಅಂದ. ಅದ್ಕ ಅವ್ರು ಬ್ಯಾಡ ತಗಿ ಭಾಳ ಬಡತಾನದ್ದ ಭವಣೀವವು, ನಮಗ ಸರೀಅಲ್ಲ ಸಾಟೆಲ್ಲ ಅಂದ್ರು. ಇಲ್ಲ ನಾ ಮದ್ವಿ ಆದ್ರ ಆಕಿನ್ನ ಮದುವಿ ಆಗ್ತೇನಿ ಅಂತ ಪಟ್ಟ ಹಿಡಿದಾ. ಆತ ಬಿಡು ಅಂದು ಆ ಪ್ರಕಾರ ಅವನ ಮದುವಿನೂ ಮಾಡಿದ್ರು. ಮುಂದಕ್ಕ ಸೋಬನ ಕಾರ್ಯಕ್ಕ ಒಳ್ಳೆ ದಿನಾಯಿಲ್ಲ, ಸುನೇವು ಬಿದ್ದದ ಅಂದ್ರು. ಆ ಮ್ಯಾಲ ಮತ್ತೂ ಏನೇನೊ ಅಡಚಣಿ ಆಗಿ ಆರ ತಿಂಗಳ ತನ್ಕ ಸೊಸಿ ಮನಿಗೆ ಬರ್ಲಿಲ್ಲ. ಇಂತಾ ದಿನದಾಗ ಈ ಹುಡುಗಾ ಗ್ರಾಚಾರ ಕಾಟಕ್ಕ ಊರ ಸೂಳೇರ ಸಾವಾಸಕ್ಕ ಬಿದ್ದ. ಮುಂದ ೫-೬ ತಿಂಗಳ ಕಳದ ಮ್ಯಾಲ ಹುಡುಗಿ ಕರಕೊಂಡು ಬಂದು ಕಾರ್ಯ ಮಾಡಿಕೊಟ್ಟು ಆಕಿನ್ನ ಬಿಟ್ಟುಹೋದ್ರು. ಆದ್ರ ಆ ಹುಡುಗನ ಮನಸ್ಸಾಗ್ಲೆ ಹುಳಕ ಹಿಡಿತ್ತು ಆತನ ಚಿತ್ತ ಹೊರಗ ಹರೀತಿತ್ತು. ಈ ಹುಡುಗಿ ಹೆಸರಿಗೆ ಹೆಂಡ್ತಿಯಾಗಿ ಬಾಳೇವು ಮಾಡ್ಲಿಕ್ಕೆ ಹತ್ತಿದ್ಲು,

ಹೀಂಗ ದಿನಾ ಕಳೀತಾನ ಇದ್ವು ನೆಗೆಣ್ಣೇರ್ಗೆ, ಇವರು ಗಂಡಾಹೆಣ್ತಿ ಹೆಂಗ ಇದ್ದಾರ ಅಂತ ಅರ್ಥ ಆತು. ಸರಿ ಇನ್ನೇನು ಗಂಡಗ ಬ್ಯಾಡಾದಕಿ ಅಂದವ್ಯಾಲ ಅವರೆಲ್ಲ ಈಕಿನ್ನ ಬೇಕಾಬಿಟ್ಟಿ ಕಾಣ್ಲಿಕ್ಕೆ ಹತ್ತಿದ್ರು ಗತಿಯಿಲ್ಲದ ಮನಿ ಹೆಣ್ಣು ರಾಣಿ ಆಗ್ಲಿಕ್ಕೆ ಬಂದಾಳ ಅಂತ ಹಂಗಿಸಿ ಮಾತಾಡ್ಲಿಕ್ಕೆ ಹತ್ತಿದ್ರು. ಮುಸುರಿ-ಹಸರಿ ಕಸಾ-ಕಡ್ಡಿ ಅವರ ಮಕ್ಕಳ ಚಾಕ್ರಿ ದನಾಕರದ ಚಾಕರಿ ಅಂತ ಒಂದಂದs ಈಕೀಗೆ ಹಚ್ಚಿ ತಾವು ಅರಗಾಗ್ಲಿಕ್ಕೆ ಹತ್ತಿದ್ರು. ಬರ್ತಾ ಬರ್ತಾ ಊಟಕ್ಕನೂ ಕರೀದ ಗಂಡಾಮಕ್ಕಿಗೆ ಹಾಕಿ ಮೈದನ್ಗೂ ಹಾಕಿ ತಾವೂ ಉಂಡು ಮಕ್ಕಳ ಮರಿ ಎಲ್ಲಾಗ ಬಿಟ್ಟಿದ್ದೆಲ್ಲ ತಗದು ತಂಗ್ಳು ಮಂಗ್ಳು ಎಲ್ಲಾ ಜೋಡ್ಸಿ ಈಕಿಗೆ ಎಲಿಬಡ್ಸಿ ಕರೀತಿದ್ರು. ಗಂಡ ಅನ್ನೋನು ಯಾವಾಗರ ಬಂದು ಅತ್ಗೆಮ ಊಟಕ್ಕ ನೀಡ ಅಂತ್ಹೇಳಿ ಉಂಡ ಎದ್ಹೋದಾ ಅಂದ್ರ ತೀರಿತು. ಈಕಿ ಒಳಗೊಳಗ ತನ್ನ ವಿಧಿ ಹಳಕೋತ ತುಟಿ ಎರಡ ಮಾಡ್ದಂಗ ಇದ್ದಬಿಡ್ತಿದ್ಲು.

ಮದುವಿ ಆಗಿ ನಾಕ ವರ್ಷ ಆತ, ಐದು ವರ್ಷ ಆತ. ಮಕ್ಕಳಿಯಿಲ್ಲ ಮರಿಯಿಲ್ಲ ಎಂದು ಮನ್ಯಾನವರು ಹೊರ್ಗಿನವರು ಚಿಕ್ಕ ಸೊಸಿ ಒಂದು ಬಂಜಿ ಹೆಣ್ಣು ಅಂತ ಆಡ್ಕೋಳಿಕ್ಕೆ ಹತ್ತಿದ್ರು. ಅಯ್ಯೋ! ದೇವ್ರೆ ನನ್ನ ಹೆಣ್ಣ ಆಗೆರ ಯಾಕ ಹುಟ್ಸಿದ್ದಿಯಪ್ಪಾ. ಗಂಡಗ ಬ್ಯಾಡಾದ ಮ್ಯಾಲ ಮಕ್ಳು ಎಲ್ಲೀದು ಮದುವಿ ಆಗಿ ಬಂದದ್ದಷ್ಟ ಆಕಿ ಇನ್ನೂ ಕನ್ನಿ ಆಗೇ ಇದ್ದಾಳ,

ಅಕ್ಕಗೋಳು ಬಾವಗೋಳು ರಾತ್ರಿ ಅವರವರ ಕೋಲ್ಯಾಗ ಮಲ ಕೋಳಿಕ್ಕೆ ಹೋಗ್ತಿದ್ರು ಗಂಡ ಅನ್ನೋವಾ ಉಂಡ ಕೈಮ್ಯಾಲ ನೀರ ಬಿದ್ದ ಕೂಡ್ಲೆ ಹೊರಗ ಹೋದಾವಾ ಮುಂಜಾನೆ ಮುಖಾ ತೊಳ್ಕೋಳ್ಳಿಕ್ಕೆ ಮನೀಗೆ ಬರೋದು. ಈಕಿ ಇದ್ದಕಿ ಅವ್ರ ಮಕ್ಕನೆಲ್ಲಾ ಆತ್ಲಾಗಿತ್ಲಾಗ ಮಲ್ಗಿಸಿಕೊಂಡು ಉಸುರ ಹಾಕ್ತಾ ಮಲಕೋತಿದ್ಲು. ಮುಂಜಾನೆ ನಸ್ಕಿನ ನಾಕ ಗಂಟೇಕ್ಕನ ಎದ್ದು ಶಗಣೀ ಕಸಾ ತಗೀಲಿಕ್ಕ ಗ್ವಾದ್ನೀಗೆ ಓಡತಿದ್ಲು ಒಂದ ಅಂಗಾರಿಲ್ಲ ಶೃಂಗಾರ ಕಾಣ್ಲಿಲ್ಲ. ಒಂದ ಹಳೇ ಸೀರಿ ಉಟಗೊಂಡು ಶೆಗಣಿ ಹೆಡಗಿ ಹೊತ್ಕೊತ್ತು ಗೊಬ್ಬರ ಗುಂಡಿಗೆ ಹಾಕೋದೇ ಕೆಲ್ಸಾ. ಗಂಡಾ ಒಂದಿನಾನರ ಹೆಂಗ ಇದ್ದೀದಿ ಅಂತ ವಿಚಾರಾ ಮಾಡ್ಲಿಲ್ಲ.



"ಛೀ ತಗಿ, ಸಾವಳಗರ ಯಾಕ ಮಲಗಬೇಕು. ಹ್ಯಾಂಗೂ ಹನ್ನೆರಡರ ತನ್ಕಾ ಕೆಲಸಾಗ್ತಾವ. ಆ ಮ್ಯಾಲ ನಾಕನ್ನದ್ರಾಗ ಏಳಬೇಕು. ಅಲ್ಲೇ ಗ್ವಾದನ್ಯಾಗ ಜಗಾ ಮಾಡಿಕೊಂಡು ಮಲಗಿದ್ರಾತ ಬಿಡು" ಅಂದಕೊಂಡ್ಲು. ಅವ್ರ ಅಕ್ಕೋಳಿಗೂ ಹೇಳಿ "ನಾನು ಅಲ್ಲೆ ದನೀನ ಮನ್ಯಾಗ ಮಲಗತೇನಿ ಯಾಕ್ಯಾ ಸುಮ್ಮನ ನಾಕ್ಕಂಟೇಕ್ಕ ಎದ್ದ ಬಾಗಲ ಧಡಪಡಾ ಅಂದ್ರ ನಿಮಗೂ ನಿದ್ದಿ ಹಾಳಾಗ್ತಾವ" ಅಂದ್ಲು. ಅದ್ಕ ಅವ್ರು "ನಿನಗ ಅದೇ ಬೇಸ ಜಗಾ ಹೋಗು" ಅಂತ್ಹೇಳಿ ಹೀಯಾಳ್ಸಿಬಿಟ್ರು.

ಈ ರೀತಿ ಇರ್ತಾ ಇರ್ತಾ ಈಕಿ ಬೆಳಗೋದು ಬಗ್ಯೋದು, ನೀರ ಸೇದೋದು ಶಗಣಿ ಗೊಬ್ಬರಕ್ಕ ಚಲ್ಲೋದು ಎಲ್ಲಾನೂ ಆ ಚಿಕಡಿಮನಿ ಸವ್ಕಾರಮಗ ನೋಡ್ತಾನಯಿದ್ದ. ಇಷ್ಟ ಚಂದುಳ್ಳ ಚೆಲುವಿನ್ನ ಕೆಲಸಕ್ಕ ಇಟಗೊಂಡಾರಲ್ಲಾ ಎಷ್ಟು ಮರ್ಯಾದಿಂದ ತಲಿ ತಗ್ಗಿಸಿಗೊಂಡು ಒಳ್ಳೇ ರೀತಿಂದ ಕೆಲಸ ಮಾಡ್ತಾಳಲ್ಲ. ಈಕಿ ಕೆಲಸದಕಿ ಅದ್ರರ ಏನಾತು ಎಷ್ಟು ರೂಪ ವಂತಿ ಇದ್ದಾಳ ನಾನ್ಯಾಕ ಈಕಿನ್ನ ಮದುವಿ ಮಾಡ್ಕೋಬಾರ್ದು ಅಂದ್ಕೊಂಡ ಅವಗ ಈಕಿ ಮ್ಯಾಲ ಮನಸ್ಸಾಗ್ಲಿಕ್ಕೆ ಸುರುವಾತು. ಅ ಗಳಿಗ್ಗೆ ಒಂದು ಗುಟ್ಟು ರಟ್ಟ ಮಾಡ್ದಂಥಾ ಮುದ್ಕಿ ಕರದು ನಂದೊಂದ ಕೆಲಸಾ ಮಾಡ್ತಿ ಏನವ್ವಾ ಅಂತ ಕೇಳ್ದಾ. ನನ್ನ ಕಡಿಂದ ಆಗವಾದ್ರ ಮಾಡೇನಪ್ಪಾ ಅಂದಾಗ ಹೆಂಗಾರ ಮಾಡಿ ಮಾಡಬೇಕಬೆ ಅಂದು, ಅದೇ ಅಲ್ಲೇ ಆ ಮನಿ ಹಿತ್ಲದಾಗ ದನದ ಹಟ್ಟಿ ಅದಅಲ್ಲ; ಅಲ್ಲಿ ಅ ಹೆಣಮಗಳು ಕೆಲಸಾ ಮಾಡೋದು ಕಾಣ್ತದಲ್ಲಾ ಪಾಪ ಆಕಿ ನೋಡ್ಲಿಕ್ಕೆ ಹತ್ತಿ ತಿಂಗ್ಳಾತು. ಆಕಿ ಏನು ಉಣ್ತಾಳೊ ಯಾವಾಗ ಉಣ್ತಾಳೊ ಆಗ್ನಿಂದಾನೂ ಅ ಒಂದ್ಸೀರಿ ಬಿಟ್ಟು ಮತ್ತೊಂದು ಉಟ್ಟಿದ್ದ ನೋಡಿಲ್ಲ. ಇಂಥಾದ್ರಾಗೂ ಆಕಿ ಚಲ್ವಕಿ ಅನ್ನೋದು ಎದ್ದು ಹೊಡೀತದ. ನೀನ್ಹೋಗಿ ಆಕಿ ಲಗ್ನಾ ಆಗೇದೊ ಇಲ್ಲೋ ಕೇಳಿಕೊಂಡು ಬಾ ಅಂದ. ಅದ್ಕ ಅ ಮುದ್ಕಿ "ಅಪ್ಪಾ ಹೆರರ ಹೆಣ್ಮಕ್ಳಿಗೆ ಹಾಂಗ ಒಮ್ಮಿಲೆ ಮನಸ್ಸಾಕಬಾರದಪ್ಪಾ ಅಂತು. ಇವತ್ತಲ್ಲ ಇನ್ನೂ ಒಂದ್ವೊರ್ಷ ಆಗ್ಲಿ ನನಗ ಆಕಿ ಒಲ್ದರ ಸಾಕು" ಅಂದ. ಆತಪ್ಪ ವಿಚಾರ್ಸತೀನಿ ಅಂದು ದಿವಸಾ ಏನಾರ ನವ ಮಾಡಿ ಈಕಿ ಹತ್ರ ಬಂದು ಕೂತು ತಿಂಡಿ ತಿನಿಸು ಜುಲುಮಿಂದ ಕೊಟ್ಟು

ಆ ಮಾತು ಈ ಮಾತು ಆಡ್ಕೋತ ಒಂದಂದ ಈಕಿ ವಿಚಾರಾ ಕೇಳ್ತಿದ್ಲು. "ಏನವ್ವಾ ತಾಯಿ ಯಾವಾಗ ನೋಡಿದ್ರೂ ನೀನಿಲ್ಲೆ ದುಂಡೀತನ ಇರ್ತೀಯಲ್ಲ, ನಿಮ್ಮನ್ಯಾಗ ಮತ್ಯಾರೂ ಇಲ್ಲೇನು" ಅಂದ್ಲು. "ಇದ್ದಾರಬೆ ಅವ್ರಿಗೆಲ್ಲಾ ಮುಕ್ಳು-ಮರಿ ಅಂತ ಕೆಲ್ಸ ಇದ್ದs ಇರ್ತಾವ. ನನಗೇನದ ನಾನ ಮಾಡಿ ಬಿಡ್ತೇನಿ. ಅವರನ ಬಿಡ್ಸಿ" ಅಂದಳು. "ದಿನಾ ಒಂದ ಸೀರಿ ಉಡ್ತೀಯಲ್ಲ ತಾಯಿ ಬ್ಯಾರೆ ಬಟ್ಟೆಲ್ಲೇನು" ಅಂದ್ರ "ನನ್ನ ಎರಡೂ ಸೀರಿ ಬಣ್ಣ ಒಂದ ಥರಾ ಅದ ಅದ್ಕ ಹಂಗ ಕಾಣ್ತದ" ಅಂತ ಎಲ್ಲಾದ್ಕೂ ತನ್ನ ಗುಟ್ಟ ಹೊರಗ ಹಾಕದ್ಹಂಗ ಹೇಳಿಕೋತನ ಬಂದ್ಲು.

ಆದ್ರ ಆ ಮುದುಕಿ ದಿನಾ ಬಂದು ಈಕಿ ಸುಖ ದುಃಖ ಕೇಳೋದ್ರಿಂದ ಆಕಿ ತನಗ ಆತ್ಮೀಯಳಾದ್ಹಂಗ ಅನ್ಸಲಿಕ್ಕೆ ಹತ್ತು. ತನ್ನ ದುಃಖನರ ಎಷ್ಟಂತ ಹೊಟ್ಯಾಗ ಇಟಗೋತಾಳ. ಒಂದಿನಾ ಕುತ್ಗೊಂಡು ತನ್ನೆಲ್ಲಾ ಕಥಿ ಹೇಳಿದ್ಲು. "ತನ್ನ ಮದುವಿ ಆಗೇದ ಗಂಡಾ ದಿನಾ ಹೊರಗ ಹೋಗ್ತಾನ ಮನೀಜನಾ ಅನ್ನೋರು ನನ್ನ ಇಷ್ಟ ಕೀಳ ಮಾಡ್ತ್ಯಾರ. ಸುಖಾ ಅನ್ನೋದು ನಾನು ಈ ಜನ್ಮದಾಗ ಪಡದ ಬಂದಿಲ್ಲ" ಅಂತ್ಹೇಳಿ ಅಳ್ಳಿಕ್ಕೆ ಹತ್ತಿದ್ಲು. "ಹೀಂಗ ಅದನ ವಿಷ್ಯಾ ಇದ್ನೆಲ್ಲಾ ಕೇಳಿ ನಂಗೂ ಭಾಳ ದುಃಖ ಆಗ್ತದವ್ವಾ" ಅಂದು ಸ್ವಲ್ಪ ತಡದು ಹೂಂ ನನಗ ಭಾಳ ಆಶ್ಚರ್ಯ ಆಗ್ತದ ನೋಡು. ನಿನ್ನಂಥ ಒಳ್ಳೇಕಿನ್ನ ಇವರು ಕಾಟಾಚಾರ ಮಾಡ್ತಾರ. ಆದ್ರ ಆ ಮನಿ ಸವ್ಕಾರಾ ನಿನ್ನ ನೋಡಿ ಭಾಳ ಮನಸ ಮಾಡ್ಯಾನ. ನಿನ್ನ ಮದುವಿನ ಆಗಿಲ್ಲಂತ ತಿಳಿದು ಅಂದಕೊಡ್ಲೆ ಈ ಹುಡುಗಿ ಮನದಾಗ ನಡಗಿಬಿಟ್ಲು ನೀ ಮನಸ ಮಾಡಿದ್ರ ಆತ ನಿನ್ನ ಲಗ್ನಾ ಕೂಡ ಆಗ್ತೇನಿ ಅಂದ, ಅಂತ ಹೇಳಿ ಹೋದ್ಲು ಆ ಮುದುಕಿ. ಮತ್ತ ಮಾರ್ನೇದಿನಾ ಬಂದು ಆ ಹುಡುಗ ನಿನ್ನ ಕಥಿ ಕೇಳಿ ಮರ ಮರಾ ಮರಿಗಿದಾ. ಆದರ ಇನ್ನೂ ಒಂದ ಮಾತ್ಹೇಳ್ಯಾನ, ಒಬ್ಬಗ ಹೆಂಣ್ತಿ ಆಗ್ಯಾಳ ಅಂದಮ್ಯಾಲ ನಾನ್ಹಂಗ ಲಗ್ನ ಆಗ್ಲಿಕ್ಕೆ ಬರ್ತದ. ಆದ್ರ ಆಕಿನ್ನ ಒಂದ ಮಾತ್ಕೇಳು, ಆಕೀಗೆ ಸಕಲ ಸೌಕರ್ಯ ಒದಗಸ್ತೇನಿ. ದಿನಾ ನನ್ನ ಮನಿಗೆ ಬಂದ ಹೋಗ್ತಾಳೇನೊ ಕೇಳು ಅಂತ. ಛೇ ! ತಗಿ ನಾನು ಗಂಡುಳ್ಳ ಗರತಿ



ಹಿಂಗ ೫-೬ ವರ್ಷಾಗಳು ಮುಗಿದ್ವು, ಯಾವ ಆಶಾಕ್ಕೂ ಬಲಿ ಬಿದ್ದಿಲ್ಲ, ಈಗ್ಯಾಕ ಈ ಕೆಲ್ಸ ನನ್ನ ಕಡಿಂದ ಸಾಧ್ಯ ಇಲ್ಲವ್ವಾ ಅಂದ್ಲು.

ಆದ್ರೂ ಆ ಮುದ್ಕಿ ದಿನಾ ಬರೋದು ಹೋಗೋದು ಮಾತಾಡೋದು ಕಡೀಕೆ ಇದಕ್ಕೂ ಏನಾರ ವಿಚಾರಾ ಮಾಡ್ದೇನವ್ವಾ ಅಂತಾ ಕೇಳ್ತಿದ್ಲು. ಈಕೀಗೂ ದಿನಾ ಅದ ಯೋಚ್ನಿ ಮಾಡಿ ಮಾಡಿ ನನ್ನ ಗಂಡನ್ಯಾ ನಾನ್ಯಾರು ಅಂತ ಕಣ್ಣೆತ್ತಿ ನೋಡ್ವಲ್ಲಾ, ನಾನಿನ್ನ ಕಡೆತನ್ಯಾ ಹಿಂಗ ಇರೋದು ಖಾತ್ರಿ ಅಂತ ಮನಸ ಘಟ್ಟಿ ಮಾಡಿ ನಾನಿದ್ಕ ಒಪ್ಗೋಬಾರ್ದು ಯಾಕ ಅಂದುಕೊಂಡಳು.

ಸರಿ, ಮಾರನೇ ದಿನ ಆ ಮುದುಕವ್ವ ಬಂದ್ಲು ಕೇಳಿದ್ಲು ಅದ್ಕ ನನ್ನ ಮನಸ್ಗೇನೊ ಒಪ್ಪಿಗಿ ಅನ್ಸತದ, ಆದರ ಯಾರಗಾರ ಗೊತ್ತಾದ್ರ ನನ್ನ ಜೀವ ಸಹ ಬಿಡೋದಿಲ್ಲ ಅಂದ್ಲು. ಇನ್ನು ನೀ ಆ ವಿಚಾರಾ ಬಿಟ್ಟಬಿಡು. ಅದಕ್ಕ ತಕ್ಕ ಏರ್ಪಾಡು ಆ ಮಗಾ ಮಾಡ್ತಾನ ಅಂದು ಹೋದ್ಲು. ಮುಂದ ಸ್ವಲ್ಪ ದಿನ ಅಂಬೋದ್ರಾಗ ಈಕಿ ಮಲಗೊ ಗ್ವಾದನಿಗೂ ಅತನ ಮನಿಗೂ ಸುರಂಗ ದ್ವಾರಿ ಆತು. ದಿನಾ ರಾತ್ರಿ ಇವನ ಮನಿಗೆ ಬಂದಹೋಗೋದು ಅಂತ ಆತು.

ಆ ರಾತ್ರಿ ಆ ಸುರಂಗದ್ವಾರ್ಯಾಗ ಇಳೀಬೇಕಾರ ಆಕೀಗೆ ತನ್ನ ಹಣೇಬರಾ ನೆನೆದು ಭಾಳ ಸಂಕಟ ಆತು. ಅಂತೂ ಆ ಸವ್ಕಾರನ ಮನೀಗೆ ಹೋದ್ಲು. ಅಲ್ಲಿ ಆ ಅಜ್ಜಿ ಇದ್ಲು. ಈಕಿನ್ನ ಕರದು ತಲೀಗೆ ಸುಗಂಧಿ ಎಣ್ಣೆ ಹಚ್ಚಿ ನೀರ್ಹಾಕಿ ನಾಗವೇಣಿ ಅಂಥಾ ಕೂದ್ಲಾ ಕಟ್ಟಿ, ಮಲ್ಲಗಿ ಕುಚ್ಚ ಮುಡ್ಸಿ ಪಟ್ಟಾಪೀತಾಂಬ್ರ ಉಡಿಸಿ ಮೈತುಂಬ ಒಡವಿ ಹಾಕಿ ಶೃಂಗಾರ ಮಾಡಿದ್ಲು. ಹೋಳ್ಗಿ ಪಾಯಸದೂಟಾ ಮಾಡ್ಸಿ ಪರಿಮಳ ತಾಂಬೂಲ ಕೊಟ್ಲು. ಇಷ್ಟೆಲ್ಲ ಸೌಕರ್ಯದಿಂದ ಆಕಿ ಪಟ್ಟೆ ಮಂಚದ ಮ್ಯಾಲ ಕೂತ್ಲು. ಆಕೀಗೆ ಇದೇನು ದೇವಲೋಕೊ ಇಂದ್ರಲೋಕೊ ಅನ್ನಿಸ್ತು. ಹುಟ್ಟಿದ ಮನ್ಯಾಗ ಕೊಟ್ಟ ಮನ್ಯಾಗ ಎಂದೂ ಏನೂ ಕಾಣದಂಥಾ ಜೀವ ಆಕೀದು.

ಅಷ್ಟೊತ್ತಿಗೆ ಆ ಸವ್ಕಾರ ಮಂಗಾ ಬಂದಾ. ಈಕಿನ್ನ ನೋಡಿ ಬೆರಗಾಗಿ ನಿಂತ. ಆಹಾ ಎಂಥಾ ರೂಪಾ ನಿಂದು ರತಿದೇವಿ ಇದ್ದಾಂಗ ಇದ್ದಿ ನೋಡು ಅಂತ ಮಿಂದು ಮಾತ್ನಿಂದ ಮಾತಾಡ್ದಾ. ಈಕಿಗೆ ಮತ್ತ ಮನಸ ಅಳಕ್ತು. ನಾನೆಂಥಾ ಕೆಲ್ಸಕ್ಕ ಬಂದ್ನಲ್ಲಾ ಅಂತಾ ಕಣ್ಣಾಗ ನೀರ ಇಳೀಲಿಕ್ಕೆ ಹತ್ತಿದ್ವು, ಮತ್ತೊಮ್ಮೆ ಅನ್ಸತಿತ್ತು ಈ ದೊರಿ ನನಗಾಗಿ ಎಷ್ಟೆಲ್ಲಾ ಮಾಡ್ಯಾನಲ್ಲ. ನನ್ನ ಗಂಡ ಒಂದಿನಾನೂ ಒಂದ ಒಳ್ಳೇ ಮಾತಾಡ್ಲಿಲ್ಲ ಅಂತ ಮನಸ್ನಾಗ ಹೊಯ್ದಾಡ್ಕೋತ ಇರ್ವಾಗ ಆಗ ಆತ ಹೇಳ್ದಾ ನೋಡು ನಿನಗ ಮನಸ್ಸಿಗೆ ಬರೋತನ್ಕ ನಾನ್ಯಾವದಕ್ಕೂ ಒತ್ತಾಯ ಮಾಡೋದಿಲ್ಲ. ಆದ್ರ ನೀನು ಒಂದೆರಡು ಹಾಡಾದರೂ ಹೇಳು. ದಿನಾ ನೀನು ಗೋದಾನಿಯೊಳ್ಗ ದೇವರ ಹಾಡ ಹೇಳೋದು ಕೇಳ್ತಾನ ಇದ್ದೆ. ನಿನ್ನ ಇಂಪಾದ ಹಾಡಿ ಕೇಳಿ ನನ್ಗ ಭಾಳ ಸಂತೋಷ ಆಗ್ತಿತ್ತು, ನಿನ್ನ ಕಣ್ತುಂಬ ನೋಡಿದ್ರ ಸಾಕ. ನನಗ ಆನಂದ ಆಗ್ತದ. ಅಂತ ಹಿತವಾಗಿ ಮಾತಾಡ್ದಾ. ಅವನ ಕೈಯಾಗ ಚೊಕ್ಕ ಬಂಗಾರದ್ದು ಐದು ಕ್ಯಾದಿಗಿ ಮುಳ್ಳು ಥಳಾಥಳಾ ಹೊಳೀತಿದ್ವು. ಇದನ್ನ ನಿನಗಾಗಿ ಮಾಡ್ಸೀನಿ ನೋಡು ಅಂತಹೇಳಿ ಆಕಿ ಚಂದದ ತುರುಬಿನ ಅಂಚಿಗೆ ಮುಡಿಸ್ದಾ. ಅಂತೂ ಆ ರಾತ್ರಿಯೆಲ್ಲಾ ಹಾಡಹೇಳೋದು, ಪಗಡೀ ಆಡೋದು ಮಾಡಿ ಮುಂಜಾನೆ ನಾಕ ಗಂಟೇದ ಹೊತ್ಗ ಗಡಬಡಸಿ ಎದ್ದು ತನ್ನ ವಸ್ತ್ರಾ ವಡಿವಿ ಎಲ್ಲಾ ಬಿಚ್ಚಿಟ್ಟು ತನ್ನ ಹಳೇ ಸೀರಿ ಉಟಗೊಂಡು ಸುರಂಗ ಮಾರ್ಗದಿಂದ ಗೋದನಿಗೆ ಬಂದ್ಳು.

ಎಥಾ ಪ್ರಕಾರ ಈಕಿ ಶಗಣೀ ಕಸಾ ತಗದು ಸಗಣಿ ಪುಟ್ಟಿ ಹೊರಲಿಕ್ಕೆ ಸುರು ಮಾಡಿದ್ಳು. ಅಷ್ಟೊತ್ಗ ಬೆಳಕ ಹರೀಲಿಕ್ಕೆ ಹತ್ತು. ಅಕ್ಕಗೋಳು ಬಾವಗೋಳು ಎದ್ದು ಮಾರಿ ತೊಳಕೊಂಡು ಹೋಗ್ಲಿಕ್ಕೆ ಹತ್ತಿದ್ರು, ದಿನದ್ಹಾಂಗ ಈಕಿ ಗಂಡನೂ ಹೊರಗಿನಿಂದ ಬಂದು ಹಿತ್ಲಕಟ್ಟಿ ಮ್ಯಾಲ ಮಾರಿ ತೊಳೀತಾ ನಿಂತಿದ್ದಾ. ಈಕಿ ಶಗಣಿ ಪುಟ್ಟಿ ತಲೀಮ್ಯಾಲ ಹೊತ್ಕೊಂಡು ಹೋಗೋವಾಗ ಆಕಿ ತಲ್ಯಾಗ ಏನೋ ಫಳಾಫಳಾ ಹೊಳ್ದಂಗಾತು ಅಂತ ಅಲ್ಲೇ ನೋಡ್ಕೋತ ನಿಂತಾ. ಈಕಿಗೆ ತನ್ನ ಗಂಡ ಯಾಕೊ ಇವತ್ತು ನೋಡ್ತಾನಲ್ಲಾಂತ ಸಂತೋಷ ಆತು. ಮತ್ತೊಂದು ಬುಟ್ಟಿ ಒಯ್ಯೋ



ವಾಗ ಈಕಿ ತಲ್ಯಾಂದ ಎರಡು ಭಂಗಾರದ ಕ್ಯಾದಿಗಿ ಮುಳ್ಳ ಕಿತಗೊಂಡು ಹೋದಾ. ಆಕಿಗೆ ಯಾಕೊ ಕೂದ್ಲಾ ಪೀಕದಂಗತಲ್ಲಾ, ಅನ್ನಿಸ್ತು ಆದ್ರ ಹಿಂಗ ಅಂತ ಗೊತ್ತಾಗ್ಲಿಲ್ಲ. ಅತ್ಲಾಗ ಅವನ ಈಕೀಗೆ ಇದೆಲ್ಲಿ ಸಿಕ್ತು ಅಂತ ಯೋಚ್ನಿ ಸುರುವಾತು ಸಂಶಯ ಹೆಡಿಯಾಡ್ತು. ಈ ದಿನ ರಾತ್ರಿ ನೋಡೇಬಿಡೋಣ ಅಂದು ಹೊರಗ ಹೋಗೋದು ಬಿಟ್ಟು ಗೋದನಿ ಹತ್ರ ಕಾಯಕೋತ ಕೂತಾ.

ಈಕಿ ಇತ್ಲಾಗ ಎಲ್ಲಾ ಬದ್ಕ ಮುಗ್ಸಿ ತಟ್ಟ ಹರಡಕೊಂಡು ಮಲಗಿದ್ಳು. ಸರ್ಯಾಗಿ ಎಲ್ಲಾರೂ ಮಲಗಿದ್ದು ತಿಳಿದು ಸವ್ಕಾರ ಆ ನೆಲಮಾಳಿಗಿ ಬಾಗಲಾ ಸರಿಸಿ ಹಗುರ್ಕ ಮುಚ್ಚಿ ತೆಳಗ ನಡದ್ಳು ಅಲ್ಲೇ ಅಡಗಿ ಕೂತ ಆಕಿ ಗಂಡನೂ ಆ ಬಾಗಲಾ ತಗದು ಸಪ್ಪಳಾಗ್ದಾಂಗ ನಡದಾ. ಆಕಿ ಸೀದಾ ಸವ್ಕಾರನ ಮನಿ ಕೋಣೆಗೆ ಹೋದ್ಳು. ಇವನೂ ಒಂದು ಕಡೆ ಅಡಗಿ ಕೂತಾ.

ಎಥಾ ಪ್ರಕಾರ ಮುದಕವ್ವ ಈಕಿಗೆ ಪನ್ನೀರ ಸ್ನಾನಾ ಮಾಡ್ಸಿ, ಜಡಿ ಹಾಕಿ ಮಲ್ಲಿಗಿ ಹೂವು ಮುಡ್ಸಿ ಭಂಗಾರದ ಒಡವಿ ತೊಡಸಿ, ಭಂಗಾರ ಕ್ಯಾದಿಗಿ ಮುಳ್ಳು ಮುಡಸೋವಾಗ ತಂಗೀ, ಈ ಮುಳ್ಳು ಮೂರ ಅವ ಅಲ್ಲ ಅಂದ್ಳು. ಇಲ್ಲಮ್ಮಾ ನಾನಿನ್ನೆ ಐದೂ ತಗದಿಟ್ಟೇನಿ ಅನ್ನದ್ರಾಗ ತಟ್ಟನ ಏನೋ ಧ್ಯಾನಿಸಿಕೊಂಡ್ಳು. ಹಿಂಗ ಇರಬೇಕಿದು ನಾನು ನಿನ್ನೆ ಅವಸರಕ್ಕ ತಗದಾಗ ಎರಡು ಮುಳ್ಳು ತಲ್ಯಾಗ ಉಳ್ದವಂತ ಕಾಣ್ತದ. ಅದ್ಕ ನನ್ನ ಗಂಡ ಹಂಗ ನೋಡ್ತಾ ನಿಂತದ್ದು. ಬಾಳ ಮಾಡಿ ತಲ್ಯಾಗಿಂದ ಮುಳ್ಳ ಜಗ್ಗದ್ಯಾಗನ ಕೂದ್ಲ ಸುಳ್ಳಂತ ಪೀಕದ್ಹಂಗಾತು. ಆತ ಇನ್ನ ನನ್ನ ಕಥಿ ಮುಗೀತು. ನಾನೇನು ಇನ್ನ ಜೀವ ಸಹ ಉಳ್ಯಾಂಗಿಲ್ಲವ್ವ ಅಂತ ಮುದ್ಕಿ ಇದ್ರಿಗೆ ಹೇಳಿ ದುಃಖ ಮಾಡ್ಲಿಕ್ಕೆ ಹತ್ತಿದ್ಳು. ನಾನಂತೂ ಇನ್ನ ಇಲ್ಲಿಗೆ ಬರಾಂಗಿಲ್ಲ. ಇದ ಕೊನಿ ಅಂತ ಅತ್ಳು.

ಅಷ್ಟೊತ್ತಿಗೆ ಆ ಸವ್ಕಾರ ಮಂಗಾ ಬಂದಾ. ಎಲ್ಲಾ ತಿಳಕೊಂಡು ಹಂಗಾರ ನಾಳ್ನಿಂದ ಈಕಿ ಬರೊಂಗಿಲ್ಲ ಅಂತ ಭಾಳ ವ್ಯಸನಾತು. ನೀನು ಹೆಂಗಾದ್ರೂ ಗಂಡುಳ್ಳಾಕಿ ಹೋಗು. ನಿನಗೇನು ತೊಂದರಿ ಆಗೋದ ಬ್ಯಾಡ. ಇನ್ನ

ನಿನಗಾಗಿ ಮಾಡ್ಸಿದ್ದ ಈ ಒಡವಿ ವಸ್ತ್ರಾ ನಾನೇನ್ಮಾಡ್ಲಿ. ನನ್ನ ಮನಸ್ಸು ನಿನ್ನೊಬ್ಬರ್ನ್ನು ಮತ್ತ್ಯಾರ್ನೂ ನೆನೋದಿಲ್ಲಾ ಅಂದು ಅವ್ನೆಲ್ಲಾ ಬೆಂಕಿಗೆ ಒಯ್ದು ಹಾಕ್ದಾ. ಈಕಿ ದುಃಖದಿಂದ ಇನ್ನು ನನ್ನಗತಿ ಏನೋ ಎಂತೊ ಅಂದ್ಕೊಂಡು ಗೋದನೀ ದಾರೀ ಹಿಡದ್ಲು. ಹಿಂದಿನಿಂದ ಗಂಡನೂ ಬಂದು ಈಕಿಗೇ ಗೊತ್ತಾಗ್ದಂಗ ಹೊರಗ ಹೋದಾ.

ಮಾರ್ನೆ ದಿನಾ ಆತ ಯಾರಿಗೂ ಏನೂ ಹೇಳ್ಲಿಲ್ಲ. ಈಕಿಗೂ ಏನೂ ಅನ್ಲಿಲ್ಲ. ದಿನಾ ಇರ್ಧಂಗಿದ್ದ. ಆದ್ರ ಅವ್ನ ಮನಿಸ್ನಾಗ ಇದು ಕೊರೀಲಿಕ್ಕೆ ಹತ್ತು. ಛೀ, ನಾನಿನ್ನ ಈ ಊರಾಗ ಇರ್ಬಾರ್ದು ತಗಿ. ಎಲ್ಲಾರ ದೂರ ದೇಶಕ್ಕ ಹೋಗಿ ಏನಾರ ದುಡಕೊಂಡು ಇದ್ರಾತು ಅಂತ ಮನಸ್ನಾಗ ಮಾಡಿಕೊಂಡಾ. ಮತ್ತ ಇದನ್ನ ತನಗ ಬಾಳ ಬೇಕಾದಂಥ ಬಂದಜ್ಜಿ ಇದ್ರಿಗೆ ಹೇಳ್ದಾ. ಅದನ್ನ ಅ ಮುದ್ಕಿ ತಿಳಕೊಂಡು ಈ ಹುಡುಗಿನ್ನ ಯಾರಗೂ ತಿಳೀದಂಗ ಕರದು ಹಿಂಗಿಂಗ ನಿನ್ನ ಗಂಡ ನಾಳೆ ಊರ ಬಿಟ್ಟು ಹೋಗ್ತಾನಂತ ನೋಡು. ನೀನೇನ ಮಾಡ್ತಿ ಅಂತು. ಆಗ ಆ ಹುಡ್ಗಿ ಇಲ್ಲಮ್ಮ ನಾನೂ ಅವ್ರ ಕೂಡ ಹೋಗ್ತೇನಿ. ಇಲ್ಲಿದ್ದ ಏನ ಮಾಡ್ಲಿ. ಈ ಅಕ್ಕ ಭಾವಂದ್ರು ನನ್ನ ಗಂಡ ಇದ್ದಾಗನ ಇಷ್ಟ ಮಾಡ್ಯಾರ ಇನ್ನು ನನ್ನ ಗತಿ ಯಾತಕ್ಕೂ ಬ್ಯಾಡಾಗ್ತದ ಅಂದು ಮನೀಗೆ ಹೋದ್ಲು.

ಮಾರ್ನೇದಿನಾ ಎಲ್ಲಾರೂ ಒಳಗ ಊಟಕ್ಕ ಕೂತಿದ್ರು. ಈಕಿ ಗೋದನೀ ಒಳ್ಗ ಕೆಲಸಾ ಮಾಡ್ತಿದ್ಲು. ಅತಾ ಹೊರ್ಗ ಕಟ್ಟಿದ ಕುದುರಿ ಬಿಚಗೊಂಡು ಏರಿ ದೌಡಾಯ್ಸಿ ಓಡಿಸ್ತಾ ಕುದುರಿ ಕಾಲ ಸಪ್ಪಳಾ ಆಗಣಾ ಈ ಹುಡುಗಿ ಸಗಣಿ ಪುಟ್ಟಿ ಒಗದು ಚರಗಿ ತಗೊಂಡು ಹೋಗ್ತೇನಿ ಅಂತ್ಹೇಳಿ ಹೊರಗ ಬಂದು ಆ ಅಜ್ಜಿ ಕೇಳಿದ್ಲು ಆಗ ಆಕಿ ನೀ ದೌಡ ಹೋಗು. ಹಿಂಗ ಈ ದಾರೀಲೆ ಓಡಿಸ್ತಾ ಕುದುರೀ ಅಂತ ಹೇಳಣ. ಚರಗೀ ಆಕಿ ಮುನ್ಯಾಗ ಒಗ್ದು ತಾನೂ ಓಡಿದ್ಲು. ಕುದುರೀ ಓಟಕ್ಕ ಎದ್ದ ಧೂಳಿ ಗುರ್ತಾ ಹಿಡಕೋತ, ಎಡವ್ತಾ ಬೀಳ್ತಾ ಈಕಿನೂ ಓಡಿದ್ಲು. ಎರಡ್ಮೂರ ಮೈಲನಷ್ಟು ಹೋದಮ್ಯಾಲ ಆತ ಇನ್ನೇನು ಅಡ್ಡೀ ಇಲ್ಲಾ ಅಂತ ಹೇಳಿ ಓಟ ಕಡಿಮಿ



ಮಾಡಿ ಹಿಂತಿರುಗಿ ನೋಡ್ದಾ. ದೂರ ತನ್ಹೆಂಡತಿ ಬರೋದ ಕಾಣ್ತು. ಅವಗ ಎಲ್ಲಿಲ್ಲದ ಸಿಟ್ಟು ಬಂದು ಈಕಿ ಕಡೆ ಕಲ್ಲ ಬೀಸಾಡ್ದಾ. ಈಕಿ ಅದನ್ನೆಲ್ಲಾ ತಾಗಿಸ್ಕೋತ, ತಪ್ಪಿಸಿಗೋತ ಮತ್ತ ಬೆನ್ಹತ್ತಿದ್ಳು. ಕಡೀಕೆ ಆತಾ ಸಾಕಾಗಿ ಹಾಳಾದವ್ಳು ಬರವಲ್ಲ್ದು ಅಂತ ಮುಂದ ನಡದ.

ಅಂತೂ ಒಂದ್ಹೊರಿಗೆ ಬಂದು ಒಂದ್ಹಳ್ಳದ್ದಂಡೀ ಮ್ಯಾಲ ನೀರ ಕುಡುದು ದಣಿವು ಆರಿಸಿಕೋತಾ ಕೂತಾ. ಆಗ ಆ ಹೆಂಡತೀನೂ ಅಲ್ಲಿಗೇ ಬಂದು ಉಶಾ ಅಂತ ಕೂತ್ಲು. ಆಗ ಅಲ್ಲೊಂದು ಮುದ್ಕಿ ಬಟ್ಟೇ ಒಗೀತಿತ್ತು. ಆಕಿನ್ನ ಕೇಳ್ದಾ. ಅವ್ವಾ ಈ ಊರಾಗ ಎಲ್ಲಾರ ಒಂದು ಬಾಡಿಗಿ ಮನಿ ಸಿಗ್ತಾವೇನು ಅಂತ. ಅದ್ಕ ಆ ಮುದ್ಕಿ ಹೇಳ್ತು, ಅತ್ಲಾಗಿತ್ಲಾಗ ಯಾಕ ಹುಡಕತೀಯಪ್ಪಾ, ಬೇಕಾರ ನಂದ ಮನೀ ಅದ. ಇರಾಕಿ ನಾನೊಬ್ಬಾಕೀನ. ನನಗೂ ಯಾರೂ ಯಿಲ್ಲಾ, ನಾನೇನು ಬಿಡು ಹಿತ್ಲದಾಗ ಒಂದ ಕ್ವಾಣಾಗ ಇರ್ತೇನ ಬಿಡು. ನೋಡಪ್ಪಾ ನೀನೇನು ಮನೀಗೆ ಬಾಡ್ಗಿ ಬಂಕು ಅಂತ ಏನೂ ಕೊಡೋದ ಬ್ಯಾಡಾ. ದೊಡ್ಡ ಮನಿ ಅದ ಸಾರ್ಸಿ ಬಳದು ಗುಡ್ಸಿ ಛಂದ ಮಾಡ್ಕೊಂಡ ಇದ್ರ ಸಾಕಪ್ಪಾ ಅಂದ್ಲು. ಆತ ಬಿಡಮ್ಮಾ ಹಂಗಾರ ನೀನರ ಬ್ಯಾರೆ ಅಡಗಿ ಯಾಕ ಮಾಡ್ಕೋತೀದಿ. ಒಟ್ಟಾರೆ ಇದ್ದು ಬಿಡೋಣಾ ಅಂದ.

ಹಿಂಗ ಇರ್ತಾ ದಿನಕಳ್ದಂಗ ಆಕಿ ಗಂಡಾ ಅಲ್ಲಿನೂ ಒಂದು ಹೊರಗಡೆ ಸೂಳಿ ಮನಿ ಸುರುವ ಮಾಡ್ದಾ. ದಿನಾ ರಾತ್ರಿ ಹೋಗೋದು ಮುಂಜಾನೆ ಬರೋದು. ಈ ರೀತಿ ಸ್ವಲ್ಪ ದಿನಾ ಕಳ್ಯೋದ್ರಾಗ ಮುದ್ಕಿಗೆ ಯಾಕೋ ಸಂಶಯ ಬಂದು ಒಂದಿನ ಆಕಿನ್ನ ಕೇಳಿದ್ಲು. ತಾಯಿ ನಿನ್ನ ಗಂಡಾ ರಾತ್ರಿ ಏಟೊತ್ತಿಗೆ ಬರ್ತಾನಬೆ. ಒಂದಿನಾನಾರೂ ನಾ ಮಲಗದ್ರಾಗ ಬಂದಿಲ್ಲವ್ವ ಅಂದ್ಳು. ಈಕಿ ಇದ್ದಾಕಿ ಮೊದಮೊದಲು ಹೇಳಿಕ್ಕೆ ಹಿಂಜರದ್ರೂ, ಆ ಮ್ಯಾಲ ಎಲ್ಲಾ ಹೇಳಿದ್ಲು. ದಿನಾ ರಾತ್ರಿ ಹೊರಗ ಹೋಗೋದು ಇದ್ದದ್ದ ನವ್ವ ಹಗಲ್ಹೊತ್ನಾಗ ಕೂಡಾ ನನ್ನಕೂಡ ಮಾತಾಡೋದಿಲ್ಲ. ಊಟಕ್ಕೆ ಕೂತಾಗ ಸಹ ಸಾಕು ಬೇಕು ಅನ್ನೋದಿಲ್ಲ ಅಂತ ಹೇಳಿ ಕಣ್ಣೀರ ತಗದ್ಲು.

ಅದ್ಕ ಆ ಮುದ್ಕಿ ಅಂತು ಹೀಂಗದನs ಅವನ ಸಮಾಚಾರಾ ಹಂಗಾರ ನಾಳೆ ನಾ ಒಂದು ಸಪ್ಪು ತಂದು ಕೊಡ್ತೇನಿ. ಅದರ ಸಾರ ಮಾಡಿ ಹಾಕು. ತಾನs ಮಾತಾಡ್ತಾನ ಅಂದ್ಲು. ಆ ರೀತಿ ಮಾರ್ನೇ ದಿನಾ ಆ ಸೊಪ್ಪಿನ ಸಾರು ಮಾಡಿದ್ಲು. ತಮಗ ದಿನಾನ್ಹಂಗ ಬ್ಯಾರೆ ಮಾಡಿದ್ಲು. ಆತ ಬಂದ ಊಟಕ್ಕ ಕೂತಾಗ ಮರ್ತು ತಮ್ಮ ಸಾರ ಬಡಿಸಿ ಬಿಟ್ಲು. ಮಾತಿಲ್ಲ ಕಥಿ ಯಿಲ್ಲ ದಿನದ್ಹಂಗ ಉಂಡ ಕೈತೊಳೆದ ಹೊರಗ ಹೋದಾ. ಈಕಿಗೆ ಆಮ್ಯಾಲ ನೆನಪಾತು. ಐಯ್ ಆ ಸೊಪ್ಪಿನ ಸಾರು ಹಾಕೋದ ಮರ್ತುಬಿಟ್ನೆಲ್ಲ ಹಾಕಿದ್ರ ಮಾತಾಡ್ತಿದ್ರೊ ಏನೊ ಅಂತ ಬೇಜಾರು ಮಾಡಿಕೊಂಡ್ಲು.

ಅಂದ್ಹಾಗ ಅದ್ರಾಗ ಏನಾರು ಇದ್ದೀತು ಅಂತ ಬಾಯಾಗ ಹಕ್ಕ್ಯಂಡ ನೋಡ್ತಾಳ ಖೈಜಾಲು. ಥೂ ಮುದ್ಕಿ ತಂದು. ಇಂಥಾ ಸಾರು ನನ್ನ ಗಂಡಗ ಹಾಕಬೇಕಂತ ಅಂದು ಇನ್ನ್ಮ ಮುದ್ಕಿ ಕೇಳಿಗೀಳ್ಯಾಳು ಅದ್ಕ್ಯಂಡು ಒಯ್ದು ಧೂರ ಹಿತ್ಲಗ್ವಾಡಿ ದಾಟಿ ಚೆಲ್ಲಿಬಿಟ್ಲು. ಅ ಬಿಸಿಬಿಸಿ ಸಾರು ಹೋಗಿದ್ದನ ಅಲ್ಲೊಂದು ಹುತ್ತದೊಳ್ಗ ಬಿದ್ದಬಿಡ್ತು. ಅ ಹುತ್ತದಾಗ ಒಬ್ಬ ನಾಗಪ್ಪ ವಾಸವಾಗಿದ್ದಾ. ಅವನ ಬೆನ್ನ ಮ್ಯಾಲ ಒಂದು ದೊಡ್ಡ ಕುರಾ ಅಗಿ ತಟ ತಟಾ ಸೇದೋ ನೋವ್ನಿಂದ ನೆಳ್ಳಕೋತ ಮಲಗಿತ್ತು. ಆ ಬಿಸಿಬಿಸಿ ಸಾರ ಬಿದ್ದ ಕೂಡ್ಲೆ ಅದು ಒಡದು ನಾಗಪ್ಪಗ ಹಗೂರ ಆಗ್ಹೋತು.

ಆಗ ಅದು ಸಂತೋಷದಿಂದ ನಿಸೂರಂತ ಹೆಡಿ ಎತ್ಗೊಂಡು ಯಾವ ಪುಣ್ಯಾತ್ಮರಪ್ಪಾ ಇದ್ಕ ಔಷ್ದಿ ಹಾಕ್ದವ್ರು. ಅವ್ರು ಯಾರಾದ್ರೂ ಆಗ್ಲಿ ಮುದುಕ್ರು ಆಗಿದ್ರ ತಂದಿ-ತಾಯಿ ಹಂಗ ನೋಡ್ಕೋತೀನಿ. ಗಂಡಸ ಆಗಿದ್ರ ಗೆಳಕಾರನ್ಹಂಗ ನೋಡ್ತೇನಿ, ಹೆಂಗಸಾಗಿದ್ರ ಅಕ್ಕನ್ಹಂಗ ನೋಡ್ತೇನಿ. ಇನ್ನ ಚಂದುಳ್ಳ ಹೆಂಗ್ಸ ಆಗಿದ್ರ....ಅಂತ ಹೆಡಿ ಇನ್ನೂ ಮ್ಯಾಲ್ಕ ಎತ್ತಿ ನೋಡ್ತು.

ಈಕಿ ಕೈಯಾಗ ಸಾರಿನ ಪಾತ್ರಿ ಹಿಡಕೊಂಡು ತಿರಿಗಿ ಹೊಂಟಿದ್ಲು. ತುಂಬಿದ ಹರೇದಿಂದ ನಾಗರ ಜಡಿ ಓಲಾಡಿಸ್ಕೋತ ಹೊಂಟ ಹುಡ್ಗಿ ನೋಡ್ದಾ. ಹೌದ್ಹಾದು ಆಕಿ ಚಂದುಳ್ಳ ಹೆಂಗ್ಸು. ಆಕಿನ ನನ್ನ ಹೆಂಡ್ತಿ



ಮಾಡ್ಕೋತೀನಿ ಅಂತ್ಹೇಳಿ ಮನಸ್ನಾಗ ಮಾಡಿಕೊಂಡ ಬಿಟ್ಟ ನಾಗ ರಾಜ.

ಮಾರ್ನೇದಿನಾ ರಾತ್ರಿ ಕಾಯ್ಕೋತ ಕೂತಾ. ಆ ಮನಿಂದ ಆಕಿ ಗಂಡಾ ಉಂಡ ಹೊರಗ್ಹೊಂಟಾಗ ನಾಗಪ್ಪಾ ತಲಿದೂಗ್ದಾ. ಆಮ್ಯಾಲ ನಾಕ ಮಾರ ಮುಂದ ಬಂದು ತನ್ನ ಉದ್ದನಿ ದೇಹಾನ ಒಡ್ಡ ಮುರದು ಸಳ್ಳನ ಉದ್ದಕ ಎದ್ದನಿಂತು ಆಕಿ ಗಂಡನ ರೂಪಾ ಧರಿಸಿ ನಿಂತಾ.

ಅಲ್ಲಿಂದ ಸರಾ ಸರಾ ಬಂದವ್ನ ಮೆಲ್ಲಕ ಬಾಗಲಾ ಬಡದಾ. ಒಳ ಗಿದ್ದ ಹೆಂಡತಿ ಮತ್ಯಾಕೊ ನನ್ನ ಗಂಡ ಬಂದ್ನಲ್ಲಾ ಅಂತ ಬಾಗಲಾ ತಗದ ಸರದ ನಿಂತ್ಲು. ಆತ ಸೀದ ಕೋಲಿಗೆ ಹೋಗಿ, ಅಲ್ಯಾಕ ನಿಂತಿ ಹುಚ್ಚಿ ಹಂಗ. ಬಾಬಾ ಹಾಸ್ಗಿ ಉಳ್ದಸು, ನನಗ್ಯಾಕೋ ಬಾಳ ಸಾಕಾ ಗೇದ ಮಲಗತೇನಿ ಅಂದ. ಆಕೀಗೆ ಈ ದಿನದ ತನ್ನ ಗಂಡನ ಚರ್ಯವು ಕಂಡು ಆಶ್ಚರ್ಯ ಆನಂದ ಕೂಡೆ ಆದ್ವು. ಅವತ್ನಿಂದ ವೇಷಧಾರಿ ಗಂಡನ ಕೂಡ ಅಕಿ ಬಾಳೇವು ಸುರುವಾತು. ಆಕೀಗೆ ಕಳದಹೋದ ಭಾಗ್ಯ ಸಿಕ್ಕ್ಯಾಂಗ ಆತು. ದಿನದಿನಕ್ಕ ಗೆಲುವಾದ್ಲು. ಮಾರೀ ಮ್ಯಾಲ ಕಳೇ ಉಕ್ಕಿಹರೀತು. ಆದರ ಆಕೀ ಗಂಡಗ ಇದ್ಯಾವ್ದೂ ಗೊತ್ತಿಲ್ಲ.

ಒಂದಿನಾ ಆಕಿನ್ನ ಮುದ್ಕವ್ವ ಕೇಳ್ತು. ಏನ ತಂಗಿ ನೀನು ನೀರ ಹಕ್ಕ್ಯಂಡು ಎಷ್ಟ ದಿನ ಆತು ಅಂತ. ಅದ್ಕ ಆಕಿ ಎಬೆಎವ್ವಾ ಯಾಕೊ ಮೂರ ತಿಂಗ್ಳಾತು ನೋಡವ್ವಾ ಅಂದ್ಲು. ಆ ಮಾತ ಕೇಳಿ ಮುದ್ಕಿ ಹಿಗ್ಗಲೆ ಹೀರೀಕಾಯಾತು. ತಂಗಿ ಹುಷಾರಿಂದ ಇರ್ಬೇಕ ಇನ್ನ. ನೀ ತಾಯಿ ಆಗಾಕಿದ್ದೀಯವ್ವಾ ಅಂದಾಗ ಈಕಿಗೂ ಸಂತೋಷಾ ಅಂದ್ರ ಸಂತೋಷ. ಕಡೀಗೂ ದೇವ್ರು ನನ್ನ ಬಗ್ಗೆ ಕರುಣಾ ತೋರ್ದಾ. ಬಂಜಿ ಹೆಣ್ಣು ಅಂತ ನನಗ್ಯಾರೂ ಇನ್ನ ಅನ್ನೋಹಂಗಿಲ್ಲ ಅಂತ ದೇವ್ರನ್ನ ನೆನದ್ಲು.

ಮಾರ್ನೇ ದಿನಾ ಮುಂಜಾಲೆ ಆ ಮಗಾ ಮಾರೀತೊಳದ ಒಳಗ ಬರೋದೆ ತಡಾ ಸಂತೋಷದಿಂದ ಅಜ್ಜಿ ಹೇಳ್ತು ತಮ್ಮಾ ನೋಡಪ್ಪಾ ನಿನ್ಹೆಂಡ್ತಿ ಬಸು

**

ರ್ಹಿಂಗಸು ನಿನಗ ತಿಳಿಯಾಣಿಲ್ಲ ಆಕಿ ಬಯಕಿಯಂತೆ ತಿನ್ಲಿಕ್ಕೆ ಹಣ್ಣು ಹಂಪಲಾ ತಂದ ತಂದ ಕೊಡ್ಬೇಕ ಈಗ ತಿಳೀತ ಅಂತ ನಕ್ಕೋತ ಹೇಳ್ತು. ಆ ಮಾತ ಕೇಳಿ ಈತ ದಂಗ ಬಡದ ನಿಂತ ಇದ್ಹಂಗ ? ಇದ್ರಾಗ ಏನೊ ಮೋಸದ ಅಂತ ಮತ್ತ ತನ್ಹೆಣ್ತಿ ಮ್ಯಾಲ ಸಂಶಯ ಸುರುವಾತು. ಪರೀಕ್ಷಾ ಮಾಡೇಬಿಡೋಣ ಅಂತ ಅಂದ ರಾತ್ರಿ ಹೊರಗ ಹೋಗ್ದಂಗ ಮಾಳಿಗಿಮ್ಯಾಲ ಅಡಗಿ ಕೂತಾ.

ಸ್ವಲ್ಪ ಹೊತ್ತಾಗೋಣ ಅವಗ ಹಿತ್ಲ ಕಡೆ ಏನೊ ಸರಾಸರಾ ಅಂತ ಸಪ್ಪಳಾತು. ನೋಡ್ತಾನ ಹಿತ್ಲ ಗ್ವಾಡಿಯಿಂದ ಇಳದ ನಾಗಪ್ಪ ಸಳಾಸಳಾಂತ ಹರದ ಬರೋದ ಕಂಡಾ. ಇವಗ ಹೆದ್ರಕಿ ಆಗಿ ಕೂತಲ್ಲೆ ಚೀರೋ ಹಂಗಾತು. ಆದ್ರೂ ತಾನೊಂದು ಪತ್ತೆ ಹಚ್ಲಿಕ್ಕೆ ಕೂತೇನಿ ಈಗ ಮಿಸಕಾಡಬಾರ್ದು ಅಂದು ಅದನ್ನ ನೋಡ್ಕೋತ ಕೂತಾ. ಅಷ್ಟೊತ್ತಿಗೆ ಆ ಹಾವು ಮಾರಧೂರಾ ಬಂದು ಮೈಯಲ್ಲಾ ಒಡ್ಡ ಮುರದು ತನ್ನ ದೇಹಾಯಲ್ಲ ಶಟಿಸಿ ಸಳ್ಳನ ಉದ್ದಕ ಹೆಡಿ ಎತೆಗೊಂಡು ಎದ್ದ ನಿಂತು ಒಂದಗಳಿಗ್ಯಾಗ ಇವನ್ಹಂಗ ರೂಪ ಧಾರಣಾ ಮಾಡಿಬಿಟ್ಟಾ. ಈತಾ ಕೂತಲ್ಲೆ ಥರಾಥರಾ ನಡಗಲಿಕ್ಕೆ ಹತ್ತಾ. ಆ ಮ್ಯಾಲ ಅದು ಸೀದಾ ಮನೀಗೆ ಬಂತು. ಬಾಗಲಾ ಬಡೀತು. ತನ್ನ ಹೇಣ್ತಿ ಬಂದು ಬಾಗಲಾ ತಗದ್ಲು ಎಥಾ ಪ್ರಕಾರ ಕೋಣೆಗೆ ಹೋಗಿ ಇಬ್ರೂ ನುಪೆ ಪಲ್ಲಂಗದ ಮ್ಯಾಲ ಪವ್ಡಿಸಿದ್ರು. ಈ ವಿಚಿತ್ರಾ ನೋಡಿ ಅವಗ ಕಣ್ಣು ಕತ್ಲ ಬರಂಗಾತು. ಆದ್ರ ಬಾಯ್ಬಿಟ್ಟು ಆಡೋ ಹಂಗಿಲ್ಲ ಅಲ್ಲಿಂದ ಜಾಗಾಬಿಟ್ಟು ಹೊರ್ಗ ನಡದಾ.

ಹೀಂಗ ಸ್ವಲ್ಪ ದಿನಾ ಹೋಗೋಣ. ಆ ಮುಂದ್ಕ ಒಂದಿನಾ ಮುಂಜಾನೆ ಆಕಿ ಗಂಡನ್ನ ಕರದು ಹೇಳಿದ್ಲು ಏನಪ್ಪಾ ತಮ್ಮಾ ನಿನ್ಹೆಂಡತೀಗೆ ಶ್ರೀಮಂತ ಮಾಡಬೇಕಪ್ಪಾ ಚೊಲೋದೊಂದು ಹಸರ ಸೀರಿಕುಬಸಾ ತಗೊಂಡಬಾರಪಾ ಅಂದ್ಲು. ಆಗ್ಲಮ್ಮಾ ರಾತ್ರಿ ಹೇಳ್ತೇನಂತ ಅಂದ. ರಾತ್ರಿಯಾಗೋಣ ಅವಗ ಮತ್ತ ನೆನಪ ಮಾಡೋಣ ಅಂದು ಮಂಚದ ಮ್ಯಾಲಕೂತ ಆಕಿ ಗಂಡ (ನಾಗಪ್ಪ)ಗ ಸೀರಿ ತಂದೆನಪ್ಪಾ ರಾತ್ರಿ ತರ್ತೇನಂದಿದ್ದಿ ಅಂದ್ಲು ಕೂಡ್ಲೆ ನಾಗಪ್ಪ ಮನಸ್ನಾಗ ತೂಗಿ ನೋಡ್ದಾ ಅರ್ಥಾತು. ಆತಮ್ಮಾ ನಾಳೆ ತರ್ತೇನಿ



ಅಂದಾ. ಅವತ್ತು ಪಾತಾಳಕ್ಕೋಗಿ ಹಸೂರ ಮಲೆಂಥಾ ಬಣ್ಣದ ಸೀರಿ ಸೆರಿಗ್ಗೆ ಅಂಚಿಗೆ ಮುತ್ತು ರತ್ನದ ಗೊಂಚಲಾ ಕಟ್ಟಿದ್ದ ಜರತಾರಿ ಪೀತಾಂಬರಾ ತಂದಾ. ಮಾರ್ನೆದಿನಾ ಮುಂಜಾನೆ ಆಕಿ ಗಂಡ ಆ ಸೀರಿ ನೋಡ್ದಾ ತಾನೂ ಒಂದು ಹಸರ ಸೀರಿ ಕುಬಸಾ ತಂದಾ. ಅದ್ಕ ಆ ಮುದ್ಕಿ ಅಯ್ ತಮ್ಮಾ ನಿನ್ನಿನ್ನೂ ಎಂಥಾ ಚಲೋ ಸೀರಿ ತಂದೀಯಪ್ಪಾ ಈಗ ಮತ್ಯಾಕ ತಂದಿ ಅಂದ್ಲು ಇರ್ಲಿ ಬಿಡಮ್ಮಾ ಇದೇನಪ್ಪು ಚಲೋಸೀರಲ್ಲಾ ಇದನ್ನ ದಿನಾ ಉಟಗೋಳಿ. ಅದನ್ನ ಹಬ್ಬ ಹುಣಿವ್ಯಾಗ ಉಡವಲ್ಯಾಕ ಅಂದ.

ಮುಂದ ಒಂದ ಛಲೋ ದಿನದಾಗ ಆಕಿ ಗಂಡ ಹುಡುಗನ್ನ ಹಡದ್ಲು. ಲಕ್ಷಣವಾದಂಥ ರಾಜ ಕಳೆದ ಹುಡಗನ್ನ ನೋಡಿ ಎಲ್ಲರೂ ಆನಂದಪಡ್ತಿದ್ರು. ಕೂಸಿನ್ನ ತೊಟ್ಲಿಗೆ ಹಾಕೋ ದಿನ ಬಂತು. ಕೂಸಿಗೆ ಒಳ್ಳೆ ಅಂಗಿ ಟೊಪಿಗಿ ಒಡವಿ ವಸ್ತ್ರಾ ಬೇಕ ಅಂದ್ಲು ಅಜ್ಜಿ ಆತಬೆ ರಾತ್ರಿಯಷ್ಟೊತ್ಗೆ ಹೇಳ್ತೇನಿ ಅಂದ. ಆದೇನಪ್ಪ ಹೇಳಿದ ಕೂಡ್ಲೆ ಸಾಮಾನ ತರೋದೆ ಇಲ್ಲ ಇಗ ಹೇಳಿದ್ರ ರಾತ್ರಿಗೆ ಅಂತಿ ರಾತ್ರಿ ಕೇಳಿದ್ರ ನಾಳೆ ರಾತ್ರಿ ತರ್ತೇನಿ ಅಂತಿ. ಬಾಳ ದಿನಕ್ಕ ಬಂಗಾರದಂಥ ಕೂಸು ಹುಟ್ಟೇದ. ಸ್ವಲ್ಪಾದ್ರೂ ಆಸ್ತಿ ಅಖ್ರುತಾನ ಇಲ್ಲಪ್ಪ ಅಂತ ಗೊಣಗ್ತಾ ಹೋತು. ರಾತ್ರಿ ಕ್ವಾಣ್ಯಾಗ ಮಗನ್ಹತ್ರ ಕೂತಗೊಂಡ ಆಕಿ ಗಂಡ (ನಾಗಪ್ಪ)ಗ ಅಜ್ಜಿ ಬಂದು ನೆನಪ ಮಾಡಿದ್ಲು ಕೂಸಿನ ಸಾಮಾನ ತಂದೆನಪ್ಪಾ ಅಂತ. ಆಗ ಅವ ಮತ್ತ ಯೋಚ್ನಿ ಮಾಡಿ ಹಾಂ ಹಾಂ ಏನೇನ ತರಬೇಕಮ್ಮಾ ನಾಳೆ ರಾತ್ರಿ ತರ್ತೇನಿ ಅಂದಾಗ ಸರಿ ಮುಂಜಾನೆ ಹೇಳಿದ್ದು ನೆನಪಽ ಇಲ್ಲಪ್ಪಾ. ಅದೇ ಗುಂಡು ಬಿಂದ್ಲಿ ಉಂಗ್ರಾ ಉಡುದಾರಃ ಅಂಗಿ ಟೊಪಿಗಿ ತೊಟ್ಲಾ ಬಟ್ಲಾ ಒಂದಽ ಎರಡಽ ಇಷ್ಟ ದಿನಕ್ಕ ಮುದ್ದಾದ ಮಗಾ ಹುಟ್ಯಾನ ಅಂದ್ರೇನು ನೀನು ಹಿಂಗ ಮುಂಜಾನೆ ಸಂಜೆ ಅಂತಿಯೇನು ಅಂತಾ ಸಿಟ್ಟು ಮಾಡ್ತು. ನಾಗಪ್ಪಾ ಮನದಾಗ ನಕ್ಕಾ. ಮಾರನ್ನೆದಿನಾ ರಾತ್ರಿ ಕೂಸಿನ ಉಡಿಗಿ ತೊಡಗಿ ಬಂದ್ವು. ಆ ಮ್ಯಾಲ ಗಂಡ ಅಂಬೋನು ತಂದ.

ಒಂದಿನಾ ಕೂಸು ಬಾಣಂತಿನ್ನ ಗುಡಿಗೆ ಕರಕೊಂಡು ಹೋದ್ರು. ಆಗ ನಾಗಪ್ಪ ತಂದ ಗೆಜ್ಜೆ ಹಚ್ಚಿದ ಹಸರ ಸೀರಿ ಉಟ್ಟಿದ್ಲು. ಅದೆ ವ್ಯಾಳ್ಯಾಕ

ಅಲ್ಲೇ ಆಕೀ ಗಂಡನ ಸೂಳಿ ಅಂಬಾಕೀನು ಬಂದಿರಬೇಕ ಇಕಿ ಸೀರಿ ನೋಡೇ ನೋಡಿದ್ಲು. ತನ್ಹೆಣ್ತಿಗೆ ಇಂಥಾ ಭಾರಿ ಸೀರಿ ತಂದಕೊಟ್ಟಾನ ಬರ್ಲಿ ಇವತ್ತ ನಾನೂ ಇಂಥಾದ ತರ್ಸಿಗೋಳ್ದ ಬಿಡಾಕಿಲ್ಲ ಅಂತ ಮನ್ಸಾಗ ಕುದುಕೋತ ಹೋದ್ಲು.

ರಾತ್ರಿ ಆತ ಈಕಿ ಮನಿಗೆ ಬಂದಾಗ ನನಗೂ ಅಂಥಾಸೀರಿಬೇಕು ನೋಡು ಅಂದ್ಲು. ಅದು ಅವರ ತವರ್ನವರು ಕೊಟ್ಟದ್ದು ಅಂದಾ ಆತ. ಹಂಗಾರ ನನಗ ಒಂದ್ಸಾತಸರ ಉಟಗೊಂಡ ಕೊಡ್ತೇನಿ ನನಗ ಭಾಳ ಆಶಾ ಆಗೇದ. ನಿನ್ಹೇಣ್ತಿ ಸಂತೆ ಕೊಡ್ಸು ಅಂದಳು ಆತ ರಾತ್ರಿ ಬಂದ ಕೇಳು ಅಂದ. ಆ ಪ್ರಕಾರ ಅಂದ ರಾತ್ರಿ ಅವನ ಮನೀಗೆ ಹೋದ್ಲು. ಆತಾ (ನಾಗಪ್ಪಾ) ಮಂಚದ ಮ್ಯಾಲ ಕೂತಿದ್ದಾ ಈಕಿಗೆ ಆತಾ ತನ್ನ ಮನೀಗ ಬರೋವ್ನ ಅಂತತಿಳುದು ಕರೀನಿನ್ಹೆಣ್ತಿ ಆ ಹಸರಸೀರಿ ಕೊಡ್ಸ ಉಟಗೊಂಡ ಚಂದಾನೋಡಿ ಕೊಟ್ಟ ಬಿಡ್ತೇನಿ ಅಂದ್ಲು. ಆವಾಗ (ನಾಗಪ್ಪಾ) ಆತ ಮನ್ಸಾಗ ಲೆಕ್ಕಾಹಾಕಿ ಆತ ಕೊಡ್ಸತೇನಿ ಆದ್ರ, ಅದ್ರಾಗದು ಒಂದು ಮುತ್ತು ರತ್ನಾಕೂಡಾ ಸರೀಬಾರ್ದ ನೋಡ ಹಂಗೇನಾರ ಆತಂದ್ರ ನೀನು ಈ ಮನೀಗೆ ಬಂದು ನನ್ಹೆಂಡ್ತಿದಾಸಿಯಾಗಿ ಕೆಲಸಾಮಾಡ್ಕೋತ ಇರ್ಬೇಕಾಗ್ತದ ಅಂದ ಆತ. ಹಂಗ ಆಗ್ಲಿ ಅಂತ ಹೇಳಿ ಆ ಸೀರಿ ಒಯ್ದು ಮಡಕಿಬಿಚ್ಚಿ ಉಡಬೇಕು ಅಂತ ನೋಡ್ತಾಳ ಸೀರೆಲ್ಲ ಪದರ ಪದರಾಗಿ ಕೈಯಾಗ ಬಂದ್ವು. ಮುತ್ತುರತ್ನಾ ಉದುರಿಉದಿರಿ ಬಿದ್ವು. ಆಕಿ ಗಾಬರಿ ಆದ್ಲು.

ಇನ್ನೇನು ಹೇಳಿದ ಪ್ರಕಾರ ಇವ್ರಮನೀಗೆ ಬಂದು ದಾಸಿಯಾಗಿ ಚಾಕರಿ ಮಾಡ್ಲಿಕ್ಕೆ ಹತ್ತಿದ್ಲು. ಇಲ್ಲೆ ಇರ್ಲಿಕ್ಕೆ ಹತ್ತಿದ್ಲು ಆಮ್ಯಾಲ ಆಕಿ ಗಂಡ ಇನ್ನೇನು ಮಾಡ್ಬೇಕು ಅಂತ್ಹೇಳಿ ಘಟ್ಟಿಧೈರ್ಯಮಾಡಿ ತನ್ಹೆಣ್ತಿ ಕ್ವಾಣಾಗ ಬಂದ ಮಲಿಗಿದಾ. ತನ್ನಪ್ರಾಣಾ ಇನ್ನ ಉಳೋದಿಲ್ಲಂತ ಆತಗ ಗೊತ್ತಾಗ್ಹೋತು.

ದಿನದಂಗ ನಾಗಪ್ಪ ಬಂದು ಹೊರಗನಿಂತು ಸಪ್ಪಾಳ ಬಾಗಲಾ ಬಡದಾ. ಈಕಿಹೆಂಡತಿ ಅನ್ನೋಕಿ ನಿಶ್ಚಿಂತಿಂದ ಮಲಗಿಬಿಟ್ಟಿದ್ಲು ನಾಗಪ್ಪ ಎಲ್ಲಾ ತಿಳೀತು ಸೂಕ್ಷ್ಮ ರೂಪಾತಾಳಿ ಮ್ಯಾಲ ಬೆಳಕಿಂಡ್ಯಾಗಿಂದ ಇಳದ ಬಂದ. ಆಕಿ ಗಂಡನ



ಮಗ್ಗಲ್ದಾಗ ಕೂಸಿನ್ನ ಹಕ್ಕೊಂಡು ಮಲಿಗ್ಯಾಳ. ಅವಗ ಭಾಳಸಿಟ್ಟ ಬಂತು ವಿಷಾ ಏರ್ಲಿಕ್ಕೆ ಹತ್ತು ಆದ್ರ ಯಾರ್ನ ಕಡದು ಕೊಲ್ಲಬೇಕು ಅಂತಾ ವಿಚಾರಾ ಮಾಡ್ದಾ ಆಕಿ ಗಂಡನ್ನ ಕೊಂದ್ರ ಆಕಿ ವಿಧವಿ ಆಗ್ತಾಳ ಆಕಿನ್ನಕೊಂದ್ರ ತನ್ನ ಮಗನಿಗೆ ತಾಯಿ ಇಲ್ದಂಗ ಆಗ್ತದ. ಅಲ್ದ ನಾನು ಇಷ್ಟದಿನ ಆಕಿಕೂಡ ಸುಖಾ ಕಂಡೇನಿ. ಇನ್ನ ನನ್ನ ಆ ಮಗನ್ನ ಕೊಲ್ಲೋದಂತೂ ನನಗ ಸಾಧ್ಯನಯಿಲ್ಲ. ಹುಂ ಯಾರನೂ ಕೊಲ್ಲೋದು ಬ್ಯಾಡಾ ಹೆಂಗೂ ಇನ್ನ ಇವರು ಗಂಡಾ ಹೇಣ್ತಿ ಸುಖವಾಗಿರ್ತಾರ ಆಕಿಕೂಡ ನನ್ನ ರಿಣಾ ಇಷ್ಟ ಇತ್ತು ಎಂದು ಅವರಿಗೆಲ್ಲಾ ಹರಿಸಿ ಒಂದು ರತ್ನದ ಹಳ್ಳು ಆ ಕೂಸಿನ ತಲೀ ಮ್ಯಾಲಿಟ್ಟು ಅಡವಿಗೆ ಹೋಗಿಬಿಟ್ತು ಆಮ್ಯಾಲ ಮುಂಜಾನೆ ಎದ್ದು ಕೂಸಿನ ತಲೀಹತ್ರ ರತ್ನದ ಹಳ್ಳ ನೋಡಿ ಇದನ್ಯಾಕ ಹಿಂಗ ಇಟ್ಟೇರಿ ಎಲ್ಲಿತ್ತು ಇದು ಅಂತ ಗಂಡನ್ನ ಕೇಳಿದ್ಲು.

ಆವಾಗ ಅವನೂ ಸ್ವಲ್ಪ ಹೊತ್ತು ಯೋಚ್ನಿ ಮಾಡ್ದಾ ಖರೆ ಅದು ನಾಗರತ್ನಾ ಅನ್ಸಿತು. ಇನ್ನ ಈ ನಾಗಪ್ಪನ ವಿಷಯು ತನಗೊಬ್ಬನಿಗೇ ಗೊತ್ತು. ಇದ್ನಹೇಳೋದ ಬೇಡ. ಈಗ ನಮ್ಮೆಲ್ಲಾರ್ನೂ ಜೀವಸಹಿತ ಬಿಟ್ಟಾನ ಇದೆಲ್ಲ ಅವನ ಅನುಗ್ರಹ ಅಂತ ತಿಳದು, ಹೇಣ್ತಿಗೆ ಹೇಳ್ದಾ. ಈ ಮಗಾ ದೇವರ ದಯುದಿಂದ ಹುಟ್ಯಾನ ಇದು ಅವನ ಆಶೀರ್ವಾದಾ ಅಂತ ಹೇಳಿ ಮುಂದ ತನ್ನ ಹೇಣ್ತಿಕೂಡ ಸಕಲ ಸಂಪತ್ನಿಂದ ಕೂಡಿಕೊಂಡು ಸುಖವಾಗಿ ಸಂಸಾರಾ ಮಾಡಿಕೊಂಡಿದ್ನಂತ ಅಂಬಲ್ಗ ಈ ಕಥಿ ಮುಗೀತು.

# ವಕ್ತೃ ವಿವರ

| | ಕಥೆ | ಹೇಳಿದವರು |
|---|---|---|
| 1. | ಅಣ್ಣ-ತಂಗಿ-ಅತ್ತೆ | ದ್ಯಾಮವ್ವ<br>ವಯಸ್ಸು: 45<br>ವಿಳಾಸ: c/o ರಂಗಪ್ಪ, ಮರಸು ಹೊಸಹಳ್ಳಿ<br>ಆಲೂರು ತಾ॥, ಹಾಸನ ಜಿಲ್ಲೆ |
| 2. | ದೇವೇಂದ್ರ ಲೋಕದ ದೇವಕನ್ಯೆ | — |
| 3. | ಕೆಪ್ಪರ ಎರಡು ಕತೆಗಳು | ಕೆ. ಸಿದ್ಧಲಿಂಗಪ್ಪ<br>ವಯಸ್ಸು: 81<br>ಕತ್ತಿಗಿ, ಹೊನ್ನಾಳಿ ತಾ॥, ಶಿವಮೊಗ್ಗ ಜಿಲ್ಲೆ |
| 4. | ತೊಡೆ ಮ್ಯಾಲೆ ಗಂಡ ತೊಳು ಮ್ಯಾಲೆ ಮಿಂಡ | ಶ್ರೀಕಂಠಯ್ಯ<br>ವಯಸ್ಸು : 30<br>ರಾಮನಾಥಪುರ |
| 5. | ಸಾವಿರದ ಬುದ್ಧಿ | ಸಿದ್ಧಶೆಟ್ಟಿ<br>ವಯಸ್ಸು: 62<br>ಬೆಟ್ಟದ ಬೀಡು, ಮೈಸೂರು ಜಿಲ್ಲೆ |
| 6. | ಕಿಲಾಡಿ ಭಾವ | ಚಂದ್ರಪ್ಪ, ವಯಸ್ಸು: 45<br>ಪಕ್ಕಲ್‌ವಾಡ, ಬೀದರ್ ತಾಲ್ಲೂಕು |
| 7. | ಸ್ವರ್ಗಕ್ಕೆ ಸವಾರಿ | ದಿ॥ ಶ್ರೀನಿವಾಸ ಕಂಗಿನ್ನಾಯ |
| 8. | ಕೆದ್ಗ ರಾಯ್ನ ಸೊಸೆ | ಗಿಳಿಯೂರ ರಾಮಜ್ಜ |
| 9. | ಕತ್ತೆ, ಹುಲಿ ಮತ್ತು ಮನುಷ್ಯ | ಕರಿಕಿಹಳ್ಳಿ ಚನ್ನಬಸಮ್ಮ<br>ವಯಸ್ಸು: 60, ವೀರಶೈವ ಖಾನಾವಳಿ,<br>ಹಗರಿಬೊಮ್ಮನಹಳ್ಳಿ ಅಂಚೆ, ಬಳ್ಳಾರಿ ಜಿಲ್ಲೆ |
| 10. | ಏಳು ಮಂದಿ ರಾಜಕುಮಾರಿಯರು ಮತ್ತು ಅರಶಿನದ ಗಡ್ಡೆಯ ಕತೆ | ನಿರ್ಬೈಲು ರಾಧಮ್ಮ<br>ವಯಸ್ಸು: 54<br>ನಿರ್ಬೈಲು, ಮಂಚಿ ಗ್ರಾಮ, ದ. ಕ. |
| 11. | ಬುಡ್ಡನ ಕಥೆ | ಮನೋಹರ ಮಾಣಿಕರಾವ್ ಜೋಷಿ<br>ವಯಸ್ಸು: 30<br>ಸಲಗರ, ಆಳಂದ ತಾ॥, ಕಲಬುರ್ಗಿ ಜಿಲ್ಲೆ |
| 12. | ಅಪ್ಪಗ ತಕ್ಕ ಮಗ | " |
| 13. | ಮೈಗಳ್ಳ ಮೋಸಗಾರರು | ಅಂಬಾರಾಮ ಗುರಲಿಂಗಪ್ಪ ಬಿರಬಿಟ್ಟೆ<br>ವಯಸ್ಸು: 20<br>ಸಲಗರ, ಆಳಂದ ತಾ॥<br>ಕಲಬುರ್ಗಿ ಜಿಲ್ಲೆ |
| 14. | ಪಂಚಲೋಹದ ಕುದುರೆ | ಶ್ರೀಮತಿ ಗಿರಿಜಾಬಾಯಿ,<br>ವಯಸ್ಸು: 85<br>ನಾಗನೂರು, ದಾವಣಗೆರೆ ತಾ॥ |
| 15. | ದೇವರು ಇದ್ದಾನ | — |
| 16. | ನಾಗರತ್ನ | — |

# ಸಂಗ್ರಾಹಕರ ವಿವರ

| ಹೆಸರು | ಸಂಗ್ರಹಿಸಿ ಕೊಟ್ಟ ಕತೆಗಳು |
|---|---|
| 1. ಶ್ರೀಮಂತಿ ಇಂದಿರಾ ಹಾಲಂಬಿ | ಸ್ವರ್ಗಕ್ಕೆ ಸವಾರಿ |
| 2. ಶ್ರೀ ಎಂ. ಜಿ. ಈಶ್ವರಪ್ಪ | ಪಂಚಲೋಹದ ಕುದುರೆ |
| 3. ದೊಡ್ಡ ಅಶ್ವತ್ಥ ನಾರಾಯಣಸ್ವಾಮಿ | ತೊಡೆ ಮ್ಯಾಲೆ ಗಂಡ ತೋಳು ಮ್ಯಾಲೆ ಮಿಂಡ |
| 4. ಶ್ರೀ ರಾಜೇಗೌಡ | ಅಣ್ಣ-ತಂಗಿ-ಅತ್ಗೆ |
| 5. ಶ್ರೀ ಪಿ. ರಾಮಕೃಷ್ಣ ಆಚಾರ್ | ದೇವೇಂದ್ರ ಲೋಕದ ದೇವಕನ್ಯೆ |
| 6. ಡಾ|| ಪಿ.ಕೆ. ರಾಜಶೇಖರ | ಸಾವಿರದ ಬುದ್ಧಿ |
| 7. ಶ್ರೀಮಂತಿ ಲೀಲಾ ಆರ್. ಕುಲಕರ್ಣಿ | 1. ದೇವರು ಇದ್ದಾನ<br>2. ನಾಗರತ್ನ |
| 8. ಕುಮಾರಿ ಪಾರಿಜಾ ದೇವಿಯರ್ | ಏಳು ಮಂದಿ ರಾಜಕುಮಾರಿಯರು ಮತ್ತು ಅರಸಿನದ ಗಡ್ಡೆಯ ಕತೆ |
| 9. ಶ್ರೀ ವೀರಣ್ಣ ದಂಡೆ | 1. ಬುಡ್ಡನ ಕಥೆ<br>2. [illegible]ಅಪ್ಪಗ ತಕ್ಕ ಮಂಗ<br>3. [illegible]ೈಗಳ್ಳ ಮೋಸಗಾರರು |
| 10. ಹೆಚ್.ಎಸ್. ಸಿದ್ಧಗಂಗಪ್ಪ | ಕಿಲಾಡಿ ಭಾವ |
| 11. ಜೀನಹಳ್ಳಿ ಸಿದ್ಧಲಿಂಗಪ್ಪ | ಕೆಪ್ಪರ ಎರಡು ಕತೆಗಳು |
| 12. ಶಾಂತಿನಾಯಕ | ಕೆದ್ಗ ರಾಯ್ನ ಸೊಸೆ |
| 13. ಶ್ರೀ ಹುರುಕಡ್ಲಿ ಶಿವಕುಮಾರ | ಕತ್ತೆ, ಹುಲಿ ಮತ್ತು ಮನುಷ್ಯ |

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಚಟುವಟಿಕೆಗಳಲ್ಲಿ ಗ್ರಂಥ ಪ್ರಕಟಣೆಯ ಯೋಜನೆಯನ್ನೂ ಹಮ್ಮಿಕೊಂಡು ಈಗಾಗಲೇ ಮೂರು ಕೃತಿಗಳನ್ನು ಹೊರತರಲಾಗಿದೆ. 'ಪಂಚಲೋಹದ ಕುದುರೆ' ಅಕಾಡೆಮಿ ಪ್ರಕಟಿಸುತ್ತಿರುವ ನಾಲ್ಕನೆಯ ಕೃತಿ. ಜನಪ್ರಿಯ ಮಾಲೆಯ ಈ ಕೃತಿಗಳನ್ನು ಪ್ರಕಟಿಸುವಲ್ಲಿ ವಿಶಿಷ್ಟ ಉದ್ದೇಶಗಳನ್ನು ಇಟ್ಟುಕೊಳ್ಳಲಾಗಿದೆ. ಇದು ಸುಲಭ ಬೆಲೆಯಲ್ಲಿ ಓದುಗರಿಗೆ ಲಭ್ಯವಾಗಬೇಕು ; ಆಸಕ್ತಿಯನ್ನು ಕೆರಳಿಸುವಂಥ ಜನಪದ ಸಾಹಿತ್ಯ ಪ್ರಕಾರವನ್ನೊಳಗೊಂಡಿರಬೇಕು ; ಸಾಧ್ಯವಾದ ಮಟ್ಟಿಗೂ ಕರ್ನಾಟಕದ ಎಲ್ಲ ಭಾಗಗಳ ಸಾಹಿತ್ಯವನ್ನೂ ಒಳಗೊಂಡಿರಬೇಕು ; ಆಕರ್ಷಕ ಮುಖಪುಟದೊಡನೆ ಹೊರಬರಬೇಕು—ಮುಂತಾದ ಈ ಉದ್ದೇಶಗಳ ಹಿನ್ನೆಲೆಯಲ್ಲಿ ಈ ಕೃತಿಗಳು ಹೆಚ್ಚು ಜನರನ್ನು ಮುಟ್ಟಲು ಸಾಧ್ಯವಾಗುವಂತೆ 5000 ಪ್ರತಿಗಳನ್ನು ಅಚ್ಚು ಹಾಕಿಸಲಾಗುತ್ತಿದೆ. ಒಂದೊಂದು ಕೃತಿಯೂ ಒಂದೊಂದು ಜನಪದ ಸಾಹಿತ್ಯ ಪ್ರಕಾರವನ್ನು ಪ್ರತಿನಿಧಿಸುವಂತೆ ನೋಡಿಕೊಳ್ಳಲಾಗಿದೆ. ಜನಪದ ಗೀತೆ, ಶಿಶುಪ್ರಾಸ, ಗಾದೆಗಳಿಗೆ ಸಂಬಂಧಪಟ್ಟಂತೆ ಮೂರು ಕೃತಿಗಳನ್ನು ಪ್ರಕಟಿಸಿದ ಮೇಲೆ ಈ ವರ್ಷ 'ಜನಪದ ಕಥೆ'ಗಳಿಗೆ ಸಂಬಂಧಪಟ್ಟ ಈ ಕಿರುಹೊತ್ತಿಗೆಯನ್ನು ಹೊರತರಲಾಗುತ್ತಿದೆ.